ಉಚಿತ ಪುಸ್ತಕ




# ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೬

# ಸಮ್ಮಿಶ್ರ ಕಥನ ಗೀತೆಗಳು

ಸಂಪಾದಕರು: **ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್**



ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಉಚಿತ ಪುಸ್ತಕ

## ಡಾ|| ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೬

# ಸಮ್ಮಿಶ್ರ ಕಥನ ಗೀತೆಗಳು

**ಸಂಪಾದಿಸಿದವರು**

ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಿದ್ದು, ಸಾಫ್ಟ್ ಪ್ರತಿಗಳನ್ನು **freebookculture.riverthoughts.com** ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.

*This book is published as part of `Mitramaadhyama' Trust's campaign FREE BOOK CULTURE; people who wish to have their own copy can download it from freebookculture.riverthoughts.com*

# ಸಮ್ಮಿಶ್ರ ಕಥನ ಗೀತೆಗಳು

# Sammishra Katha Geetegalu

ಸಂಗ್ರಹಕಾರರು
ಡಾ॥ ಎಲ್ ಆರ್ ಹೆಗಡೆ

COLLECTED BY
**Dr. L R Hegde**

ಸಂಪಾದಕರು
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

EDITED BY
**Smt. Renuka Ramakrishna Bhat**

ಇ - ಪ್ರಕಟಣೆ
**ಮಿತ್ರಮಾಧ್ಯಮ**
ಬೆಂಗಳೂರು

E-PUBLICATION BY
**MITRAMAADHYAMA**
Bangalore

ಮೊದಲ ಇ-ಪ್ರಕಟಣೆ : ನವೆಂಬರ್ ೨೦೨೨
ಆಕಾರ: ೧/೮ ಡೆಮಿ
ಪುಟಗಳು: ೧೭೬+೪

First E-Edition: November 2022
Size: 1/8 Demy
Pages: 176+4

ಈ ಪುಸ್ತಕದ ಉಚಿತ ಅಕ್ಷರ ಜೋಡಣೆ ಮಾಡಿ ಸಹಕರಿಸಿದವರು
**ಶ್ರೀ ರುದ್ರೇಶ್ವರ ರಾಮನಗರ**

**ಮುಖಪುಟ ರಚನೆ:** ಪ್ರಭಾಕರ್
**ಪುಸ್ತಕ ವಿನ್ಯಾಸ :** ಎಂ ಆರ್ ಗುರುಪ್ರಸಾದ್

**This work is licensed under a Creative Commons Attribution-Non Commercial-NoDerivatives 4.0 International License.**

**ಈ ಪುಸ್ತಕವು ಕ್ರಿಯೇಟಿವ್ ಕಾಮನ್ಸ್ ಹಕ್ಕುಪದ್ಧತಿಯಲ್ಲಿ 4.0 ಅಂತಾರಾಷ್ಟ್ರೀಯ ಪರವಾನಗಿಯನ್ನು ಹೊಂದಿದ್ದು ಇದನ್ನು ಯಥಾವತ್ತಾಗಿ ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸುವುದಕ್ಕೆ ಅನುಮತಿ ಇರುತ್ತದೆ.**

# ಪ್ರಕಾಶಕರ ಮಾತು

ಸುಮಾರು ನಾಲ್ಕೂವರೆ ವರ್ಷಗಳ ಹಿಂದೆ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ ಅವರು ನನಗೆ ಕರೆ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ನಾನು ಭಾರತವಾಣಿ ಬಹುಭಾಷಾ ಜ್ಞಾನಕೋಶ ಯೋಜನೆಯಲ್ಲಿ ಇರುವುದನ್ನು ತಿಳಿದುಕೊಂಡಿದ್ದ ಅವರು ತಮ್ಮ ತಂದೆ ದಿ. ಎಲ್ ಆರ್ ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಹಸ್ತಪ್ರತಿಗಳನ್ನು ಗಮನಿಸಬಹುದೇ ಎಂದು ಕೇಳಿದರು.

ನಾನು ೧೯೯೦-೯೨ರ ಅವಧಿಯಲ್ಲಿ ಶಿರಸಿಯಲ್ಲಿದ್ದಾಗ ಒಂದೆರಡು ಸಲ ಶ್ರೀ ಎಲ್ ಆರ್ ಹೆಗಡೆಯವರನ್ನು ಬಸ್ ನಿಲ್ದಾಣದಲ್ಲಿ ಕಂಡಿದ್ದೆ. ಮಾತನಾಡಿಸಲು ಧೈರ್ಯ ಇರದವನಾಗಿದ್ದೆ. ಈಗ ಅವರ ಅಪ್ರಕಟಿತ ಸಂಗ್ರಹವೇ ಇದೆ ಎಂದು ತಿಳಿದಾಗ ಕುತೂಹಲ ಹೆಚ್ಚಾಯಿತು. ಶ್ರೀಮತಿ ರೇಣುಕಾ ಭಟ್ ಅವರ ಮನೆಗೇ ಹೋದೆ. ಅಲ್ಲಿರುವ ಅಪಾರ ಸಂಗ್ರಹವನ್ನು ನೋಡಿ ಅಚ್ಚರಿಯಾಯಿತು. ಅದಾಗಲೇ ಶ್ರೀ ಎಲ್ ಆರ್ ಹೆಗಡೆಯವರು ೮೪ ಪುಸ್ತಕಗಳನ್ನು ಪ್ರಕಟಿಸಿದ್ದವರು. ಆದರೂ ಇಷ್ಟೆಲ್ಲ ಉಳಿದುಕೊಂಡಿದ್ದವು!

ಈಗ ಅವುಗಳಲ್ಲಿ ಆಯ್ದ ಸಂಗ್ರಹಗಳನ್ನು ಒಂದು ಸರಣಿಯಾಗಿ, ಮುಕ್ತ ಮಾಹಿತಿಯಾಗಿ ಪ್ರಕಟಿಸಲಾಗಿದೆ. ಇದನ್ನು ಕ್ರಿಯೇಟಿವ್ ಕಾಮನ್ಸ್ ಹಕ್ಕಿನಡಿಯಲ್ಲಿ ಪ್ರಕಟಿಸಿರುವುದರಿಂದ ಇವುಗಳ ಮುದ್ರಿತ ಪ್ರತಿಗಳನ್ನು ಯಾವುದೇ ಆಸಕ್ತರು ಯಾವ ಅನುಮತಿಯೂ ಇಲ್ಲದೆ, ಇದ್ದ ಹಾಗೆಯೇ ಮುದ್ರಿಸಬಹುದು!

**ಆನ್‌ಲೈನ್‌ನಲ್ಲಿ ಕೇಂದ್ರ ಸರ್ಕಾರದ `ಭಾರತವಾಣಿ' ಯೋಜನೆ, ರಾಜ್ಯ ಸರ್ಕಾರದ `ಕಣಜ' ಯೋಜನೆಗೆ, ಇನ್ನಾವುದೇ ಮುಕ್ತ ಮಾಹಿತಿಯ ಜಾಲತಾಣಕ್ಕೆ ಉಚಿತವಾಗಿ ಈ ಪ್ರತಿಗಳನ್ನು ನೀಡಲಾಗುತ್ತಿದೆ.** ಜಾನಪದ ಸಾಹಿತ್ಯದ ಮೌಲ್ಯಮಾಪನ ಆಗುವ ಮಾತಿರಲಿ, ಇದ್ದುದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಾಲ ಈಗ ಎದುರಾಗಿದೆ. ಆಧುನಿಕತೆ, ನಗರೀಕರಣದ ಪ್ರಭಾವದಿಂದ ಭಾಷೆ - ಲಿಪಿ - ಪರಂಪರಾಗತ ಅರಿವು ಎಲ್ಲವೂ ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸಿಕ್ಕಿದ್ದನ್ನು ಉಳಿಸಿಕೊಂಡು ಹೋಗುವ ತರಾತುರಿಯಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂಬುದನ್ನು ಓದುಗರು ಗಮನಿಸಬೇಕಿದೆ.

**ಈ ಪುಸ್ತಕದ ಅಕ್ಷರಜೋಡಣೆಗೆ ಸಹಕರಿಸಿದ, ಮುಖಪುಟ ರಚಿಸಿಕೊಟ್ಟ ಫೇಸ್‌ಬುಕ್ ಮಿತ್ರಲೋಕಕ್ಕೆ ಮಿತ್ರಮಾಧ್ಯಮದ ಅನಂತ ವಂದನೆಗಳು. ಡಿಜಿಟಲ್ ಜನಪದವು ಪರಂಪರಾಗತ ಜನಪದವನ್ನು ಉಳಿಸಿಕೊಳ್ಳಲು ಮುಂದಾಗಿರುವುದು, ಅದರಲ್ಲೂ ಹಲವು ಯುವ ವಯಸ್ಕರೇ ಈ ಕೆಲಸ ಮಾಡಿರುವುದು ಕೊಂಚ ಸಮಾಧಾನದ ಸಂಗತಿ. ಇಂತಹ ಜೀವನ್ಮುಖಿ ಯುವಸಮುದಾಯ ವಿಸ್ತಾರವಾಗಲಿ ಎಂದು ಹಾರೈಸುತ್ತೇವೆ.**

**ಮುಕ್ತಮಾಹಿತಿಗೆ ಪುಟ್ಟ ಹೆಜ್ಜೆ ಇಡುವ ಮಿತ್ರಮಾಧ್ಯಮದ ಘೋಷವಾಕ್ಯವನ್ನು ಬೆಂಬಲಿಸುವ ಎಲ್ಲರಿಗೂ ವಂದನೆಗಳು.**

**- ಬೇಳೂರು ಸುದರ್ಶನ**

# ಸಂಪಾದಕರ ಮಾತು

ನಮ್ಮ ಪೂಜ್ಯ ತಂದೆಯವರಾದ ಡಾ॥ ಎಲ್. ಆರ್. ಹೆಗಡೆಯವರು ಕನ್ನಡ ಜಾನಪದ ಸಾರಸ್ವತಲೋಕದಲ್ಲಿ ಚಿರಪರಿಚಿತರು. ಅವರು ತಮ್ಮ ಪೂರ್ತಿ ಜೀವನವನ್ನು ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ, ತಮ್ಮ ಕೊನೆಯ ದಿನಗಳಲ್ಲಿ ಅವರೇ ಬರೆದ- 'ಕ್ಷೇತ್ರದಲ್ಲಿ ಕಾರ್ಯದ ನೆನಪುಗಳು' ಗ್ರಂಥವನ್ನು ಓದಿದರೆ ಜಾನಪದ ಕ್ಷೇತ್ರದಲ್ಲಿ ಅವರ ಅಪೂರ್ವ ಸಾಧನೆಯ, ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯಪೂರ್ಣ ಪೀಠಿಕೆಗಳು, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಅಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ತುಲನಾತ್ಮಕ ವಿಶ್ಲೇಷಣೆಗಳು ನಿಜವಾಗಿಯೂ ಶ್ಲಾಘನೀಯ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅಧ್ಯಯನಗಳು ಅನನ್ಯವಾಗಿದೆ. ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಉಲ್ಲೇಖನೀಯ.

ಜಾನಪದ ಅಧ್ಯಯನದ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಹಳ್ಳಿಯ ಚಿಕಿತ್ಸಾ ಪದ್ಧತಿಗಳಲ್ಲಿಯೂ ಕೂಡ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿದ್ದರು. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದರು. ಕೆಲಸ ಮಾಡುವ ವೈಖರಿಯನ್ನು ನೋಡಿದಾಗ ಇಂಗ್ಲೀಷಿನ 'One man army' ನೆನಪಾಗುತ್ತದೆ.

ನಾವು ನಾಲ್ಕು ಮಕ್ಕಳು ರೇಣುಕಾ, ರಾಮಕೃಷ್ಣ, ಸುನಂದಾ ಹಾಗು ಸವಿತಾ. ನಾವು ಚಿಕ್ಕವರಿರುವಾಗ, "ಯಾಕಪ್ಪಾ ಈ ಹಳ್ಳಿಗರ ಹಾಡು, ಕಥೆ, ಸಾಹಿತ್ಯಗಳನ್ನಾದರೂ ಸಂಗ್ರಹಿಸುತ್ತಾರೋ" ಏನೂ ಪ್ರಯೋಜನವಿಲ್ಲದ ಉಪಯೋಗವಿಲ್ಲದ ಕೆಲಸವೆಂದೂ, ವೇಳೆ ಹರಣವೆಂದೂ ಅನ್ನಿಸುತ್ತಿತ್ತು. ಆದರೆ, ಈಗ ಕಷ್ಟಪಟ್ಟು ಸಂಗ್ರಹಿಸಿದ್ದರಲ್ಲಿ ಕೆಲವನ್ನಾದರೂ ಉಳಿಸಬೇಕೆಂಬ ಹಂಬಲದಿಂದ ಕೆಲಸ ಮಾಡತೊಡಗಿದಾಗ ಇದೆಷ್ಟು ಕಷ್ಟತರವಾದ, ಕ್ಲಿಷ್ಟವಾದ ಕೆಲಸವೆಂದು ತಿಳಿಯಹತ್ತಿದೆ. Absent minded professor

ಆದರೂ ಜಾನಪದ ವಿಷಯಗಳನ್ನು ಸಂಗ್ರಹಿಸುವಾಗ ಹೇಳಿದವರ ಹೆಸರು, ಬರೆಸಿಕೊಂಡ ದಿನಾಂಕ, ವಿವಿಧ ವಿಷಯಗಳ ವಿಂಗಡಣೆ, ಸಂಸ್ಕರಣೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಂದಿನ ದಿನಗಳಲ್ಲಿ ಅಷ್ಟೊಂದು ಶ್ರಮ ವಹಿಸದಿದ್ದರೆ, ಸಂಗ್ರಹಿಸದೆ ಇದ್ದುದ್ದೆಲ್ಲವೂ ನಶಿಸಿಹೋಗುತ್ತಿದ್ದವೆಂಬ ಅನುಭವವಾಗುತ್ತದೆ. ತಂದೆಯವರ ದೂರದೃಷ್ಟಿ ಮೆಚ್ಚುವಂಥದ್ದು. ಬಹುಶಃ ನಿರೂಪಕರಾರೂ ಈಗಿಲ್ಲ. ಅವರ ಸಂಗ್ರಹಗಳೂ ಅವರ ಜೊತೆಯೇ ಆಧುನಿಕತೆಯ ಜೀವನಶೈಲಿಯಲ್ಲಿ ಅಡಗಿಹೋಗಿದೆ. ಈಗಿನ ತಲೆಮಾರಿನವರ ಹತ್ತಿರ ಸ್ವಲ್ಪವೂ ಸಿಗುವ ಆಸೆಯಿಲ್ಲ. ಮಾಡಿದ ಸಂಗ್ರಹವನ್ನು ಅವಲೋಕಿಸಿದಾಗ ಜನಪದರ ಮುಗ್ಧ ಮನಸ್ಸು, ಸ್ವಚ್ಛಂದ ವಾತಾವರಣ, ಆಗಿನ ಸಾಮಾಜಿಕ ರೀತಿ-ನೀತಿಗಳ ಕಲ್ಪನೆ, ಜೀವನದ ಸರಳತೆ, ಸರಳ-ಸುಲಭ ಚಿಕಿತ್ಸಾಪದ್ಧತಿ ಎಲ್ಲ ತಿಳಿಯ ಹತ್ತಿದೆ.

ತಂದೆಯವರೇ ಹೇಳಿಕೊಂಡಂತೆ ಅವರಿಗೆ ಹಳ್ಳಿಯ ಹಾಡುಗಳನ್ನು ಕಲಿತು, ಹೇಳುವ ಹವ್ಯಾಸ ಚಿಕ್ಕಂದಿನಿಂದೇ ಇತ್ತು. ಧ್ವನಿ ಬಹಳ ಮಧುರವಾಗಿತ್ತು; ಸುಶ್ರಾವ್ಯವಾಗಿ ಹೇಳುತ್ತಿದ್ದರು. ಹವ್ಯಕ ಹೆಂಗಸರಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಮುಂಜಾನೆ, ಸಂಜೆ ಕೆಲಸ ಮಾಡುವಾಗ ಹಾಡುಗಳನ್ನು ಹೇಳುವ ಪರಿಪಾಠವಿತ್ತು. ಹೀಗಾಗಿ ಅರಿವಿಲ್ಲದಂತೆ ಜಾನಪದದತ್ತ ವಾಲಿದ್ದರು. ಮೊದಮೊದಲು ಸಮಯದ ಅಭಾವದಿಂದ, ಹೋಮಿಯೋಪಥಿ ಔಷಧಗಳ ಅಭ್ಯಾಸ, ದಿನಾಲೂ ಬರುವ ರೋಗಿಗಳ ಉಪಚಾರ, ಕಾಲೇಜಿನ ಕೆಲಸಗಳ ಮೂಲಕ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಕೆನರಾ ಕಾಲೇಜಿಂದ ಅಧ್ಯಾಪಕ ಕೆಲಸದಿಂದ ನಿವೃತ್ತಿಯ ನಂತರ ಉಳಿದ ಪೂರ್ತಿ ಆಯುಷ್ಯವನ್ನು ಜಾನಪದಕ್ಕಾಗಿಯೇ, ಆದರ ಸಂಗ್ರಹ, ಉಳಿಸುವ ಕೆಲಸಕ್ಕೇ ಮೀಸಲಿಟ್ಟಿದ್ದರು. ಉತ್ತರ ಕನ್ನಡದ ಬಹುತೇಕ ಎಲ್ಲ ಹಳ್ಳಿಗಳನ್ನು ತಿರುಗಿ ಸಾಕಷ್ಟು ವೈವಿಧ್ಯಪೂರ್ಣ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಸಾಧ್ಯವಾದಷ್ಟು ಪ್ರಕಟಣೆ ಕಂಡಿವೆ.

ಈ ಕ್ಷೇತ್ರದಲ್ಲಿ ಅವರ ಏಳ್ಗೆಯನ್ನು ಕಂಡು ಪ್ರಕಟಣೆಗಳಿಗೆ ತೊಡಕನ್ನು ತಂದು ಒಡ್ಡುವವರೂ ಇದ್ದರು. ಗಮನಕ್ಕೆ ಬಂದರೂ ಅಷ್ಟಾಗಿ ಹಚ್ಚಿಕೊಳ್ಳದೆ ತಮ್ಮ ಕೈಯಿಂದ ಖರ್ಚು ಮಾಡಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದರು. ಜಾನಪದ ವೈದ್ಯಕೀಯದಲ್ಲಿ, ಅಂದರೆ- ಹಳ್ಳಿಯ ಚಿಕಿತ್ಸಾಪದ್ಧತಿಗಳನ್ನು ಅವರಷ್ಟು ಸಂಗ್ರಹಿಸಿ ಪ್ರಕಟಿಸಿದವರು ವಿರಳವೆಂದೇ ನನ್ನ ಭಾವನೆ. ಆದರೆ, ಕೊನೆಗಾಲದಲ್ಲಿ ಪರಿಷ್ಕರಿಸಿ, ವಿಂಗಡಿಸಿ, ನಾವಿಬ್ಬರೂ ಕೂಡಿ ತಯಾರಿಸಿದ ಹಸ್ತಪ್ರತಿಗಳು– ಸುಮಾರು ಮೂವತ್ತೈದು ಹಸ್ತಪ್ರತಿಗಳು. ನಮಗಾರಿಗೂ ಅರಿವಿಲ್ಲದಂತೆ ಅವೆಲ್ಲವೂ ಯಾರದೋ ಕೈ ಸೇರಿದೆ; ಅವೆಲ್ಲ ಅತ್ಯಮೂಲ್ಯವಾಗಿದ್ದವು. ಎಷ್ಟು ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ. ಆದರೆ, ಒಂದು ಮಾತು– ಪರಿಷ್ಕರಿಸಿ, ವಿಂಗಡಿಸುವ ಮೊದಲು ಅವುಗಳ ಎರಡು-ಮೂರು ಮೂಲಪ್ರತಿಗಳು ಇರುತ್ತಿದ್ದವು. ಆ ಸಂಗ್ರಹಗಳನ್ನು ನಮ್ಮ ಮನೆಗೆ ತಂದು, ಆ ಮೂಲಪ್ರತಿಗಳಿಂದ ಸುಮಾರು ೨೪-೨೫

ಹಸ್ತಪ್ರತಿಗಳನ್ನು ತಯಾರಿಸಿ ಅದನ್ನು ಇ-ಪ್ರಕಟಣೆಯ ಮೂಲಕ ಜಾನಪದ ಪ್ರೇಮಿಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ನಾವಂತೂ ಈ ಕೆಲಸದ ಆಶೆಯನ್ನೇ ಬಿಟ್ಟಿದ್ದೆವು. ಅನೇಕ ಜಾನಪದ ಕ್ಷೇತ್ರದಲ್ಲಿದ್ದವರ ಸಂಪರ್ಕ ಮಾಡುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಹೆಗಡೆಯವರ ಬಗ್ಗೆ ಗೌರವದ ಮಾತನಾಡುವವರೇ ಹೊರತು ಸಹಾಯಕ್ಕೆ ಅಥವಾ ಮಾರ್ಗದರ್ಶನಕ್ಕೆ ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಶ್ರೀಯುತ ನಂದಕುಮಾರರ ಪರಿಚಯವಾಗಿ ಅವರು ಶ್ರೀಯುತ ಬೇಳೂರು ಸುದರ್ಶನರ ಬಗ್ಗೆ ಹೇಳಿದರು. ನಾನು ನಿರಾಸೆಯಿಂದಲೇ ಕೊನೆಯ ಪ್ರಯತ್ನವೆಂದು ಅವರಿಗೆ ಫೋನ್ ಮಾಡಿದೆ. ಅವರು ಸಹಾಯ ಹಾಗೂ ಮಾರ್ಗದರ್ಶನ ಮಾಡಲು ಮುಂದೆ ಬಂದರು. ಇಂದು ಅವರ ಜೊತೆಯಲ್ಲಿ ಅವರ ಅನೇಕ ಸ್ನೇಹಿತರೂ ಕೈ ಜೋಡಿಸಿದ್ದಾರೆ. ತಂದೆಯವರೇ ಹೇಳಿಕೊಂಡಂತೆ ೧೫ ಸಾವಿರ ಪುಟಗಳ ಸಂಗ್ರಹದಲ್ಲಿದ್ದ ಸ್ವಲ್ಪ ಭಾಗವನ್ನು ಉಳಿಸುವ ಪ್ರಯತ್ನ ಸಾಗಿದೆ. ಇಷ್ಟು ಉಳಿದರೂ ನಮ್ಮೆಲ್ಲರ ಪ್ರಯತ್ನ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಈ ನಿಟ್ಟಿನಲ್ಲಿ ಸಹಾಯ ಮಾಡಿದ (ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ) ಎಲ್ಲರಿಗೂ ನಾವು ಚಿರಋಣಿಗಳು.

**ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ**

೯೫೩೫೧೯೨೦೭೪ / ೮೬೬೦೪೨೧೩೦೯

# ಡಾ॥ ಎಲ್ ಆರ್ ಹೆಗಡೆ ಕೃತಿಗಳು

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | | |
|---|---|---|
| ೧ | ಮೂಢನಂಬಿಕೆಗಳು | (ಪ್ರಚಾರೋಪನ್ಯಾಸ) |
| ೨ | ಜಾನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೩ | ಪುರಾಣ ಜಿಜ್ಞಾಸೆ | (ಪ್ರಚಾರೋಪನ್ಯಾಸ) |
| ೪ | ಜನಪದ ಸಾಹಿತ್ಯದಲ್ಲಿ ಮದುವೆ | (ಪ್ರಚಾರೋಪನ್ಯಾಸ) |
| ೫ | ಬತ್ತಲೇಶ್ವರ ರಾಮಾಯಣ | (ಪ್ರಚಾರೋಪನ್ಯಾಸ) |
| ೬ | ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ | (ಪ್ರಚಾರೋಪನ್ಯಾಸ) |
| ೭ | ಪರಮೇಶ್ವರಿಯ ಪದಗಳು | (ಕಥನ ಗೀತೆಗಳು) |
| ೮ | ಗುಮ್ಮನ ಪದಗಳು | (ಕಥನ ಗೀತೆಗಳು) |
| ೯ | ಉತ್ತರ ಕನ್ನಡ ಜನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೧೦ | ಹಾಲಿನ ತೆನೆ | (ಜಾನಪದ ತ್ರಿಪದಿಗಳು) |
| ೧೧ | ಕುಮಾರವ್ಯಾಸನ ಪಾತ್ರಸೃಷ್ಟಿ | (ಮಹಾಪ್ರಬಂಧ) |
| ೧೨ | ಗಾಮೊಕ್ಕಲ ಕಥೆಗಳು | (ಜನಪದ ಕಥೆಗಳು) |

## ಮೈಸೂರು ವಿಶ್ವವಿದ್ಯಾಲಯ

| | | |
|---|---|---|
| ೧೩ | ತಿಮ್ಮಕ್ಕನ ಪದಗಳು | (ಕಥನ ಗೀತೆಗಳು) |
| ೧೪ | ಕೆಲವು ಲಾವಣಿಗಳು | (ಕಥನ ಗೀತೆಗಳು) |
| ೧೫ | ನಮ್ಮ ಜನಪದ ಕಥೆಗಳು | (ಜನಪದ ಕಥೆಗಳು) |
| ೧೬ | ಮಲೆನಾಡಿನ ಸೆರಗಿನ ಕಥೆಗಳು | (ಜನಪದ ಕಥೆಗಳು) |

## ಬೆಂಗಳೂರು ವಿಶ್ವವಿದ್ಯಾಲಯ

| | | |
|---|---|---|
| ೧೭ | ಹಾಡುಂಟೇ ನನ್ನ ಮಡಿಲಲ್ಲಿ | (ತ್ರಿಪದಿ ಸಂಕಲನ) |
| ೧೮ | ಗುಮಟೆಯ ಪದಗಳು | (ಜನಪದ ಗೀತೆಗಳು) |
| ೧೯ | ಮುಕ್ರಿ ಮತ್ತು ಹೊಲೆಯರ ಪದಗಳು | (ಜನಪದ ಗೀತೆಗಳು) |

## ಗ್ರಾಮಜೀವನ ಕಾರ್ಯಾಲಯ, ಕುಮಟಾ

| | | |
|---|---|---|
| ೨೦ | ಬಾಳ ದೀಪಾವಳಿ | (ಕವನ ಸಂಕಲನ) |

## ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ

| | | |
|---|---|---|
| ೨೧ | ಜೈನಭಾರತ ಕಥೆಗಳು | (ಜೈನ ಮಹಾಭಾರತ) |

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

| | | |
|---|---|---|
| ೨೨ | ಜನಪದ ಸಾಹಿತ್ಯ | (ವಿಮರ್ಶಕ ಗ್ರಂಥ) |
| ೨೩ | ಗೊಂಡರ ಪದಗಳು | (ಜನಪದ ಗೀತೆಗಳು) |
| ೨೪ | ಮಾಚಿಯ ಕಥನ ಗೀತಗಳು (೨೦೦೨) | (ಕಥನ ಗೀತೆಗಳು) |
| ೨೫ | ಕತೆ ಗಾದೆಗಳು (೨೦೦೪) | (ಗಾದೆ ಕತೆಗಳ ಸಂಗ್ರಹ) |

## ಸಮಾಜ ಪುಸ್ತಕಾಲಯ, ಧಾರವಾಡ

| | | |
|---|---|---|
| ೨೬ | ಕಾವ್ಯ ವ್ಯಾಸಂಗ | (ಕಾವ್ಯ ವಿಮರ್ಶೆ) |
| ೨೭ | ಸುವ್ವೀ ಸುವ್ವೀ ಸುವ್ವಾಲೆ | (ಜಾನಪದ ತ್ರಿಪದಿಗಳು) |
| ೨೮ | ಬೆಳಿಯಮ್ಮನ ಹಾಡುಗಳು | (ಕಥನ ಗೀತೆಗಳು) |
| ೨೯ | ಜನಪದ ಜೀವನ ಮತ್ತು ಕಲೆ | (ಲೇಖನಗಳು) |
| ೩೦ | ಗಾಂವಠಿ ಚಿಕಿತ್ಸೆ | (ವೈದ್ಯ ಗ್ರಂಥ) |
| ೩೧ | ಪಾಕರಸಾಯನ | (ಅಡುಗೆ ಗ್ರಂಥ) |

## ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

| | | |
|---|---|---|
| ೩೨ | ಕರ್ನಾಟಕದ ಕರಾವಳಿಯ ಜನಪದ ಗೀತೆಗಳು | |
| ೩೩ | ಕರ್ನಾಟಕ ಕರಾವಳಿಯ ಜನಪದ ಕಥೆಗಳು | |
| ೩೪ | ಉತ್ತರ ಕನ್ನಡದ ಗೊಂಡರು | |
| ೩೫ | ಉತ್ತರ ಕನ್ನಡದ ಸಿದ್ದಿಯರು | (೨ನೇ ಆವೃತ್ತಿ) |
| ೩೬ | ಜನಪದ ಸಾಹಿತ್ಯ | (ಇತರರೊಡನೆ ಬರೆದುದು) |
| ೩೭ | ಗೇಣುಗಡ್ಡದ ಕುಳ್ಳ ಮತ್ತು ಇತರ ಕಥೆಗಳು (೧೯೮೦) | (ಜನಪದ ಮಕ್ಕಳ ಕಥೆಗಳು) |

## ಸಾಹಿತ್ಯ ಭಂಡಾರ, ಹುಬ್ಬಳ್ಳಿ

| | | |
|---|---|---|
| ೩೮ | ಲಂಕಾದಹನ | (ಬತ್ತಲೇಶ್ವರ ರಾಮಾಯಣದ ಭಾಗ) |
| ೩೯ | ಅನುಭವ ಚಿಕಿತ್ಸೆ | (ವೈದ್ಯ ಗ್ರಂಥ) |
| ೪೦ | ಆರೋಗ್ಯ ಧರ್ಮ ಪಾಲನೆ | (ವೈದ್ಯ ಗ್ರಂಥ) |
| ೪೧ | ದನಗಳ ವೈದ್ಯ | (ಪಶುವೈದ್ಯ ಗ್ರಂಥ) |
| ೪೨ | ರೂಢಿಯ ಚಿಕಿತ್ಸೆ | (ವೈದ್ಯ ಗ್ರಂಥ) |

## ವಿಶ್ವ ಪ್ರಕಾಶನ, ಹುಬ್ಬಳ್ಳಿ

೪೩ ಸುಲಭ ಚಿಕಿತ್ಸೆ (ವೈದ್ಯ ಗ್ರಂಥ)

## ಜ್ಞಾನಸಾಧನ ಗ್ರಂಥಮಾಲೆ ಹೆಗೆಡೆ, ಕುಮಟಾ/ಸಿದ್ದಾಪುರ

೪೪ ಹಕ್ಕಿ ನರಸಣ್ಣ (ಕಥಾ ಸಂಕಲನ)
೪೫ ಸಿದ್ದಿಯರ ಕಥೆಗಳು (ಜನಪದ ಕಥೆಗಳು)
೪೬ ಕರಾವಳಿಯ ಕಥೆಗಳು (ಜನಪದ ಕಥೆಗಳು)
೪೭ ಜನಪದ ಭಾರತದ ಕಥೆಗಳು (ಜನಪದ ಕಥೆಗಳು)
೪೮ ಕುಮರಿ ಮರಾಟಿಗರ ಕಥೆಗಳು (ಜನಪದ ಕಥೆಗಳು)
೪೯ ಜನಪದ ವೈದ್ಯ (ವೈದ್ಯ ಗ್ರಂಥ)
೫೦ ಹೆಂಗಸರ ಗೀತಗಳು (ಜನಪದ ಗೀತೆಗಳು)
೫೧ ಕುಮಾರವ್ಯಾಸ (ವಿಮರ್ಶೆ)
೫೨ ಮಂಗಲ ಗೀತಗಳು (ಜನಪದ ಗೀತೆಗಳು)
೫೩ ಪೂಜಾ ಗೀತಗಳು (ಜನಪದ ಗೀತೆಗಳು)
೫೪ ಒಗಟುಗಳು ಮತ್ತು ಕಥೆಗಳು (ಜನಪದ ಕಥೆಗಳು)
೫೫ ಅಪೂರ್ವ ಮೃದಂಗ (ಜನಪದ ಕಥೆಗಳು)
೫೬ ಹೋಮಿಯೋಪಥಿ ಚಿಕಿತ್ಸೆ (ಹೋಮಿಯೋಪಥಿ ವೈದ್ಯ ಗ್ರಂಥ)

## ಕದಂಬ ಪ್ರಕಾಶನ, ಸಿರ್ಸಿ

೫೭ ಹಾಲಕ್ಕಿ ಹೆಂಗಸರ ಮದುವೆ ಹಾಡುಗಳು (ಜನಪದ ಗೀತೆಗಳು)

## ಸಾಹಿತ್ಯ ಅಕಾಡೆಮಿ, ನವದೆಹಲಿ

೫೮ ಜಾನಪದ ಗಿರಿಜನರ ಕಥೆಗಳು (ಜನಪದ ಕಥೆಗಳು)

## ಶ್ರೀ ರಾಜು ಶೆಟ್ಟಿ, ಕುಮಟಾ

೫೯ ಆಹಾರ ಉಪಾಹಾರ (ಅಡುಗೆ ಪುಸ್ತಕ)
೬೦ ಆರೋಗ್ಯವೇ ಭಾಗ್ಯ (ವೈದ್ಯ ಗ್ರಂಥ)

## ಜ್ಞಾನಜ್ಯೋತಿ ಪ್ರಕಾಶನ, ಸಿದ್ದಾಪುರ (ಉ.ಕ)

೬೧ ಊರೌಷಧಿಗಳ ಚಿಕಿತ್ಸೆ (ವೈದ್ಯ ಗ್ರಂಥ)

## ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೬೨ ಪಶುವೈದ್ಯ ರತ್ನಾಕರ (ಪಶುವೈದ್ಯ ಗ್ರಂಥ)

## ಜ್ಞಾನಸಾಧನ ಗ್ರಂಥಮಾಲೆ, ಸಿದ್ದಾಪುರ (ಉ.ಕ)

೬೩ ಕನ್ನಡ ಗಾದೆಗಳು (ಗಾದೆಗಳ ಸಂಗ್ರಹ)

೬೪ ಹಳಗನ್ನಡದ ಕವಿಗಳು

೬೫ When The Indicated Remedy Fails in Homeopathic Practice (ಹೋಮಿಯೋಪಥಿ ವೈದ್ಯ ಗ್ರಂಥ)

೬೬ ಗರ್ಭಿಣಿ, ಬಾಣಂತಿ ಉಪಚಾರ (ವೈದ್ಯ ಗ್ರಂಥ) ಸಂಗ್ರಾಹಕಿ: ಸೌ. ರೇಣುಕಾ ಭಟ್ಟ

೬೭ ಮಧುರ ಗೀತಗಳು (ಜನಪದ ಗೀತೆಗಳು) ಸಂಗ್ರಾಹಕಿ: ಸೌ. ರೇಣುಕಾ ಭಟ್ಟ

---

## ಡಾ. ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಸಿರ್ಸಿ

೬೮ ಡಾ. ಎಲ್. ಆರ್. ಹೆಗಡೆ ಕೃತಿ ಸೂಚಿ

೬೯ ಬಿಂಬ ಪ್ರತಿಬಿಂಬ (ಭಾಷಣಗಳು ಮತ್ತು ಲೇಖನಗಳು)

೭೦ ಗಾದೆ ಕಥೆಗಳು (ಜನಪದ ಕಥೆಗಳು)

೭೧ ಹೊನ್ನಮ್ಮನ ಮನೆಯ ಕಥೆಗಳು (ಜನಪದ ಕಥೆಗಳು)

೭೨ ಮಾತಿನರಗಿಣಿಯೇ ನುಡಿದಾವೋ (ಜನಪದ ತ್ರಿಪದಿಗಳು ಹಾಗೂ ಗೀತೆಗಳು)

೭೩ ನಾಡ ಮದ್ದು (ವೈದ್ಯ ಗ್ರಂಥ)

೭೪ ಜಾನಪದ ಕ್ರೀಡೆ (ಜಾನಪದ ಆಟಗಳ ಮಾಹಿತಿ)

೭೫ ಆರೋಗ್ಯ ದರ್ಶನ (ವೈದ್ಯ ಗ್ರಂಥ)

೭೬ ಸಣ್ಣ ಕೂಸ ಹೇಳಿದ ಕಥೆಗಳು (ಜನಪದ ಕಥೆಗಳು)

೭೭ ಪಡುವಣದ ಬೆಡಗು (ವಿದ್ವಾಂಸರ ಉಪನ್ಯಾಸಗಳು)

೭೮ ನಾಮಧಾರಿ ಕತೆಗಳು (ಜನಪದ ಕಥೆಗಳು)

(ಡಾ.ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಕುಮಟಾ)

---

## ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು

೭೯ ಅವರಿವರು ಹೇಳಿದ ಕಥೆಗಳು (ಜನಪದ ಕಥೆಗಳು)

---

## ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೨೦೦೨

೮೦ ಲೋಕಗೀತ ಮಂಜರಿ (ಜನಪದ ಗೀತೆಗಳು)

ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೨೦೦೨

೮೧ ಸಾಂಪ್ರದಾಯಿಕ ಅಡುಗೆಗಳು (ಅಡುಗೆ ಪುಸ್ತಕ) ಸಂಗ್ರಾಹಕಿ: ಸೌ.ರೇಣುಕಾ ಭಟ್ಟ

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

| | | |
|---|---|---|
| ೮೨ | ಡಾ॥ ಎಲ್. ಆರ್. ಹೆಗಡೆಯವರ ಕ್ಷೇತ್ರ ಕಾರ್ಯದ ನೆನಪುಗಳು | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು |

## ಸಪ್ನ ಬುಕ್ ಹೌಸ್

| | | |
|---|---|---|
| ೮೩ | ಆರೋಗ್ಯಕರ ಚಿಕಿತ್ಸೆ | (ವೈದ್ಯ ಗ್ರಂಥ) |
| ೮೪ | ಹೋಮಿಯೋಪಥಿ ಔಷಧಿ ಗುಣಧರ್ಮ ಮತ್ತು ಚಿಕಿತ್ಸಾಸಾರ | (ಹೋಮಿಯೋಪಥಿ ವೈದ್ಯ ಗ್ರಂಥ) |

## ಮಿತ್ರಮಾಧ್ಯಮ ಪ್ರಕಟಿಸಿದ ಉಚಿತ ಡಿಜಿಟಲ್ ಪುಸ್ತಕಮಾಲೆ

೮೫. ಪುಸ್ತಕ ೧ ನಾಮಧಾರಿಗಳ ಆಡುಭಾಷೆಗಳ ಕಥೆಗಳು

೮೬. ಪುಸ್ತಕ ೨ ಆಯ್ದ ನಾಮಧಾರಿ ಕಥನಗೀತೆಗಳು

೮೭. ಪುಸ್ತಕ ೩ ಹಾಲಕ್ಕಿ ಕಥೆಗಳು

೮೮. ಪುಸ್ತಕ ೪ ಶುದ್ಧ ಭಾಷೆಯ ಕಥೆಗಳು

೮೯. ಪುಸ್ತಕ ೫ ಕೋಲಾಟದ ಪದಗಳು

೯೦. ಪುಸ್ತಕ ೬ ಆಯ್ಕೆ ಮಾಡಿದ ಜಾನಪದ ಕಥೆಗಳು

೯೧. ಪುಸ್ತಕ ೭ ಎಲ್ ಆರ್ ಹೆಗಡೆಯವರ ಭಾಷಣಗಳು

೯೨. ಪುಸ್ತಕ ೮ ಪತ್ರಿಕೆಗಳಲ್ಲಿ ಬಂದ ಜನಪದ ಕಥೆಗಳು

೯೩. ಪುಸ್ತಕ ೯ ಸಮ್ಮಿಶ್ರ ಕಥನಗೀತಗಳು

೯೪. ಪುಸ್ತಕ ೧೧ ಜನಪದ ವೈದ್ಯ ಲೇಖನಗಳು

೯೫. ಪುಸ್ತಕ ೧೨ ಜಾನಪದ ಲೇಖನಗಳು

೯೬. ಪುಸ್ತಕ ೧೩ ಎಲ್ ಆರ್ ಹೆಗಡೆ ರಚಿಸಿದ ಪದಗಳು,ಹಾಸ್ಯ ಲೇಖನಗಳು,ಕಥೆ,ನಾಟಕ

---

- ಇವುಗಳಲ್ಲಿ 'ಹಾಲಕ್ಕಿ ಹೆಂಗಸರ ಮದುವೆಯ ಹಾಡುಗಳು' ಎಂಬ ಗ್ರಂಥಕ್ಕೆ ೧೯೮೮ನೇ ಸಾಲಿನ 'ಉತ್ತಮ ಜನಪದ ಗೀತ ಸಂಕಲನ' ಎಂದು ಮತ್ತು 'ಜನಪದ ಮತ್ತು ಗಿರಿಜನರ ಕಥೆಗಳು' ಎಂಬ ಗ್ರಂಥಕ್ಕೆ ಗದ್ಯ ಪ್ರಕಾರದಲ್ಲಿ ೧೯೯೦ನೇ ಸಾಲಿನ ಉತ್ತಮ ಗ್ರಂಥವೆಂದೂ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿವೆ.
- ೧೯೮೬ ಜಾನಪದ ಅಕಾಡೆಮಿ ಪ್ರಶಸ್ತಿ- ಹೊಸಪೇಟೆಯಲ್ಲಿ ಹಾ.ಮಾ. ನಾಯ್ಕರಿಂದ ಪ್ರಶಸ್ತಿ ಪ್ರದಾನ.
- ೨೦೦೧ ನವಂಬರ್ ೧, ಮಾನ್ಯ ಮುಖ್ಯಮಂತ್ರಿ ತ್ರಿ ಎಸ್. ಎಂ. ಕೃಷ್ಣರಿಂದ ರಾಜ್ಯ ಪ್ರಶಸ್ತಿ ಪ್ರದಾನ.

# ಪರಿವಿಡಿ


| | | |
|---|---|---|
| ೧. | ಕುಸುಮಾಲೆ<br>- **ದೇವಿ ಗಣಪತಿ ನಾಯ್ಕ,** ಊರಕೇರಿ | ೧೭ |
| ೨. | ಮಹಾಶೇಷನ ಸೇಡು<br>- **ಕುಟ್ಟ ಜಟ್ಟಿ ಅಂಬಿಗ,** ಗಣಪ ಜಟ್ಟಿ ಅಂಬಿಗ | ೨೮ |
| ೩. | ಶಂಬೂಕ ದೈತ್ಯನ ಸಂಹಾರ<br>- **ದಿ. ತಿಮ್ಮ ಹುಲಿಯಾ ಗೌಡ,** ಹೊನ್ನಳ್ಳಿ ತಾಲೂಕ, ಅಂಕೋಲಾ | ೩೧ |
| ೪. | ಕಳೆ ಹಾಡು<br>- **ಥಾಕು ದೇವು ನಾಯ್ಕ,** ಅರಗಾ ತಾ. ಕಾರವಾರ | ೩೫ |
| ೫. | ಯಮನ ಮದುವೆ<br>- **ಶೇಷಮ್ಮ ಹಲಸಮಾವು** | ೪೪ |
| ೬. | ಶಿವ ಕೊರವಂಜಿ<br>- **ಸೌ. ಗೌರೀಬಾಯಿ ಗೋಪಾಲನಾಯ್ಕ** ಹೊಸೂರು, ಮತ್ತು<br>**ಸೌ. ಮಹಾಲಕ್ಷ್ಮಿ ಮುಕುಂದ ನಾಯ್ಕ,** ಕೊಂಡ್ಲಿ, ಸಿದ್ದಾಪುರ. | ೪೯ |
| ೭. | ಸಾವಿತ್ರಿಯ ಹಾಡು<br>**- ಸಣ್ಣಮಗು ಹೊನ್ನಪ್ಪ ನಾಯ್ಕ,** ಹೊಸಾಕುಳಿ. | ೫೫ |
| ೮. | ಸಮದವ್ವ<br>- **ದಿ. ದೇವಿ ಬಂಗಾರು ಕೊಂಡ್ಲಿ** ಮತ್ತು **ಕನ್ನೆಕೋಂ ಕೃಷ್ಣ ಕೊಂಡ್ಲಿ,** ಸಿದ್ದಾಪುರ. | ೬೭ |
| ೯. | ಅತ್ತೆ ಗೌರಮ್ಮ, ಸೊಸೆ ಹೊನ್ನಮ್ಮ<br>- **ಗೌರಿ ಕೋಂ. ಶಿವಪ್ಪ ನಾಯ್ಕ,** ಹೆಗಡೆ ಊರು | ೭೭ |
| ೧೦. | ಹೊಸಗತ್ತು<br>- **ಲಕ್ಷ್ಮಿಯೇರಪ್ಪ ನಾಯ್ಕ,** ಕೋಡಕಣಿ. | ೮೪ |
| ೧೧. | ಸತಿಯ ದಿವ್ಯ | ೮೮ |

| | | |
|---|---|---|
| ೧೨. | ಅತುಮಪ್ಪಿ<br>- **ಬೆಳಿಯಮ್ಮ ಪುಟ್ಟ ನಾಯ್ಕ** | ೯೩ |
| ೧೩. | ಬಕ್ಕನ ಬಾರಿ<br>- **ದಿ. ಬೆಳಿಯಮ್ಮ, ವೆಂಕಟ್ರಮಣ ಮಡಿವಾಳ** | ೧೧೩ |
| ೧೪. | ಉತ್ತರ ದೇವಿ<br>- **ಗೌರಿ ಮಂಜು ಜೋಗಿ,** ಹೆರೂರು | ೧೨೦ |
| ೧೫. | ಕುಸುಮಾಲಿ<br>- **ಸೌ. ಬೆಳಿಯಮ್ಮ ನಾಯ್ಕ** | ೧೨೮ |
| ೧೬. | ಪ್ರತ್ಯುಪಕಾರ<br>- **ತಿಪ್ಪು ನಾಯ್ಕ ಬಗ್ಗೋಣ** | ೧೩೩ |
| ೧೭. | ಶ್ರವಣ (ಶರವಣ) ಕುಮಾರನ ವಧೆ | ೧೩೯ |
| ೧೮. | ಶಿವ-ಗೌರಿ<br>- **ಬೆಳಿಯಮ್ಮ ಪುಟ್ಟುನಾಯ್ಕ,** ಹೊಸಾಕುಳಿ. | ೧೪೩ |
| ೧೯. | ಮಾನಾಡ ಗೋವಿನ ಕಥೆ...<br>- ಗೊಂಡರ ಹಾಡು | ೧೫೦ |

# ೧. ಕುಸುಮಾಲೆ

ನಕುಲಾ ಸಾದೇವಾ ಭೀಮಲರುಜನಾ
ದರ್ಮಾ ರೈವರಾ ಮಡದಿ ದುರುಪತಿ ಕೂಡೇ
ಪಗಡೀಽ ಆಟಾಽಕೇಲಿನು ಮಾಡಂದ್ಽರೇ
ವಂದಂಬುಪಗಡೀ ಹೂಡಳೆ ದುರುಪತಿ ॥ ೧ ॥

ಯೆಯ್ದಂಬು ಪಗಡೀ ಗೆದ್ದನರಜೂನಾ
ಯೆಯ್ದಂಬು ಪಗಡೀ ಹೂಡಳೆ ದುರುಪತಿ
ಮೂರಂಬು ಪಗಡೀ ಗೆದ್ದನರಜೂನಾ
ಸಾಕಂಬೂ ಪಗಡೀ ಹೂಡಳೆ ದುರುಪತಿ ॥ ೨ ॥

ಐದಂಬೂ ಪಗಡೀಽ ಗೆದ್ದನರಜೂನಾ
ಆರಂಬೂ ಪಗಡೀಽ ಹೂಡಳೆ ದುರುಪತಿ
ಯೇಳಂಬೂ ಪಗಡೀ ಗೆದ್ದನರಜೂನಾ
ಯೇಳಂಬಾ ಪಗಡೀ ಹೂಡಳೆ ದುರುಪತಿ ॥ ೩ ॥

ಯೇಂಟಂಬೂ ಪಗಡೀ ಗೆದ್ದನರಜೂನಾ
ವಂಬತ್ತುಲಂಬು ಪಗಡೀ ಹೂಡಳೆ ದುರುಪತಿ
ಹತ್ತಂಬು ಪಗಡೀಽ ಗೆದ್ದನರಜೂನಾ
ದುರುಪತಿಗೆ ಸಿಟ್ಟೂ ಯೇರಿನ್ನೆ ಬಂದೀತೂ ॥ ೪ ॥

ಪಟ್ಟಿ ಮಂಚಾಽವಾ ಜುಗದಿ ಯೆದ್ದಾಳೇ
ಪಟ್ಟಿ ಮಂಚಾಽವಾಽ ಜುಗದಿನ್ ಯೆದ್ದಾಳೂ
ಮಾಳುಗಿ ವಳುಗೇ ನೆಡದಳ್ ದುರುಪತಿ
ಕಟ್ಟಿದ ಸಿರಿ ಮುಡಿಯಾಽ ಬಿಚ್ಚಿ ಬೀಸಾಡಾದೇ ॥ ೫ ॥

ಚಾವೀ ಚಲ್ಲಣವಾ ನೆರದಿನ್ನುಟ್ವಾಳೇ
ಪಗಡೀ ಆಟಾಕೇ ಅನುಮಾಡಲರಜೂನಾ
ಯೆಯ್ಡಂಬೂ ಪಗಡೀ ಹೂಡನೆ ಅರಜೂನಾ
ನಾಕಂಬೂ ಪಗಡೀ ಗೆದ್ದಳೆ ದುರುಪತಿ ॥ ೬॥

ಐದಂಬೂ ಪಗಡೀ ಹೂಡನೆ ಅರಜೂನಾ
ಆರಂಬೂ ಪಗಡೀ ಗೆದ್ದಳೆ ದುರುಪತಿ
ಯೇಳಂಬೂ ಪಗಡೀ ಹೂಡನರಜೂನಾ
ಯೆಂಟಂಬೂ ಪಗಡೀ ಗೆದ್ದಳೆ ದುರುಪತಿ ॥ ೭॥

ಅರಜೂನಗೆ ಸಿಟ್ಟೂ ಯೇರಿನ್ನೆ ಬಂದೀತೇ
"ಯೇಗಿನ್ ಹೆಂಗ್ಸರಿಗೆ ನಜಿಯಿಲ್ಲ ನಾಚುಕಿಯಿಲ್ಲಾ
ನಮ್ಮೈವರಾ ನೆಡಗೇ ತೊಡೆ ಬಾಳ ಕಾಣಸತೀ
ನಮ್ಮೈವರಾ ನೆಡಗೇ ತೊಡೆ ಬಾಳ ಕಾಣುಸ್ತಿ ॥ ೮ ॥

ಜೋಗಿ ಜಂಗಮಗೇ ಮರುಳಾಗಂ"ದಾನೇ
ಅಟ್ಟೊಂದಾ ಮಾತಾ ಕೇಳೆ ದುರುಪತಿ
ಪಟ್ಟೇ ಸೀರೀಯಾ ನೆರದಿನ್ನುಟ್ವಾಳೇ
ಬಾಚಿ ಸಿರಿಮುಡಿಯಾ ಬಿಗದದೆ ದುರುಪತಿ ॥ ೯ ॥

ನೆತ್ತಿ ತುಂಬೆ ಹೂಗಾ ಮುಡಿದಳೆ ದುರುಪತಿ
ಹಿತ್ಲಕಣ್ಣ ಬಾಗಿಲಿಗೇ ನೆಡದಳೆ ದುರುಪತಿ
ಹಿತ್ತಲ ಕಣಗೀದ್ದಾ ದಾರ ಹೆರಿಕಾಯೀ
ದಾರೆಯಾ ತೆಗದೀ ಮೆಣಸಿಡುತಾಳೇ ॥ ೧೦ ॥

ದಾರೆಯಾ ತೆಗದೀ ಮೆಣಸಿಟ್ಟ ಮ್ಯೆಲರ ಮಾಡೀ
"ಯೆಣ್ಣೇಯಲ್ಲದರಾ ಬೆಗರಿಸೆ ಕುಂತ್ಯಮ್ಮಾ"
ಮುಂದಿಲ ಕಡೆ ಗೀನಾ ತೊಟ್ಟು ತೊಂಡೇ ಕಾಯೀ
"ಆದ್ಯೆದಾ ತೆಗದೀ ಮೆಣಸಿದ ನನ ತಾಯೇ"
ಆದ್ಯೆದಾ ತೆಗದೀ ಮೆಣಸಿಲ್ದ ಮೇಲರ ಮಾಡೀ ॥ ೧೧ ॥

"ತುಪ್ಪಾದಲ್ಲದರಾ ಬೆಗರಿಸು ನನತಾಯೇ",
ಆಗಿತೆ ನಿನ್ನಡಗೀ ಕಾದಿತೆ ಬಿಸಿನೀರೂ
ಯಾಳ್ಯಾ ಹೊತ್ತಿನ್ನೇ ಕಳದೀತೂ ತಾಯೇ
ಅರಗಿತು ನನ್ನಡಗೀ ಕಾದಿ ಬಿಸಿನೀರೂ || ೧೨ ||

ಕೆಮನೆತ್ತೀಗೆ ಯೆಣ್ಣೇ ಯೆರಕೊಳೊ ನನ ಮಗನೇ"
ಅಟ್ಟೊಂದ ಮಾತಾ ಕೇಳನರಜೂನಾ
ಬಚ್ಚಲರ ಮನೆಗೇ ನೆಡದನರಜೂನಾ
ಬೆಚ್ಚನೆ ಬಿಸಿನೀರೂ ಸಾನ ಮಾಡಾನೇ || ೧೩ ||

ಮಿಂದೀ ಚೆಂಡುಕಿಯಾ ಸೆಳೆದಾನರಜೂನಾ
ನಿತ್ತೀ ಸೂರ್ಯಮಗೆ ಕೆಯ್ಯಾ ಮುಗದಾನರಜೂನಾ
ಹೂಗೀನಾ ವನಕೇ ನಡೆದಾನರಜೂನಾ
ಚೊಬ್ಬೆ ತುಂಬೆ ಹೂಂಗಾ ಕೊಯ್ದಾನರಜೂನಾ || ೧೪ ||

ದ್ಯೇವಾರಾ ಮನೆಗೆ ಬಂದಾನರಜೂನಾ
ಅಂಗ್ಯೆಯಿಟಿ ಗಂದಾ ತಳದಾನರಜೂನಾ
ದ್ಯೇವರಿಗೊಂದು ಬಟ್ಟಾ ಇರುಸಾನರಜೂನಾ
ಭೂಮೀಗೊಂದು ಬಟ್ಟಾ ಸಡುದಾನರಜೂನಾ || ೧೫ ||

ತಾ ವಂದಾ ಬಟ್ಟಾ ಇಟ್ಟೇಕಂಡಾನೇ
"ಲೂಟಾ ಕಾದಾರೇ ಅನುಮಾಡು ತಾಯವ್ವ"
ಊಟ ಕಾದಾರೇ ನೆಡದಾನರಜೂನಾ
"ಕೇಳಲೆ ಕೇಳಲ್ಲೇ ನನ ತಾಯಿ, ನೀ ಕೇಳೂ || ೧೬ ||

ಕಿರಿಯಲು ಹೆಂಡತಿ ಕುಸುಮಾಲೀ ಮನಿಗೇ ಹೋಗಿನ್ನೇ ಬರುತೇ"
"ಯೆಲ್ಲು ಹೊಗುದಾರ ಹೊಗು ಮಗನೇ, ಯೆಲ್ಲು ಬರುದಾರು ಬರು ಮಗನೆ
ಕುಸುಮಾಲಿಯರಮನಿಗೆ ಹೋಗುಬೇಡ ನನ ಮಗನೇ"
ಮಾಳಗೀ ವಳಗೇ ನೆಡದಾನೆ ಅರಜೂನಾ || ೧೭ ||

ಬೇಕಾದಾ ದುಸ್ತಾ ದರಿಸನೆ ಅರಜೂನಾ
ಶಿದ್ದಿಲಿ ಶಿದ್ ಹೊನ್ನಾ ಜೋಳುಗಿಲಿ ಹೊಯ್ಕಂಡಾ

ಬೇಕಾದ ಆಯ್ದುನಾ ಕಯ್ಯಲ್ ಹಿಡದಾನೇ
"ಕೇಳಲೆ ಕೇಳಲ್ಲೇ ನನ್ನ ತಾಯಿ, ನೀ ಕೇಳೂ ॥ ೧೮ ॥

ಮನಿಯಾ ಬದಿಗೆಲ್ಲಾ ಬಲುಜೋಕೇ ತಾಯವ್ವಾ
ವರ್ಸಾರು ತಿಂಗಳೂ ಕಳ್ದ್ ಹೋಗುದು ತಾಯೇ"
"ಯೆಲ್ ಹೋಗುದಾರ ಹೋಗು ಮಗನೆ, ಯೆಲ್ಲೆ ಬರುದಾರು ಬಾ ಮಗನೇ
ಕುಸುಮಾಲಿಯರುಮನಿಗೇ ಹೋಗಬೇಡ ನನ ಮಗನೇ" ॥ ೧೯ ॥

ಅಟ್ಕೊಂದ ಮಾತಾ ಕೇಳನೆ ನರಜೂನಾ
ಮಾಳೂಗೀಯೊಳಗೇ ನೆಡುದನರಜೂನಾ
ಶಿದ್ದಿಲಿ ಶಿದ್ ಹೊನ್ನಾ ಜೋಳುಗಿಲ್ ಹೊಯ್ದಾನೆ ॥ ೨೦ ॥

ಶಿದ್ದಿಲಿ ಶಿದ್ ಹೊನ್ನಾ ಜೋಳುಗಿಲ್ ಹೊಯ್ಕಂಡೀ
ಮುಂದಿನಾ ಬಾಗಿಲದಾ ಹೆರಬಿದ್ ನೆಡುದಾನೇ
"ಕೇಳು ಕೇಳು, ನನ ತಾಯೇ, ಕೇಳಲೇ ನನ ತಾಯೇ
ಮನಿಯಾ ಬದಿಗೆಲ್ಲಾ ಬಲು ಜೋಕೇ ನನ್ನ ತಾಯೇ ॥ ೨೧ ॥

ಪರ ಊರಿಗೆ ಹೋಗಿ ಬರುವನೆ ಯೇಗೇ"
"ಯೆಲ್ಲು ಹೊಗುದಾರು ಹೋಗು ಮಗನೇ ಯೆಲ್ಲ ಬರುದಾರ ಬರು ಮಗನೇ
ಕುಸುಮಾಲಿಯರುಮನಿಗೇ ಹೋಗಬೇಡ ನನ ಮಗನೇ"
ಅಟ್ಬೊಂದ ಮಾತಾ ಕೇಳನೆ ಅರಜೂನಾ ॥ ೨೨ ॥

ಬಿದ್ದ ಮಾರಿಗವಾ ಹಿಡದೆನೆ ಅರಜೂನಾ, ಹಿಡದೆನೆ ಈಗಿನ್ನೇ
ಜೋಗಪ್ಪನರಮನೆಗೆ ನೆಡದನೆ ಅರಜೂನಾ, ನೆಡದನೆ ಅರಜೂನಾ
"ಜೋಗಿ ಜೋಗಿ"ರಂದೀ ಮೂರ್ ವಾಕ್ಸಿ ಕರದಾನೇ, ಕರದಾಗೇ
ಜೋಗಪ್ ಯದ್ ಹೆರಗೇ ಬಂದಾನೇ ಈಗಿನ್ನೇ ॥ ೨೩ ॥

"ಯೇನು ಕರದಿರಿ ನನ ಸ್ವಾಮೀ? ಯೆಂತ್ ಕರ್ದಿರಿ ನನು ಸ್ವಾಮೀ?
ಕರದಾ ಕಾರಣವಾ ವದುಗ್ಹೇಳೀ"
"ಯೇನಲ್ಲ ಜೋಗಪ್ಪಾ, ಯಂತಲ್ಲ ಜೋಗಪ್ಪಾ
ನಿನ ನಾಣಕಿನ್ನುರಗೀ ಕೊಡಬೇಕೂ ನನಗೇ" ॥ ೨೪ ॥

"ಯಾವ್ದ್ ಕೇಳುದರು ಕೇಳಿ ಸ್ವಾಮಿ, ಯಾವ್ದ್ ಬಿಡುದಾರು ಬಿಡಿ ಸ್ವಾಮೀ,
ನಾಣ ಕಿನ್ನುರುಗೀ ಕೊಡಲಾರೆ ನಾ ಯೇಗೇ
ನಾಣ ಕಿನ್ನುರುಗೀ ಕೊಡಲಾರೆ ನನ ಸ್ವಾಮೀ
ನನ ಹೊಟ್ಟಿ ಮೆಲೆ ಕಾಲಾ ಕೊಡಬೇಡಿ ನನು ಸ್ವಾಮೀ" ॥ ೨೫ ॥

ಅಟ್ಟೊಂದ ಮಾತಾ ಕೇಳನೆ ಅರಜೂನಾ
ಶಿದ್ದಿಲೆ ಶಿದ್ ಹೊನ್ನಾ ಅಳಕೊಟ್ಟಲರಜೂನಾ ॥ ತಕ್ಕೊಂಡ ಜೋಗಪ್ಪಾ
ನಾಣಾ ಕಿನ್ನುರಗೀ ತೆಗದಿನ್ನೆ ಕೊಟ್ಟಾನೇ
ನಾಣಾ ಕಿನ್ನುರುಗೀ ತಕ್ಕೊಂಡಲರಜೂನಾ ॥ ೨೬ ॥

ಕುಸುಮಾಲಿ ಕೆರಿಗೇ ನಡೆದನರಜೂನಾ ॥ ನೆಡುದನರಜೂನಾ
ಮೂರಂಬು ಮುಳುಕಾ ಹೊಡದಿನ್ನೆದ್ದಾನೆ
"ಅರಜುನೆಂಬ್ ಹೆಸರೂ ಹಿಂದಕಿರಲೆಂ"ದಾ
"ಜೋಗಿರಂಬ್ ಹೆಸರೇ ಊರ್‌ಮೇನ್ ಮೆರಿಲಂ"ದಾ ॥ ೨೭ ॥

ಜೋಗಪ್ಪಾಲ್ವೇಸಾ ತಾಳನರಜೂನಾ
ಅರಜೂನಾ ನೇಸಾ ತೆಗದಿನ್ನೇ ಇಟ್ಟಾನೇ
ಜೋಗಪ್ಪನ್ವೇಸಾ ತಾಳನರಜೂನಾ
ಕೊಣಿಯುತ ಮೆರಯೂತಾ ನೆಡೆದನರಜೂನಾ ॥ ೨೮ ॥

ಕಣಕಾಲದಲ್ ಕೊಣಿಯೂತಾ ಮೊಣಕಂಡಿಲಿ ಮೆರಿಯೂತಾ
ಕುಸುಮಾಲಿಯರಮನೆಗೆ ನೆಡದಾನೆ ಜೋಗಪ್ಪ
"ಕೇಳಿರೆ ಕೇಳೀರೆ, ಹಿತ್ಲಕಣ್ಣ ಗೌಡೀರಾ,
ಬಾಗಿಲ್ಗೆ ಬಂದರಿಗೇ ಬಿಕ್ಸ ನೀಡಿರವ್ವಾ ॥ ೨೯ ॥

ಅವರ್ ಕೊಟ್ಟಾ ಬಿಕಸಾ ನಾ ಕಿಟ್ಟವ್ನಲ್ಲಾ
ವಳಗಿದ್ದ ಕುಸುಮಾಲೀ ತರಬೇಕಂ"ದಾನೇ
ಯೇನೇ ನ್ಹೇಳಿದರೂ ಜೋಗಪ್ಪ ಕೇಳಾನೇ
ಕುಸುಮಾಲೀ ಬಿಕ್ಸಾ ತರಬೇಕಂದಾನೇ ॥ ೩೦ ॥

ಯೇಳೂ ಹಗ್ಲೂಲೀ ಯೇಳು ರಾತುರಿ ಕೊಣಿತಾನೇ
ಯಾರ್‌ಯಾರ್ ಕೊಟ್ ಬಿಕುಸಾ ಅವ ಕಿಟ್ಟೂದೆಲ್ಲಾ

"ಸಾಯಲಿ ಲೀ ಜೋಗೀ ಬೇಯಲಿ ಲೀ ಜೋಗೀ
ಜೋಗೀ ಬೆದಿಯಲ್ಲೇ ಇರಲಾರೆ ತಾಯೇ ॥ ತಾಯವ್ವ ॥ ೩೧ ॥

ಅಕ್ಕಾನಾ ಮನಿಗೇ ಹೋಗಾರು ಬರತೇನೇ
"ಅಟು ದೂರೆ ಬರುವಾಗೆ ಇಟ ದೂರೆ ಕಂಡಾರೂ
ಇನ್ನೂ ಬರದಿದ್ದ ಕುಸುಮಾಲೀ ಇಂದೇಕೇ ಬಂದಿಯೇ?
ಬಂದಾ ಕಾರಣವಾ ವದಗ್ ಹೇಳೂ ಕುಸುಮಾಲೀ" ॥ ೩೨ ॥

"ಯೇನಲ್‌ಕ್ಕಮ್ಮಾ ಯೆಂತಲ್ಲ ಲಕ್ಕಮ್ಮಾ,
ಜೋಗಿ ಬೆದಿಯಲ್ಲೀ ಇರಲಾರೆ ಅಕ್ಕಮ್ಮಾ"
ಅಟ್ಟೊಂದ ಮಾತಾ ಹೇಳು ಹೊತ್ತೀನಲ್ಲೀ
ಜೋಗಪ್ಪ ಬೆನ್ನೀಗೇ ನೆಡುದಾನೆ ಯೇಗಿನ್ನೇ ॥ ೩೩ ॥

"ಕೇಳಿರಿ ಕೇಳಿರೀ ಮುಂದ್ಲಕಣ್ ತೊತ್ತೀರಾ
ಬಾಗ್ಲಕೆ ಬಂದರೀಗೆ ಬಿಕ್ಸಾ ನೀಡೀರೀ"
"ನೀವೆ ಕೊಟ್ಟಾ ಬಿಕುಸಾ ನಾ ಕಿಟ್ಟವ್ನಲ್ಲಾ
ಕುಸುಮಾಲೀ ಬಿಕುಸಾ ತರಬೇಕಂ"ತಾನೇ ॥ ೩೪ ॥

"ಸಾಯುಲೋ ಲೇ ಜೋಗೀ ಬೇಯಲೋ ಲಿ ಜೋಗೀ
ಜೇರೂ ಬಂದನವಾ ಕೊಡುತಾನೆ ಈ ಜೋಗೀ?
"ಸೊಕ್ಕಿನ ಕುಸುಮಾಲೀ, ಮಿಕ್ಕಿ ಮಾತಾಡ್ಬೇಡಾ
ನಿನ ಗಂಡನ ಗುರುತಾ ನನಗಲ್ಲಂ"ತಾನೇ ॥ ೩೫ ॥

ಅಟ್ಟೊಂದ ಮಾತಾ ಕೇಳಳೆ ಕುಸುಮಾಲೇ
ಹಿತ್ಲ ಕಣ್ಣ ಬಾಗ್ಲಾಗೇ ಹೆರಬಿದ್‌ಸೆಡ್ಡಾಳೂ
"ತಂಗೀ ಮನಿಗಾರೂ ಹೋತನೆ ಲಕ್ಕಮ್ಮಾ"
"ಯೆಂದೂ ಬರದೀದಕ್ಕಾ ಇಂದ್ಯೇನ್ ಬಂದೀಯೇ?" ॥ ೩೬ ॥

ಬಂದಾ ಕಾರಣವಾ ವದಗ್ಹೇಳಂ"ದಾಳೇ
"ಯೇನಲ ತಂಗಮ್ಮಾಯೆಂತಲ್ಲ ತಂಗಮ್ಮಾ
ಜೋಗಿ ಬೆದಿಯಲ್ಲಿ ಇರಲಾರೆ ತಂಗಮ್ಮಾ
ಅಟ್ಟೊಂದ ಮಾತಾ ಹೇಳೂ ಹೊತ್ತೀನಲ್ಲೀ ॥ ೩೭ ॥

ಜೋಗಪ್ಪ ಲೀಗಾ ಸಡದನ್ಯೇಗಿನ್ನೇ
ಜೋಗಪ್ಪ ಬೆನ್ನೀಗೇ ಹೋಗೂ ಹೊತ್ತಿನಲ್ಲೀ
ವಳುಗಿದ್ದ ತಂಗೀ ಬಿಕ್ಸಾ ತಂದಾಳೂ
"ನೀ ಕೊಟ್ಟಾ ಬಿಕ್ಸಾ ನಾ ಕಿಟ್ವನಲ್ಲ || ೩೮ ||

ವಳಗಿದ್ದ ಕುಸುಮಾಲೀ ತರಬೇಕಂ"ತಾನೇ
"ಸಾಯಲೋ ಲೀ ಜೋಗಿ ಬೇಯಲ್ಲೋ ಲೀ ಜೋಗೀ
ಜೋಗೀ ಬೆದಿಯಲ್ಲೇ ಇರಲಾರೆ ತಂಗಮ್ಮಾ", "ಸೊಕ್ಕಿನ
ಕುಸುಮಾಲೀ, ಮಿಕ್ಕಿ ಮಾತಾಡ್ ಬೇಡಾ || ೩೯ ||

ನಿನ ಗಂಡನ ಗುರುತೂ ನನಗೆಲ್ಲಂ"ತಾನೇ
"ಕೇಳಲೆ ಕೇಳಲ್ಲೇ ತಂಗಮ್ಮಾ, ನೀ ಕೇಳೂ
ಅತ್ತೂಗೀ ಮನಿಗೇ ಹೋತೆನೆ ನಾ ಯೇಗೇ"
ಅಟ್ಟೊಂದಾ ಮಾತಾ ಹೇಳದೆ ಕುಸುಮಾಲೀ || ೪೦ ||

ಲತ್ತೂಗೀ ಮನಿಗೇ ಬಂದಳೇ ಕುಸುಮಾಲೀ
"ಯೆಂದೂ ಬರದಿದ್ ಕುಸುಮಾಲೀ ಇಂದ್ಯಾಕೇ ಬಂದೀಯೇ?
ಬಂದಾ ಕಾರಣವಾ ವದಗ್ಗೇಳೇ ಕುಸುಮಾಲೀ"
"ಯೇನಲ್‌ತ್ತೂಗೇ ಯೆಂತಲ್ಲ್‌ತ್ತೂಗೇ || ೪೧ ||

ಜೋಗಿ ಬೆದಿಯಲ್ಲೇ ಇರಲಾರೆ ಲತ್ತೂಗೇ
ಕೈಕಾಲಲಿ ಕೊಣುತಾನೇ ಮೊಳಕಾಲಲಿ ಮೆರಿತಾನೇ
ಜೇರೂ ಬಂದನವಾ ಕೊಡುತಾನೆಲತ್ತೀಗೇ
ಯಾರಂತೆ ಕೈನವ್ನೇ ಯಾರಂತೆ ಕಾಲ್ನವ್ನೇ? || ೪೨ ||

ಯಾರಂತೆ ಮುದ್ದೂ ಮೊಕದವ್ನೆ ಕುಸುಮಾಲೇ?"
"ನಿನ್ನಂತೆ ಕೈನವನೇ ನಿನ್ನಂತೆ ಕಾಲ್ನವನೇ
ನಿನ್ನಂತೆ ಮುದ್ದೂ ಮೊಕದವ್ನೆ ಲತ್ತೂಗೇ"
"ನನ್ನಂತೆ ಕೈನವ್ನಾದ್ರೇ ನನ್ನಂತೆ ಕಾಲ್ನವ್ನಾದ್ರೇ || ೪೩ ||

ನನ್ನಂತೆ ಮುದ್ದೂ ಮೊಕದವ್ನಾದಾರೇ
ನನ್ನ ತಮ್ಮನ ಹೂರತೂ ಪರರಲ್ಲ ಕುಸುಮಾಲೀ"

"ಸಣ್ಣಕ್ಕೀ ತೊಳಿಯೇ ಹೆಸರಿಡೆ ಕುಸುಮಾಲೀ
ಹಸವಂತಾರ ತಿರಗೀ ಬರತನೆ ನನ ತಮ್ಮಾ" ॥ ೪೪ ॥

ಅಟ್ಟೊಂದಾ ಮಾತಾ ಹೇಳದ್ ಕೇಳದೆ ಕುಸುಮಾಲೀ
ಹಿಂತುರಿಗೀ ಮನೆಗೆ ಬಂದಳೆ ಕುಸುಮಾಲೀ ॥ ಬಂದಳ್ಯೇಗಿನ್ನೇ
ಚೆನ್ನಾದ ಕೊಡವನವಾ ಹಿಡ್ದಳು ಕುಸುಮಾಲೀ
ಮೋಡ್ಲನ ಜಲಿದೀಗೇ ನಡೆದಳು ಯೇಗಿನ್ನೇ ॥ ೪೫ ॥

ಮೋಡ್ಲನ ಜಲದೀಗೇ ನಡೆದಲೂ ಯೇಗಿನ್ನೇ
ಗಾಡದಿಂದೆ ನೀರಾ ಮೊಗುದಳು ಯೇಗಿನ್ನೇ ॥ ಕುಸುಮಾಲೀ
ಹೆಂತಿರುಗೀ ಮನಿಗೇ ಬಂದಳು ಕುಸುಮಾಲೀ
ಸಣ್ಣಕ್ಕೀ ತೊಳದೀ ಯೆಸರಿಟ್ಟು ಯೇಗಿನ್ಯೇ ॥ ಯೆಸರಿಟ್ಟಡ್ಗಿ ಮಾಡಾಳೇ
॥ ೪೬॥

ನಿತ್ತನಿತ್ತಲ್ಲೇ ಪತ್ರ ಬರಿದಾಳೂ
ಬಾಗಲದನ ಗಿಳೀನಾ ಕರದಾ ಕುಸುಮಾಲೀ
"ಕೇಳಲ್ಲೇ ಕೇಳಲ್ಲೇ ಗಿಳಿರಾಮ, ನೀ ಕೇಳೂ
ಕೊಟ್ಟ ಪತ್ರಾನಾ ಪಕ್ಯದಲ್ಲಿಟ್ಟಕಂಡೀ ॥ ೪೭ ॥

ಹೋಗಿ ಬಾರೆ ಕುಟ್ಣಣ್ಣಾನ ಬಳಿಗಾರೆ ಗಿಳಿರಾಮಾ, ಬಳಿಯಲ್ಲಿ ಗಿಳಿರಾಮಾ
ಪಕ್ಕಸದ ಪಟ್ಟೀ ತೆಗದಿನ್ ವೋದ್ ಹೇಳೂ"
"ನಾ ಹೋಗುವಾಗ ಗಿಳಿಯಾ ಸಾಕೀದೇ
ಗಿಳಿರಾಮ ನನ ಗುರುತಾ ಹಿಡುದಾಳ ಯೇಗಿನ್ನೇ ॥ ೪೮ ॥

ಮಡದೀ ನನ ಗುರುತಾ ಮರತಾಳು ಯೇಗಿನ್ನೇ
ನಾ ಹೋಗುವಾಗೇ ಬೆಕ್ಕ ನಾ ಸಾಕಿದ್ದೇ
ಬೆಕ್ಕು ನನ ಗುರುತಾ ಹಿಡದಳು ನಾ ತಂದಾ
ಮಡದೀ ನನ ಗುರುತಾ ಮರತಾಳು ಯೇಗಿನ್ನೇ ॥ ೪೯ ॥

ನಾ ಹೋಗುವಾಗೇ ಬಾಳೀ ನಾ ನೆಟ್ಟೀದೇ
ಬಾಳೀ ನನ ಗುರುತಾ ಹಿಡದಳೂ ಯೇಗಿನ್ನೇ ॥ ನಾ ತಂದಾ

ಮಡದೀ ನನ ಗುರುತಾ ಮರೆತಳು ಯೇಗಿನ್ನೇ
ನಾ ಹೋಗುವಾಗೇ ಕುನ್ನೀ ನಾ ಸಾಕೀದೇ ॥ ೫೦ ॥

ಕುನ್ನೀ ನನ ಗುರುತಾ ಹಿಡದಳು ಯೇಗಿನ್ನೇ ॥ ನಾ ತಂದಾ
ಮಡದಿ ನನ ಗುರುತಾ ಮರೆತಳು ಯೇಗಿನ್ನೇ"
ಕೊಟ್ಟಾ ಪತ್ರಾವಾ ವೋದಿನ್ನೀ ನೋಡಾನೆ ಕುಟ್ಟಣ್ಣ
ಕೊವೀ ಕೊಡಲೀಯ ತಯ್ಯ್ಯಾರ್ಸಿ ಕಂಡಾನೇ ॥ ೫೧ ॥

ಆಳೂ ಮಂದೀಯಾ ವಟ್ಟಿನ್ನೇ ಮಾಡಾನೇ
ಗುಂಡೂ ತಯ್ಯ್ಯಾರಿಸೀ ಕಂಡನೇ ಕುಟ್ಟಣ್ಣಾ ॥ ೫೨ ॥

ಬೇಕಾದ್ದಾಯ್ದುವಾ ತನ್ಗಾರ್ಸ ಕಂಡಾನೇ
ಮಂದಿ ಮಾರ್ಬಲವಾ ವಟ್ಟಿನ್ನೇ ಮಾಡ್ಯಾನೇ ॥ ವಟ್ ಮಾಡ್ದ ಕುಟ್ಟಣ್ಣಾ
ಬಯ್ಲಲ್ಲಿ ಬರುತನ್ನ ಕೆಂದೂಳು ಹಾರಾದೆ
ಬಯ್ಲಲ್ಲಿ ಬರುವಾಗೀ ದೂಳೆಲ್ಲ ಹಾರ್ತಾದೇ
ಕೆಂದೂಳು ಹಾರಸ್ತೇ ಬರತಾನೆ ಕುಟ್ಟಣ್ಣಾ ॥ ೫೩ ॥

ಆಟ ದೂರೆ ಬರುವಾಗೇ ಇಟದೂರೆ ಕಂಡಾನೇ
ಜೋಗಪ್ಪನ್ಯೇಸಾ ತೆಗುದನೆ ಅರಜೂನಾ
ಅರಜೂನಾನ್ಯಾಸಾ ತಾಳಿನ್ನೆ ಕಂಡಾನೆ ॥ ತಾಳಾನೆ ಅರಜೂನಾ
"ಜೋಗಪ್ಪ ಅಂಬ್ ಹೆಸರೂ ಹಿಂದಕಿರಲಂ"ದಾ ॥ ೫೪ ॥

"ಅರಜೂನಾ ಲಂದ್ ಹೆಸರಲಿ ಮುಂದಕೆ ನಡಿಲಂ"ದಾ
ಆಟದೂರೆ ಬರುವಾಗೇ ಇಟದೂರೆ ಕಂಡಾಳೂ
ಮಾಳೂಗೀ ವಳಗೇ ನಡದಳು ಕುಸುಮಾಲೀ ॥ ೫೫ ॥

ಬಂಗಾರದ ಹರಿಯಳವಾ ಹಿಡುದಾಳು ಯೇಗಿನ್ನೇ॥ ಕುಸುಮಾಲೀ
ಕುಟ್ಟಣ್ಣಗೆದುರಾಗೀ ಬರತದ್ ಯೇಗಿನ್ನೇ
ಬಲಗೈಯ್ಯಲಾರೂತೀ ಯಡಗೆಯ್ಯಲು ಮೂಗೂತಿ
ಕುಟ್ಟಣ್ಣಗೆದುರಾಗೀ ಬಂದಳು ಕುಸುಮಾಲೀ ॥ ೫೬ ॥

"ಕೇಳಲ್ಲೋ ಕೇಳಲ್ಲೋ ಕುಟ್ಟಣ್ಣ ನೀ ಕೇಳೂ
ನನ್ನ ಮುತ್ತಯ್ದುತನವಾ ಬಿಟ್‌ಹೋಗು" ಅಂದಾಳೂ

ಅಟ್ಟೊಂದ್ ಮಾತಾ ಕೇಳನೆ ಕುಟ್ಟಣ್ಣಾ
ಮಂದೀ ಮಾರ್ಬಲವಾ ಹಿಂದಕಿಟ್ಟಾನೇ || ೫೭ ||

ಕೋವಿ ಗುಂಡೆಲ್ಲಾ ತೆಗದಿನ್ನಿಟ್ಟಾನೇ
“ಕೇಳಲೊ ಕೇಳಲ್ಲೋ ಬಾವಯ್ಯಾ ನೀ ಕೇಳೂ
ಕೈಕಾಲ ಸಿರಿ ಮೊಕವಾ ತೊಳದಿನ್ ಬರುಬೇಕೋ || ತೊಳದಿಕೊ ನನ ಬಾವಾ
ಪಟ್ಟಿ ಮಂಚದಲ್ಲೀ ಕುಳಬೇಕು ನನ ಬಾವಾ || ೫೮ ||

“ಕೇಳಲ್ಲೊ ಕೇಳಲ್ಲೊ ಅರಜೂನಾ ನನ ಬಾವಾ
ಸತಿಪತಿ ವಡನೇ ಯೆಂತಂಬು ತರ್ಕಾವೋ?”
“ಕೇಳಲೊ ಕೇಳಲ್ಯೊ ಬಾವಾಯ್ಯ ನೀ ಕೇಳೂ
ಪಗುಡೀ ಆಟದಲ್ಲೇ ಬಿದ್ದಂತ ಸರತಾವೋ
ಪಗಡೀ ಆಡ್ವಾಗೇ ಬಿದ್ದಂತಾ ಸರತಾವೋ || ೫೯ ||

ಆದರೂ ಸಲನೂಕೆ ತಿರಗಿದೆ ವೇಸಾವಾ”
“ಕೇಳಲ್ಲೋ ಕೇಳಲ್ಲೋ ಬಾವಯ್ಯ ನೀ ಕೇಳೂ
ಸತಿಪತಿ ವಡನೇ ತರಕ ಸರಿಯಲ್ಲಾ”
“ಕೇಳಲೆ ಕೇಳಲ್ಲೀ ಕುಸುಮಾಲಿ ನನ ತಂಗೀ || ೬೦ ||

ಗಾಡದಿಂದಡಗೀ ಅನುಮಾಡು ಯೇಗಿನ್ನೇ|| ಅನುಮಾಡೆ ನನ ತಂಗೀ
ಸತಿಪತಿಯರ ಕೋಡೇ ತರಕ ಸರಿಯಲ್ಲ”
ಅಟ್ಟೊಂದ ಮಾತಾ ಕೇಳದೆ ಕುಸುಮಾಲೀ
ಗಾಡದಿಂದಡಗೀ ಮಾಡದೆ ಕುಸುಮಾಲೀ || ೬೧ ||

ಅಟ್ಟಂತಾ ಅಡಗೀ ಬಡ್ಸದೆ ಕುಸುಮಾಲೀ
ಉಪ್ಪೂಲಾದಾರೇ ಬಡ್ಸಲೆಲ್ಲ ಕುಸುಮಾಲೀ
ಉಪ್ಪೂಲಾದರೇ ಬಡ್ಸಲೆಲ್ಲ ಯೇಗಿನ್ನೇ
ಉಪ್ಪಾನಾದರೇ ಬಡ್ಸಲೆಲ್ಲ ಕುಸುಮಾಲೀ
ಹಿತ್ಲಕಣ್ಣ ಬಾಗ್ಲದಾಗೆ ನೆಡ್ದಳು ಕುಸುಮಾಲೀ || ೬೨ ||

ಕುಂತ್ಯಮ್ಮಾ ಬಳಿಗೆ ನೆಡ್ದಳು ಯೇಗಿನ್ನೇ
“ಕೇಳಲೆ ಕೇಳಲೇ ಕುಸುಮಾಲೀ, ನೀ ಕೇಳೂ

“ಉಪ್ಪಾನಾದರೇ ಬಡಿಸು ನನಗಿನ್ನೇ”
ಕುಂತ್ಯಮ್ಮಾ ಬಳಿಗೇ ನೆಡ್ದಳು ಕುಸುಮಾಲೀ ॥ ೬೩ ॥

ಅಲ್ಲೀ ಲ್ಯೆಗಿನ್ನೇ ಹೋದಳು ಕುಸುಮಾಲೀ
ಅಲ್ಲಿಗಾದಾರೇ ಹೋದನು ಅರಜೂನಾ
ಕಟ್ಟೀದಾ ಮುಡಿಯಾ ಹಿಡ್ದಾನೆ ಯೇಗಿನ್ನೇ ॥ ಹಿಡೂ ತಾಸಿನಲ್ಲೀ
ದರಬೀಜಡ್ಯಾಗಿ ನಿತ್ತಿತು ಕುಸುಮಾಲೀ ॥ ೬೪ ॥

“ಕೇಳಿರಿ ಕೇಳಿರೀ ನನ ಸ್ವಾಮಿ ನೀವ್ ಕೇಳಿ
ನಿಮ್ಮ ವಡನೀಗೇ ಬರನಾರೆ ನನ ಸ್ವಾಮೀ, ಬರಲಾರೆ ಯೇಗಿನ್ನೇ
ವರಸಾಕ್ ವಂದಸಾರೇ ವಡದಿ ಮೂಡೂವೇ
ಕೇಳಿರಿ ಕೇಳಿರಿ ನನ್ ಸ್ವಾಮಿ, ನೀವ್ ಕೇಳೀರಿ ॥ ೬೫ ॥

ಸುರಗೀ ಕಂಡಿ ಮೇನೇ ವಡದಿನ್ನೇ ಮೂಡುವೇ
ಸುರಗೀ ಕಂಡಿ ಮೇನ್ ವಡದೆ ಮೂಡೂವೇ
ಮೂರದಿನಿನ್ನೇ ಮುಡದೀ ಬೀಡಿ.” ॥ ೬೬ ॥

● **ಕೆಲವು ಪದಗಳ ವಿವರಣೆ**

| | | |
|---|---|---|
| ನಜಿಯಿಲ್ಲ | = | ಲಜ್ಜೆಯಿಲ್ಲ |
| ಹಿತ್ತಲಕಣ | = | ಮನೆಯ ಹಿಂದಿನ ಬದಿ |
| ಮ್ಯೆಲರ | = | ಮೇಲಾರ, ಪದಾರ್ಥ |
| ಬೆಗರಿಸು | = | ಕರಗಿಸು, ಬೇಯಿಸು |
| ಸೂರ್ಯಮ | = | ಸೂರ್ಯ |
| ಶಡು | = | ಸಿಡಿ |
| ಶೆದ್ದಿ | = | ಶಿದ್ದೆ |
| ವಾಕ್ಸಿ | = | ವಾಕ್ಯ, ಬಾರಿ |
| ನಾಣ ಚಿನ್ನುರಗಿ | = | ಕಿನ್ನರಿ |
| ನ್ಯಾಸಾ | = | ವೇಶ |
| ಬಿಕ್ಸ | = | ಭಿಕ್ಷೆ |
| ರಾತುರಿ | = | ರಾತ್ರಿ |
| ಕಿಟ್ಟು | = | ಮುಟ್ಟು |
| ಬೆದಿ | = | ಬದಿ |
| ಜೀರೂ | = | ಸಣ್ಣ ಹಿಡುದಿ |
| ಹಸವಂತಾರ | = | ಹಸಿವಾಗಿ |
| ಹರಿಯಾಣ | = | ಹರಿವಾಣ |
| ತರ್ಕಾವೊ | = | ತಕರಾರು, ಜಗಳ |
| ಅಟ್ಟಂತಾ | = | ಬೇಯಿಸಿದ |
| ದರಬಿಜಡ್ಡು | `= | ದೂರ್ವೆ, ದೂರ್ವಾ |

■ ಹೇಳಿದವರು: **ದೇವಿ ಗಣಪತಿ ನಾಯ್ಕ**, ಊರಕೇರಿ

# ೨. ಮಹಾಶೇಷನ ಸೇಡು

ಪಾಂಡೋರಾಜಲರಸೂ ಲಂಬವನೇ
ಹೊತ್ತಾರೊಂದು ಮೊದಲೆಲೇಳೂವಾನೋ ॥ ೧ ॥

ಕಯ್ಯಲ್ಲೇ ಚಂಬೂಗಿ ತಡೆದಾನೂ
ಮಾಡಿನೋರಾ ಚಿಲುಮೆಗೆ ನಡೆದಾನೂ ॥ ೨ ॥

ತೊಳುಕಾಡಿ ಹಣಿನೀರ ಮೊಗದಾನೂ
ಕಯ್ಯಕಾಲು ಮೊಕವೆ ತೊಳದಾನು ॥ ೩ ॥

ಪಾಂಡು ರಾಜಿಲರಸೂಲಂಬುವನೂ
ಇಂದೆ ತಿರುಗಿ ಮನಿದಾರಿ ಹಿಡದಾನೂ ॥ ೪ ॥

ನಾವು ಹೀಗೆ ಇದ್ದು ಹೀಗೆ ಇರಬಾರದ
ಅಂದೇಳೀ ಹೆರಿಯರಮರಗ ಕಲಿಬೇಕಂದಾನೂ ॥ ೫ ॥

ಹಾಗೇ ವಂದು ವೇನಾ ಮಾಡ್ಯಾನೂ ?
ಯಮಲಿಂಗಾ ಮಾಡಬೇಕಂದಾನೂ
ಮಹಾಲಿಂಗ ಮಾಡಬೇಕಂತಾನೂ ॥ ೬ ॥

ಪಂಡೂರಾಜಿಲರಸೂ ಲಂಬವನೇ
ಮನಸ್ಸಿನಲ್ಲಿ ವೇನಾ ಲೆಣೀಸ್ಯಾನೂ ॥ ೭ ॥

ಯೇಳಮುಂಡಿನ ಬಾವೀ ಕಡದಾನೋ
ನೀರಿನೊಂದು ಜಲವೆ ಯಿಲ್ಲಾವೋ
"ಯೇ ಹರಹರಾ ಶಿವನೇ" ಲಂದಾನೋ
ಹಾಗೆ ವೇನು ಮಾಡ್ಯಾನೋ ॥ ೮ ॥

ಮಾಲಿಂಗಾ ಮಾಡಬೇಕಂದಾನೋ
ಮಾಲಿಂಗಾ ಮಾಡು ಸಮಿದಲ್ಲೀ ॥ ೯ ॥

ಮಾಶಿಕನಾ ಮೊಟ್ಟೆ ಶಿಕ್ಕೈದವೋ
ಮಾಶಿಕನ ಮೊಟ್ಟೆ ಕಡದೋದೋ ॥ ೧೧॥

ಮಾಶಿಕಗೆ ಶೀಟ್ಟೇ ಬಂದಾವೋ
ವಂದೇನಂದೆ ಶಿಟ್ಟೇ ಬಂದಾವೋ ॥ ೧೨ ॥

ತನ ಮೊಟ್ಟೆಯಿಲ್ಲ ಮರಿವೆಯಿಲ್ಲಂದೇ
ಶಿಟ್ಟಿನಿಂದ ಬರವೋತ್ತೈದಾವೋ ॥ ೧೩ ॥

ಆಗ ವನ್ನಾ ವೇನಾ ಮಾಡ್ಯಾಳೋ
ಕೆರಿಯಲ್ಲಿ ವಿಸವೇ ಬಿಡುವಾದೋ ॥ ೧೪ ॥

ಹಾದಿ ಮೇಲೆ ತಿರವೂ ಜನಪತಿಯೇ
ಆ ನೀರಾ ತಿನವಾತ್ತೈದಾವೋ ॥ ೧೫ ॥

ಆ ನೀರಾ ತಿಂದಾ ಜನರೆಲ್ಲಾ
ಲವರದುವೇ ಮುರುಚೇ ಪಡೆದಾರೋ ॥ ೧೬ ॥

ಲವರದುವೇ ಮುರುಚೇ ಪಡ್ಡ ಮೇಲೆ
ಲೇಲರ ಸೂಗೇ ಯೇಟ್ಟು ಶಿಟ್ಟೇ ಬಂದಾವೋ ॥ ೧೭ ॥

ಯೇನಂದೇ ಶಿಟ್ಟೇ ಬಂದಾವೋ
ಗಣಪು ಜಟ್ಟಿ ಲಂಬಿಗ ಕುಟ್ಲ ಜಟ್ಟಿ ಲಂಬಿಗ ॥ ೧೮ ॥

ಈಗೆ ಮಾಶಿಕನಾ ಕೊಲಬೇಕಂದಾನೋ
ಲಾಗೆವಿನ್ನೆವೇನಾ ಮಾಡ್ಯಾನೋ ॥ ೧೯ ॥

ಹೊತ್ತಾರದೊಂದು ಮೊದಲೇ ಯೇಳುವಾನೋ
ಬಿದ್ದಾದೊಂದು ಹಾರೆ ಹಿಡದಾನೋ ॥ ೨೦ ॥

ನೆಡುದಾನು ಲಾಚೇರಿ ಮನೆಗೆ
"ಕೇಳೋ ಕೇಳೋಲಾಚೇರಿ ಮಗ ಕೇಳೋ ॥ ೨೧ ॥

ಕೇಳಲಕೇಳೋ ಲಾಚೇರಿ ಮಗ ಕೇಳೋ
ನಾಗು ಸುರತಿನಾಗೂನಿಗೆಯಬೇಕೋ ॥ ೨೨ ॥

ತಾಗಿದೊಂದುಲನವೇ ಕೊಡುತ್ತೇನೇ"
ಲಟ್ಟು ವಂದುಮಾತಾ ಕೇಳ್ಯಾನೋ ॥ ೨೩ ॥

ನಾಗುಸುರತಿ ನಾಗೂನಿ ಗೈದಾನೋ
ಗೆಯ್ಯಿದೊಂದು ಲಣವೆ ಕೊಡುವಾನೋ ॥ ೨೪ ॥

ನಾಗಸುರತಿ ಕಯ್ಯಾಗ ತಡದಾನೋ
ಹಿಂದ ತಿರುಗೆ ಮನೆಗೆ ಬರುವಾನೋ ॥ ೨೫ ॥

ನೆಡದಾನೋ ಕೆರಿಯಾ ದಿಂಬಾಕೇ
ಕೆರಿಯ ದಿಂಬಮ್ಯಾಲೇ ಕುಳುವಾನೋ ॥ ೨೬ ॥

ನಾಗುಸುರತಿ ನಾಗೂನಿ ನುಡಿಸ್ಯಾನೋ
ಮಣಿನಾಗ ವೋಡೇ ಬಂದಾವೂ ॥ ೨೭ ॥

ಲರಸು ಸದರಲೇನಾ ಮಾಡ್ಯಾನೋ
ಲೇ ಮಣಿನಾಗನ ತಲಿಯೇ ಲಿಡದಾನೋ ॥ ೨೮ ॥

ದೊಡ್ಡದೊಂದು ದಳ್ಳೀಯ ತುಂಬ್ಯಾನೋ
ಪಾಂಡೋರಾಜಿಲರಸೂ ಲಂಬವನೇ
ಅವನ್ ದಂಡಿಗೆ ಹೋಗುಕಾಗಾತ ಬಂದವೋ ॥ ೨೯ ॥

"ಕೇಳೇ ಕೇಳಲಮಡದಿ ನೀ ಕೇಳೇ
ನಾ ದಂಡೀಗಾದರ ಹೋಗೇ ಬರುತನಕಾ ॥ ೩೦ ॥

ಕೋಣೇದೊಂದು ಬಾಗೀಲ ತೆಗಿಬಾರವೇ"
ಲಟ್ಟೊಂದೂ ಮಾತಾ ಹೇಳ್ಯಾನೋ ॥ ೩೧ ॥

ಲರಸನಾದರ ದಂಡೀಗೆ ಹೋದಾನೋ
ಲರಸನಾದರ ದಂಡಿಗೆ ಹೋದ ಮೇಲೆ ॥ ೩೨ ॥

ಯೇ ಮಡದಿನಾಗರೆವೇನಾ ಮಾಡ್ಯಾಳೋ?
ಕೋಣೆದೊಂದು ಬಾಗೀಲ ತೆಗಿದಾಳೋ ॥ ೩೩ ॥

ಕೋಣೆವಳಗೆ ಹೋಗೇಲೇ
ಮಣೀನಾಗ ವೆಡಿಯೇ ಬಿಚ್ಚೇಲೇ ॥ ೩೪ ॥

ಮಡದಿನರ ಮುರತೀ ಪಡಿದಾಳೋ
ದಂಡೀಗೋದ ಗಂಡಾ ಬಂದಾನೋ ॥ ೩೫ ॥

ಮುಡಿನಾಗ ವೆಡಿಯೆ ಬಿಚ್ಚಾಳೂ
ಲರಸುನಾದರ ಮುರುತೀ ವಡಿದಾನೋ ॥ ೩೬ ॥

● **ಕೆಲವು ಪದಗಳ ವಿವರಣೆ**

ಮಾಶಿಕ = ಮಹಾಶೇಷ, ದೊಡ್ಡ ಸರ್ಪ
ಮುರುಚೆ = ಮೂರ್ಛೆ
ಲಾಚೇರಿ = ಆಚಾರಿ
ಲಿನ = ಹಣ
ಕಾಗತ = ಕಾಗದ

■ ಹೇಳಿದವರು: **ಕುಟ್ಟ ಜಟ್ಟಿ ಅಂಬಿಗ,** ಗಣಪ ಜಟ್ಟಿ ಅಂಬಿಗ

# ೩. ಶಂಬೂಕ ದೈತ್ಯನ ಸಂಹಾರ

ಈ ಶುಕದ ವಂದೆ ರಾಜ್ಯವಳಗೋ
ಅಲ್ಲೆ ವಳುವ ಹದಿನಾಲಕು ಶದರಾವೋ
ಈ ಬೆರಳೀಯಾ ಕೋಟೇ ವಳಗೋ
ಬೆರಳೀಯಾ ಶದರಾದ ವಳಗೇ
ರಾಮಸ್ವಾಮಿ ಲಕವಿಂದ ದೊರೇಯೋ
ಬೆರಳೀಯಾ ಶದರದ ಮೇನೇಲೋ
ಈಗೇ ಕಾಲ ಬಿಟ್ಟೆ ತೂಗೂತಾ ವಳವಾಗೇ
ಅಶುತೋ ಮಡದಿಯಾದ ರಿದೇವಿಯೂ

ತಮ್ಮ ಪುರುಶರೊಂದೆ ಬಳಿಯೂ ಬಂದಾಳೋ
ಈಗೇ ಕೇಳಿ ಕೇಳಿ ಪುರುಶರಿಯಾ ಲಂದಾಳೋ
ಈಗ ನಮ್ಮ ವಂದ್ ರಾಜ್ಯದ ವಳಗೇ
ಈಗ ಹರಗಿದಲ್ಲಿ ಬತ್ತಕ ನೆರಳೇಲೋ
ಕಟ್ಟಿದಲ್ಲಿ ಕರಗೋಳಿಗೆ ಬಿಶಲೇಲೋ
ಈಗ ನಮ್ಮ ವಂದು ರಾಜ್ಯದ ವಳಗೇ
ಈಗೆ ನಮ್ಮಕಿಂತು ದೊಡ್ಡೋರ ಯಾರೇಲೋ
ಈಗೆ ನಮ್ಮ ಮೇನೆ ಯಾರೇ ವೈರೀಯೋ
ಈಗ ಯಾವವೊಂದು ಗತಿಯೇ ಲಾದಾರೇ
ಈಗ ನನ್ನಿಂದೆಡವದ ಕಂತೆ ಬಡಶೂಕಾಗಾವೋ
ಈವ ವೊಂದು ರಾಜ್ಯ ವಳಗೋ
ಈಗ ನಮ್ಮಕಿಂತು ದೊಡ್ಡೋರ್ಯಾರಂದೇ
ಈಗೆ ಶಲ್ಪ ಮಾತ್ರೆ ನೋಡೇ ಬರಬೇಕೂ
ಅಟ್ಟಲ ವಂದು ಮಾತಾ ಹೇಳವಾಗೇ
ರಾಮಶ್ವಾಮಿ ಶಾಕಿದೊಂದು ಅಂಗೋಜನ ಕರದಾನೋ
"ಈಗೇ ಕೇಳೋ ಕೇಳೊ ಅಂಗೋಜ ಲಂದಾನೋ
ಈಗೆ ನಾಲ್ಕು ರಾಜಿ ನೋಡೇ ಬರಬೇಕೋ"
ಈಗೇ ಲಟ್ಟಲವದೇ ಮಾತಾ ಹೇಳೇಲೋ
ಈಗೇ ಅಂಗೋಜನ ಬಿಡವೂತ್ತೈದಾನೋ
ಬಡಗದೊಂದು ರಾಜೀಕ ನಡದಾನೋ
ಬಡಗದೊಂದು ರಾಜ್ಯ ವಳಗೋ
ಅಲ್ಲೇ ಬಾಲೇಶಮರಮೂರ್ತಿ ಕಂಡಾನೋ
ಅಲ್ಲಿಂದ ಯಲ್ಲೀಗ ನಡೆದಾನೋ?
ಈಗೇ ಮೂಡಿನೊಂದು ರಾಜೀಕ ನಡೆದಾನೋ
ಈಗೇ ಮೂಡನೊಂದು ರಾಜ್ಯಾದ ವಳಗೋ
ಅಲ್ಲಿ ಶೂಲಿರಾಜ ಚಂದೂ ರಾಯರೂ
ಈಗೇ ಅಲ್ಲಿಂದಾ ಯೆಲ್ಲೀಗೆ ನಡೆದಾನೋ?

ಈಗೆ ತಂಕಲೊಂದು ರಾಜೀಕ ನಡೆದಾನೋ
ಈಗೇ ತೆಂಕಲಾ ರಾಜೀಕ ವಳಗೋ
ಈಗೇ ತೆಂಕಲಾ ರಾಜ್ಯ ವಳಗೋ
ಅಲ್ಲಿ ಶಿದ್ದೆಶವರ ಮೂರುತಿ ಕಂಡಾನೋ
ಅಲ್ಲಿ ಶಿದ್ದೇಶವರ ಮೂರೂತಿ ನೋಡೇಲೇ
ಕಂತುನಾಡ ರಾಜೀಕ ನಡೆದಾನೋ
ಕಂತುನಾಡ ರಾಜ್ಯಾ ವಳಗೋ
ಅಲ್ಲೆ: ಆಶೆಗುಡೆಗೆ ಈಶೇಗೂಡೇಗೋ
ಶಂಬುಕುಮಾರ ದೈತ್ಯಲಂಬೋನೋ
ಅಲ್ಲೇ: ಕಾಲ ಹಾಕಿ ನಿಲವೂತ್ಯೆದಾನೋ
ಅಲ್ಲೇ: ದಾರಿ ವಳಗೆ ತಿರಗೂ ಜನರೋ
ಅವನ ಗಾಂಡಿಯಲ್ಲೇ ನುಸದೇ ಹೋಗಬೇಕೋ
ಅಲ್ಲೇ: ಶಂಬುಕುಮರ ದೈತ್ಯ ಲಂಬೋನು
ಈಗೇ: ಲವನ ಯೆದೆಯಾ ಮೇಲೇಲೋ
ಈಗೇ: ಶಂಬೂ ಶಿಂಗೆ ಬಲೆಯೇ ಹುಟ್ಯಾವೋ
ಈಗೇ: ಶಂಬುಶಿಂಗೆಯ ಬಲೆಯೇ ಹುಟ್ಟೇಲೋ
ಅಲ್ಲೇ: ಹುಟ್ಟಿ ಯಲ್ಲಿಗೇ ನೆರಳೇಲೋ?
ರಾಮಶ್ವಾಮಿ ರಾಜೀಕ ನೆರಳೇಲೋ
ಅಲ್ಲಿ: ಕಟ್ಟಿದಲ್ಲೆ ಕರಗೋಳಿಗೆ ಬಿಸಲೇಲೋ
ಅಲ್ಲಿ ಹರಗಿದಲ್ಲೆ ಬತ್ತಕೂ ನೆರಳೇಲೋ
ಈಗೆ: ಅಂಗೋಜ ನಾಕರಾಜ ತಿರಗೇ ಬಂದಾನೋ
ರಾಮಶ್ವಾಮಿ ಕಯ್ಯಲ್ಲಿ ಹೇಳವಾನೋ
"ಇಲ್ಲಿ: ಕಟ್ಟಿದಾ ಕರಗೋಳಿಗೆ ಬಿಸಲೇಲೋ
ಇಲ್ಲಿ: ಹರಗಿದಾ ಬತ್ತಾಕ ನೆರಳೇಲೋ"
ರಾಮಶ್ವಾಮಿ ಅಟ್ಟೊಂದ ಮಾತಾ ಹೇಳವಾಗೋ
ರಾಮಶ್ವಾಮಿ ಲಕ್ಷುಮಣದ ಕರದೇಕಂಡೇಲೇ
ಬಿಲ್ಲು ಬಾಣ ಕೊಡವೂತ್ಯೆದಾನೋ

ಆಗೇ ಲಕ್ಷುಮಣ ಯೇನಾ ಮಾಡ್ಯಾನೋ?
ಕಂತುನಾಡ ರಾಜೀಕ ನಡದಾನೋ
ಆಗೇ ಕಂತುನಾಡ ರಾಜೀಕ ಹೋಗೇಲೇ
ಈಗೇ : ಶಂಬುಕುಮರ ದೈತ್ಯ ನೋಡ್ಯಾನೋ
ಈಗೇ: ಶಂಬುಕುಮಾರ ದೃತ್ಯ ನೋಡೇಲೇ
ಈಗೇ ಬಿಲ್ಲ ಏರ್ಸಿ ಬಾಣ ಹೊಡದಾನೋ
ಈಗೇ : ಬಿಲ್ಲ ಏರ್ಸಿ ಬಾಣ ಹೊಡವಾಗ
ಅಲ್ಲಿ : ಶಂಬುಕುಮರ ದೈತ್ಯ ಬಿದ್ದಾನೋ
ಅಲ್ಲಿ ಶಂಬುಕುಮರ ದೈತ್ಯ ಬಿದ್ದಮೇನೋ
ಈಗೇ ಲಕ್ಷುಮಣ ತಿರಗೇ ಬಂದಾನೋ
ರಾಮಶ್ವಾಮಿ ರಾಜೀ ಬಂದಮೇನೇ
ಆಗೆ ಹರಗಿದಲ್ಲಿ ಬತ್ತಕ ಬಿಸಲೇಲೋ
ಕಟ್ಟಿದಲ್ಲಿ ಕರಗೋಳಿಗೆ ನೆರಳೇಲೋ
ಆಗೇ: ರಾಮಶ್ವಾಮಿ ಲಕವಿಂದರ ಹೊರೇಯೋ
ಆಗೇ ಶುಕದಲ್ಲಿ ವಳವೂತ್ಯೆದಾರೋ ॥

● **ಕೆಲವು ಪದಗಳ ವಿವರಣೆ**

| | | |
|---|---|---|
| ಶದರ | = | ತೂಗುಮಂಚ |
| ಬೆರಳೀಯಾ | = | ಬೆಳ್ಳಿ |
| ಅಶುತಾ | = | ಅಳುತ್ತ |
| ರಿದೇವಿ | = | ಶ್ರೀದೇವಿ |
| ಎಡವದಕಂತೆ | = | ಎಡವುತ್ತ |
| ಆಶೆಗುಡೆ | = | ಆಚೆಗುಡ್ಡೆ |
| ಈಶೆಗುಡೆ | = | ಈಚೆಗುಡ್ಡೆ |
| ಗಾಂಡಿ | = | ಕುಂಡೆ |
| ಶಂಬೂಶಿಂಗೆ | = | ಶಂಬೂಕನಿಗೆ |

■ ಹೇಳಿದವರು : **ದಿ. ತಿಮ್ಮ ಹುಲಿಯಾ ಗೌಡ,** ಹೊನ್ನಳ್ಳಿ ತಾಲೂಕ, ಅಂಕೋಲಾ

# ೪. ಕಳೆ ಹಾಡು

ಗನಗನ ಗೆಂಡೆ ನೆಟ್ಟಳು ದೇವ ತಂದೋನಾನಾ
ತಂದೋನಾನಾ ತನ್ನನದೇವೀ
ಶಂಕರನೆಂಬ ಹಂದ್ಯೊ ಶಿವನೇ
ಚಿನ್ನದ ದಡಪೆ ಬೆಳ್ಳಿಯ ವೇಗಾರ
ವಲಗಿರೋ ಶಿವನೇ ತಂದೋನಾನಾ
ತಂದೊನಾನಾ ತನ್ನನದೇವೀ ತಂದೋನಾನಾ
ಹಾಗೇಲೇನೂ ಮಾಡಿರೋ ದೇವೀ
ತೊಂಟ ಕಾಗೀ ಬಂದಿರು ದೇವೀ
ನೋಡೀರಾಗೀ ಲ್ಯೇನು ಮಾಡೀರ?
ಗನಗನ ಗೆಂಡೆ ಬಯ್ಕೊ ಶಿವನೇ
ಚಿನ್ನದ ಬ್ಯೆಗಾಗ ನೋಡಿರೋ ದೇವೀ
ಶಂಕರನೆಂಬ ಹಂದ್ಯೋ ಶಿವನೇ
ಗನಗನ ಗೆಂಡೇ ಹಾಳು ಬಯ್ಕ್ಯೋ ತಂದೋ
ಗನಗನ ಗೆಂಡೇ ಹಾಳು ಬಯ್ಕ್ಯೋ ದೇವೀ
ಆಗಲೇನು ಮಾಡಿರು ದೇವೀ?
ಕೈಯಿಕಾಲು ಬಿಟ್ಟಿರೊ ಶಿವನೇ
ಗನಗನ ಗೆಂಡೆ ಹಾಳು ಬಯಕ್ಯೋ
ನೋಡೇರಾಗಿ ಲಲ್ಲೆನು ಮಾಡೀದ?
ನೋಡೇರಾಗೀ (ಲೇನೂ ಮಾಡುರು)
ದುಕ್ಕನಾದರ ಮಾಡಿರು ದೇವೀ

ನೋಡಿರ ಮನೆಯೋ ದಾರಿಯ ಹಿಡಿದೀರ
ಮಂಚಕೆಲಾದರ ವರಗಿರೋ ದೇವೀ
ಅನ್ನ ಆಹಾರ ಇಲ್ಲದೆ ಮಲಗೀರ
ಆಗಲೇನು ಮಾಡಿರಾ ನೋಡೀದ?
ಏಳು ಮಂದೀ ಅಣ್ಣ ತಮುದೀರ
ತಂಗೀ ಸುಳಿವು ಇಲ್ಲಲಂದೀ
ನೋಡೀರೊಬ್ಬರ ಹಿಂದೆ ವಬ್ಬರ
ತಂಗೀಮನಗೆ ಬಂದಿರೊ ಶಿವನೇ
ಸುತ್ತುಮುತ್ತು ನೋಡಿರು ನೋಡಿರ
ತಂಗಿ ಸುಳಿವೋ ಇಲ್ಲಲಂತೇರ
ತಂಗಿಗಾಗಿ ಕರದಿನ ಶಿವನೇ
ಆಗೆಲೇನೂ ಮಾಡಿರು ನೋಡೀರ?
ಕಿರಿಯಲಣ್ಣ ದರೂಟಿ ಹೊಡುದ್ಯ
ದರವಟೆಲಾದರ ಹೊಡೆದನೋ ಶಿವನೇ
ಮಂಚಕೆ ತಂಗೀ ವರಗೀರು ಶಿವನೆ
ಆಗೇಲೇನೂ ಮಾಡಿರು ಮಗನೂ?
ಆರೂ ಜನ ಲಣ್ಣ.. ತಮದೀರಿಗ
ತರುದೆಲಾರ ಹೇಳಿರು ಶಿವನೇ
ನೋಡಿರಾಗೇ ಲೇಳೂಮಂದೀ
ಲಣ್ಣತಮದೀರ ಕೇಳಿರು ಶಿವನೇ
"ತಂಗಿಯೇನು ಕಷ್ಟಬಂತೇ?"
ಆಗೆಲೇನು ನುಡುದಿರು ತಂಗ್ಯೋರ
"ನೀವು ನೆಟ್ಟ ಗನಗನ ಗೆಂಡ್ಯೋ
ಶಂಕರಲಂಬಾ ಹಂದ್ಯೋ ನೋಡೀರ
ಚೆನ್ನದ ಪಾಗಾರ ಬೆಳ್ಳಿಯ ದಣಪ್ಯೋ
ಹಾಳೂ ಮುಗಿನಾದೊರ ಹಾಳುಗ್ಯೆದೀರ
ಬಾಳೊಂದು ದುಕ್ಕ ಲಾದರೆ ಮಾಡೀರ"
ಯೇಳು ಮಂದೀರ ಲಣ್ಣ ತಮದೀರ

ಈಗ್ ಲೇನು ಮಾಡಿರು ಕೇಳೀರ?
ಮಜರ ಶಾಲೇಗಾದರೆ ನಡುದೀರ
ಯೇಳು ಕೋವಿ ಯೇಳು ಕಂದೊರೆ
ಗೈಸಲಾದರ ಬಂದಿರು ಶಿವನೇ
ತಂಗೀ ಗಾದರೇಳಿರು ಕೇಳೀರ
"ಹಂದೀಲಾದರ ನಾಶ ಮಾಡೀರ
ಬರುತೇನೆಂ"ದು ಹೇಳಿರು ಕೇಳೀರ
ಯೋಳು ಮಂದಿ ಲಣ್ಣ ತಮುದೀರ
ನಗಪುರಬೈಲಿಗಾದರ ನಡುದೀರ
ದೊಡ್ಡದೊಂದೂ ಕಲ್ಲು ನೋಡೀರ
ಯೋಳು ಜನರು ಯೇರಿರು ಶಿವನೇ
ಕಲ್ಲು ಬುಡದಲಮಲಗಿರು ನೋಡೀರ
ಶಂಕರ್‌ರಂಬಾ ಹಂದ್ಯೋ ಶಿವನೇ
ಆಗೆಲೇನು ಮಾಡಿರು ಮಕ್ಕೊಳು?
ಯೋಳು ಜನರು ಯೇಳು ಕೋವಿ
ವಬ್ಬರ ಹಿಂದೆ ವಬ್ಬರು ನಿತ್ತು
ಗುಂಡೂಲಾದರ ಫಾಯರ ಮಾಡಿ
ಯೇಳೇಳು ಗುಂಡು ತಪ್ಪಿರು ಹಂದೀಗ
ನೆನದು ಬಂದೀ ಯೇಳೂ ಜನರು
ಅಣ್ಣ ತಮುದೀರ ಶಿಗದಿರು ಹಂದ್ಯೋ
ದೊಡ್ಡದೊಂದು ಗುಂಪೇ ಬಿತ್ತು
ಇತ್ತಲಾಗೆ ತಂಗೀ ಸುದ್ಯೋ
ನೋಡಿಕೊ ಒಂಬತ ತಿಂಗಳ ಗರಬಿಣಿ
ಬೇನೆಲಾಗಿ ಸೂರು ಲಾಗೀರ
ನೋಡೀರೀಗೆ ಲೇನು ಸುದ್ಯೋ
ಮುಂದೆಲಾದರ ಪುತ್ರ ಜಲ್ಮ
ಜಲ್ಮಕೆಲಾದರ ಬಂದೆನೊ ಶಿವನೆ
ಇತ್ತಲಾಗೇ ಯೇನು ಮಾಡ್ತೀರ?

“ಯೇಳುಮಂದೀ ಲಣ್ಣ ತಮೂದೀರ
ಬೇಟೆಗೋದೋರ ಬರಲಿಲ್ಲಂ”ದಿತು
ಬರಲಿಲ್ಲಂದೇ ದುಕ್ಕ ಮಾಡುತೀರ
ಮನದಲಿ ದುಕ್ಕ ಲಾದರೆ ಮಾಡ್ತೀರ
ಇತ್ತಲಾಗೋ ನೋಡಿರೋ ಶಿವನೇ
ಪುತ್ರಲಾದರ ಜನ್ಮಕೆ ಬಂದ್ಯಾ
ಬಟ್ಟರ ಮನಗೇಲಾದರೆ ನಡುದೀರ
ನಾಮಕರಣ ಲಾದರೆ ಕೇಳೀರ
“ಸೂರ್ಯವಂಶ” ಲಂದೇ ಹೆಸರು
ಮಗನಿಗಾದರ ಬಂತೋ ಶಿವನೇ
ಬಂದಿಲ ವಂದೂ ದಿನದಲಿ ಶಿವನೇ
ದಿನಕೇ ದಿನಕೇ ಬೆಳೆಯೂತ ನಡುದ್ಯಾ
ದಿವಸ ದುಡುಗಾ ತಿಂಗಳದಂತೇ
ತಿಂಗಳದ್ದುಡುಗ.. ವರುಶದಂತೆ
ಬೆಳವಣಗೇಲಾದರ ಬೆಳದನೊ ಶಿವನೇ
ಊರ ಬಯಲ ಶೀಮಿಗೆ ನಡುದ್ಯಾ
ಬೈಲಶೀಮಿ ಹುಡುಗರು ಶಿವನೇ
ಚಂಡಿನ ಲಾಟಾ ಹೂಡಿರು ಕೇಳೀರ
ಅಗೇಲೇನು ಮಾಡನು ಹುಡುಗಾ?
ಆಟದ ಮಧ್ಯದಲ್ಲೇ ನಿತ್ಯ
ಚಂಡಿನ ಲಾಟಗೈಶ್ಯನು ಶಿವನೇ ತಂದೇ
ಹುಡುಗರು ವಿಚಿತ್ರ ಲಾಗಿ ನಡುದೀರ
ವಬ್ಬರಿಗೊಬ್ಬರ ಯೇನು ನುಡಿತೀರ?
“ಯೇಳು ಮಂದೀ ಮಾವಂದೀರೀಗ
ಮೆಲಿಮ ಬಂದ ಪೋರ” ಲಂತೀರ
ಚಂಡಿನಾಟ ಗೈದ”ವಂತೇರ
ಹೇಳು ಕೇಳೂರೊಳಗೂ ಶಿವನೇ
ಆಟಲಾದರ ಮುಗೀಶ್ಯರೊ ಶಿವನೇ

ಮನೆಗೆಲಾದರ ಬಂದನು ಮಗನೇ
ತಾಯೀಗಾದರ ಕೇಳ್ಯನು ಮಗನು
"ನನ್ನ ಏಳು ಮಂದೀ ಮಾವದೀರ
ಎಲ್ಲಿಗೇಲೇ ನಡುದರು ತಾಯಿ?"
ಲಂದೇದರ ಕೇಳನು ಮಗನೂ
ಆಗಲೇನು ಹೇಳತಿರು ಮಗಳು?
"ಕೇಳೋ ಮಗನೇ" ಲಂದಿರು ತಾಯಿ
"ನಿನ್ನ ತಲಪೋ ಗನಗನ ಗೆಂಡೀ
ಬಯ್ಕೆಲಾಗಿತ್ತೊ ಮಗನೇ
ಶಂಕರಂಬಾ ಹಂದ್ಯೋ ಮಗನೇ,
ಗನಗನ ಗೆಂಡೆ ಹಾಳೋಗ್ಯೆತೋ
ಯೇಳು ಮಂದಿ ಮಾವಂದೀರು
ಹಂದಿ ಬೇಟೀಗ ಹೋದೊರು ಮಗನೇ
ಇನ್ನೂವರೆಗೆ ಬರಲ್ಲಿವಂದೆ
ಬಾಳೊಂದು ದುಕ್ಕ ಮಾಡಿರು ಮಗನೇ"
ಆಗಲೇನು ಮಾಡ್ಯಾನು ಮಗನು?
ತಾಯಿಗುಟ್ಟು ಗೂಡರವಿಲ್ಲದೆ
ವಾಜಿರ ಸಾಲೇಗ ನಡಿದನು ಮಗನು
"ವಂದು ಕೋವೀ ವಂದು ಕಂಬೂಲ
ಗ್ಯೆಸೆಲಾದೊರ ಕೊಡಬೇಕು" ಲಂದೀ
ವಾಜಿರ ಮಗನೀಗಾದರ ಹೇಳುದು
"ಸಣ್ಣ ಹುಡುಗ" ಲಂದೇ ನುಡುದ್ಯಾ
ಆಗೆಲೇನು ಹೇಳನು ಮಗನೋ?
"ನನ್ನ ಕುಲಕೇ ತಾಯೋ ಲಂದ್ಯ
ಗನಗನ ಗೆಂಡೇ ಬಯಕೆಯ ಲಂತೂ
ಶಂಕರ ಲಂಬ ಹಂದ್ಯೋ ಹಾಳ
ಗ್ಯೆತುಲಂದೇ ಏಳು ಮಂದ್ಯೋರ
ತಾಯಿ ಲಣ್ಣ ತಮುದಿರು" ಲಂದ್ಯ

"ಬೇಟೆಗೆ ನಡೆದೋರ ಬರಲಿಲ್ಲಂ"ದೀ
ನುಡಿವನು ಕೇಳೀಲಾವ ಮಗನೂ
ಕೋವಿ ಕಂದೂರ ರೈಸ್ ಕೊಟ್ಯಾ
ಕಯ್ಯಲಿ ಕೋವಿ ಕಯ್ಯಲಿ ಹಿಡುದೀ
ಮನೆಯ ದಾರೀ ಹಿಡಿದು ಬಂದ್ಯಾ
ತಾಯಿಗಾಗೀ ಲೇನು ನುಡುದ್ಯಾ
"ಯಾವ ದಾರೀ ಹಿಡುದೀ ನಡುದೀರ?"
ಹಾಗೆಲೇನು ಹೇಳಿರು ಮಗಳು ?
"ನಗಪುರ ಬಯ್ಲೀಲೀಗ್ ನಡತೀ ವಂದೀ
ನುಡಿದಿರು ಮಗನೇ" ಲಂದು ನುಡಿತೀದ
"ನಾನು ಬೇಟೆಗೆ ನಡತೇ"ಲಂದ್ಯಾ
ಬಾಳೊಂದು ದುಕ್ಕೇ ಲಾದರೆ ಮಾಡುತೀದ
"ಮಗನೆ ನಿನ್ನ ಕಯ್ಯಲಿ ಸಾದ್ಯೋ
ವಲ್ಲ"ಲಂದೇ ನುಡಿದರು ಕೇಳೀರ
ಹಿಡದ ಹಟವು ಬಿಡಲಿಲ್ಲ ಮಗನೂ
ತಾಯಿ ಪಾದ ಹಿಡುದೀಲಾದರ
ನಗಪುರ ಬಯ್ಲಾ ದಾರಿ ಹಿಡುದ್ಯಾನ
ಕೋವಿ ಕಂದೂರ ಕಯ್ಯಲಿ ಹಿಡುದ್ಯಾ
ನಾಗಕುಂಚೇ ನಾಗಬೆತ್ತೋ
ಹೊಕ್ಕಳ ಗೆಂಟೇ ಕಯ್ಯಲಿ ಹಿಡುದೀ
ದಾರೀಲಾದರ ಹಿಡುದೀ ನಡದ್ಯಾ
ನೋಡೀರಾಗೆಲೇನೂ ಮಾಡ್ಯಾ?
ದೊಡ್ಡದೊಂದು ಕಲ್ಲು ಹೊಡದ್ಯಾ
ಸುತ್ತುಮುತ್ತೀಲಾದರು ನೋಡ್ಯಾ
ಲಾಗೆ ನೋಡೀರೇನು ಮಾಡ್ಯಾ?
ಯೇಳು ಮಂದೀ ಮಾವಂದೀರ
ಸಿಗದರಾಶಿ ಬಿದ್ದಿರು ನೋಡೀರ
ಶಂಕರಲಂಬಾ ಹಂದ್ಯೋ ಕೇಳೀರ

ಅಲ್ಲಿಲಾದರ ಮೆಲಗಿಲೀದದು
ಆಗೆಲೇನು ಮಾಡ್ಯಾನು ಕೇಳಿರ
ನೋಡೀರೇನು ಮನದಲಿ ಶಿವನೇ
"ಯೋಳೂ ಮಂದಿ ಮಲಗಿರು" ಲಂದ್ಯಾ
ಕೈಯಲಿ ಕೋವೀ ಹಿಡಿದನು ಮಗನು
ಕಲ್ಲು ದಾರೀಲಾದರು ನೋಡೀರ
ಹಂದಿ ಮೇಲೇ ಕೋವಿನು ಹಿಡುದೀ
ಗುಂಡುಲಾದರ ನೇಸದನು ಮಗನು
ವಂದೇ ಹೊಡತಕ ಹಂದ್ಯೋ ಬಿತ್ತೋ
ಕೆಲಗೇಲಾದರ ಇಳಿದನು ಮಗನು
ನಾಗಕುಂಚ ಕಯ್ಯಾಲಿ ಹಿಡುದ್ಯಾ
ನಾಗಬೆತ್ತಲಾದುರ ಯೇಳೂದಾ
ನಾಗಕುಂಚಲಾದರೆ ಬಳುಗ್ಯಾ
ಶೇಲಕ್ಕೀಲಾದರೆ ಹೊಡುದ್ಯಾ
ಯೇಳು ಮಂದೀ ಮಾವಂದೀರು
ಯೆದ್ದೇಲಾದರ ಕುಂತಿರು ಶಿವನೇ
ಆಗೆಲೇನು ನುಡಿತಿರು ಕೇಳೊದ?
"ಯಾವ ಊರು ಮಗನ"ಂದೇರ
"ಯೆಲ್ಲಿಂದ ಬಂದೇ"ಲಂದೀ ನೋಡೀರ
ಒಬ್ಬರ ಮೇಲೆ ಒಬ್ಬರು ಲಪ್ಪೀ
ಮಗನ ಲೆತ್ತಿ ನಡೆದರು ಕೇರೀ
ತಾಯಿ ಸುದ್ದೀಲಾದರು ಹೇಳಿದಾರ
"ಈಗೆ ಕೋವಿಯರ ತಡದಲು ಯಾಕೋ?"
ಮನೆಯ ದಾರೀ ಹಿಡಿದರು ನೋಡೋರ
ಇತ್ತಲಾಗೆ ಲಾವ ಮಗಳು
ಮಗನ ಸುಳಿವು ನೋಡುತ ಉಂಟು
ಮುಂದೆ ತಾನೂ ದಾರಿ ಹಿಡುದೇ
ಯೇಳು ಮಂದೀ ಮಾವಂದೀರು

ಮಗನ ಹಿಂದೇಲಾದರೆ ನಡುತೀರ
ಹಾಗೆ ನೋಡಿರ ಮಗಳುದರ
ದಾರೀಯಲ್ಲಿ ನೋಡಿರು ಶಿವನೇ
ಓಡೆಲಾದರು ಬಂತೇ ಮಗಳು
ಯೇಳು ಮಂದೀ ಲಣ್ಣ ತಮಂದೀರಿಗೆ
ಲಪ್ಪಿ ಮುದ್ದೀಲಾದರೆ ಹೊಡುದೀರ
ಬಾಳೊಂದು ದುಕ್ಕ ಲಾದರೆ ಮಾಡುತೀರ
"ಕೇಳೇ ತಂಗೀ" ಲಂದೇ ನುಡುತೀರ
"ಯಾವ ಮಗನು ನಮ್ಮನೇ ನೋಡೀರ
ಜೀವಂತ ಮಾಡಿ ತಂದ್ಯಾ"ಲಂತೇ
"ಹಾಗೆಲೇನು" ನುಡಿದಿರು ಮಗಳ
ಮಗನ ಸುದ್ದೀ ಲಾದರೆ ನುಡೀತೀರ
"ನಿಮ್ಮ ಕುಲಕೇ ನೋಡಿರಿ" ಲಂದೀರ
"ಬೇಟೆಗೆ ಹೋಗುವಾಗ ವಂಬತು ತಿಂಗಳ
ಗರಬಿಣಿ" ಲಂದೀ ನುಡಿದೀರ ಮಗಳು
"ಸೂರ್ಯಕಾಂತ" ನುಡಿದೀರ ಮಗಳು
"ಲವನೆ ನಿಮ್ಮ ನೋಡಿರಲಂದೀ
ಊರ ಬಯ್ಲು ಲಾಟಕೆ ನಡುದೀ
ಚಂಡೀನಾಟಾ ಜೈಸೀ ಬಂದ್ಯಾ
ಊರ ಹುಡುಗರ ಜೈಸೀ ಬಂದ್ಯಾ"
ಯೇಳು ಮಂದೀ ಮಾವಂದೀರೀಗ್
ಯೇಳು ಮಂದೀ ಮೋಹವನಂದೆ
"ಸುದ್ದಿ ಕೇಳೀ ಮನೆಗೆ ಬಂದಾ
ನಡದ ಸುದ್ದೀ ಕೇಳ್ಯಾ ಮಗನು
ನಿಮ್ಮ ನೋಡುರ ಸುದ್ದೀಲಾದರ
ಕೇಳಿಲಾದರ ನಗಪುರ ಬಯ್ಲಿಗ
ನಡೆದ ನನ್ನ ಮಗನು" ಲಂದೀತು
"ಆಗೇ ನೋಡೀರ ಮಗನು" ಲಂತೊ

"ನಿಮ್ಮ ಜೀವಾ ಪಡೆದೇ ಬಂದ"
ಲಂದೇ ಲಂದರ ನುಡಿದಿರ ತಂಗ್ಯೋರ
ಅಷ್ಟೇ ಲಾದರ ಕೇಳಿರು ಶಿವನೇ
ಮಗನು ಲೆತ್ತೀ ವಬ್ಬರಿಗೊಬ್ಬರ
ಎತ್ತಿಲಾದರ ಹಿಡಿದಿರೊ ಶಿವನೇ
ಆಗಲೇನು ಮಾಡತಿರೋ ಶಿವನೇ
ಲಾಗೆ ಊರ ಪದತಿಯಂತೇ ಶಿವನೇ
ಮಗನು ನೋಡೀರ ಕಿವಿ ಚುಚ್ಚಿ
ಬಾಳೊಂದು ತರದಲು ಲಸಬೆಯನು ಕೂಡಿಸೀರ
ಆಗಲೇನು ಮಾಡಿರು ಕೇಳೀರ?
ಮಗನ ಬೇಕಾದ ಸೋಪಸ್ಕರೊ
ಊರ ಪದ್ಧತಿಯಂತೆ ಮಾಡೀರ
ಆಗೆ ಲೆಲ್ಲೋರ ಯೇಳು ಮಂದೀ
ಬಾಳೊಂದು ಲಾನಂದ (ಲಾಗೇ ಇದ್ದರು)
ಆನಂದಲಾಗೆ ಇದ್ದರು ಶಿವನೇ.

● **ಕೆಲವು ಪದಗಳ ವಿವರಣೆ**

| | | | |
|---|---|---|---|
| ದಡಪೆ = | ದಣಪೆ | ವೇಗಾರ = | ಪಗಾರ |
| ತೊಂಟ = | ತೋಟ | ಬ್ಯೆಗಾರ = | ಬೆಳಗ್ಗೆ |
| ವಾಜಿರೆ = | ಕುದುರೆ | ಕಂಬೂಲಿ = | ಕಂಬಳಿ |
| ಮೆಲಿಮ = | ತಿಂದು | | |

■ ಹೇಳಿದವರು : **ಥಾಕು ದೇವು ನಾಯ್ಕ,** ಅರಗಾ ತಾ. ಕಾರವಾರ

# ೫. ಯಮನ ಮದುವೆ

ಸ್ವಾಮಿ ಪುತ್ರಕ ನಿಮ್ಮ ಸೊಂಡಲ್ ವಿಗ್ನೇಶ್ವರರು
ಮಾವಿಷ್ಣು ನಿಮ್ಮ ಚರಣವಾ ನೆನೆದರೇ
ಈ ಜನರಿಗೈಲ್ಲ ಹಿತವಕ್ಕು ॥ ೧ ॥

ಹಿತವಪ್ಪ ಕಾಲಕ್ಕೆ ಶಸ್ತ್ರಂಗಳ ಹೆಚ್ಚುಗು
ಕಸ್ತೂರಿ ಮಳೆಯ ಕರೆತಂದು ಇಟ್ಟರೇ
ಕಸ್ತೂರಿ ತುರುಗ ಜತನಕ್ಕೆ ॥ ೨ ॥

ಅರಮಾನೆ ಬಳಗಿಂಕೆ ಅರಸುತಾ ಮುಡಿಹೊಯ್ಸಿ
ಅರಸು ಕೊಮಾರ್ನ ಸೆರೆಯು ಬಂಡಾರವಾ
ಸೂರೆಯನು ಬಿಟ್ಟ ಸುರರೀಗೆ ॥ ೩ ॥

ಮಂತ್ರಿದೇಶವ ಬಿಟ್ಟು ತಂತ್ರಿ ದೇಶಕೆ ಹೋಗಿ
ಅಲ್ಲೊಬ್ಬ ಬ್ರಾಹ್ಮಣನು ಮನೆಗಿಂದು ಹೋಪಾಗ
ಬಾಣಸ್ವಗೈವಳ ವಳ್ವೊಬ್ಬು ॥ ೪ ॥

ಇವಳ ತನ್ನ ಕಾಲಕ್ಕೆ ಯೇನಾಗಿ ಸಾಯ್ವಳೋ
ಯಮದೂತಕ ಬಂದು ಯಳದು ವಯ್ಯವಾಗ
ಭೋರನ್ನೆ ಮಳಲ ಹೊಡೆವಾರೋ ॥ ೫ ॥

ಶಾಮಾಳೆಯೆಂಬೂದು ಕೊಮಾರ್ನ ತಂಗೀಯು
ಏನ ಮಾಡಾಲಿ ಇದವಂದ್ ಕುಮಾರಿಯ
ಜ್ಞಾನಿಸುತಿದ್ದ ಮನದಲ್ಲೀ ॥ ೬ ॥

ಜ್ಞಾನೀಸುತಿಪ್ಪಾಗ ಸ್ವಾಮಿ ತಾ ಹೊರಟಾನೇ
ಆಗಳೇ ಅರಸು ಹೊರವಂಟು ಬಪ್ಪಾಗ
ಬೇಗದಿಂದರಸ ಯದುರ್ಗೊಂಡ ॥ ೭ ॥

ಕೇಳುಲ್ ಬಂದವರೀಗೆ ಕೊಟ್ಟಲ್ಲದ್ದಾದಾರೇ
ನಾಡು ನಾಡೀನ ಸಂಸ್ತಾನ ಕರೆಯೀಸು
ಮಾಡಿಸುವೋ ಮುದ್ದು ಮದಿವೇಯ ॥ ೮ ॥

ಅಂದರ ಮಂಟಪ ರಚಿಸಿ ಸೋಮವಾರ್ತನೆ ಮಾಡೀ
ಕಂಬಕಂಬಕ್ಕು ಮಣಿಸೊಡರ್ ಎರಚಿಸಿ
ಕಲಶ ನೀರ್ ಮಿಂದ ಯಮರಾಯ ॥ ೯ ॥

ಅಂದರ ಮಂಟಪ ರಚಿಸಿ ನಾಂದಿಮೊಕವನೆ
ಕಂಬಕಂಬಕ್ಕು ಮಣಿ ಸೊಡರ ವಿರಚಿಸಿ
ಕಲಶ ನೀರ ಮಿಂತು ಶ್ಯಾಮಳೆ ॥ ೧೦ ॥

ಅಣ್ಣನೂ ಅತ್ತೀಗೆ ಚೆಂದದಲ್ ದಾರೆ ಎರೆವಾರು
ಹೆತ್ತ ತಾಯಿ ತಂದೆ ತನಗಿಲ್ಲೆ ಕೂಡುಳ್ಳ
ವಡ ಹುಟ್ಟಿದಣ್ಣ ಮನೆಗೆ ಬಾಳಿರೋ ॥ ೧೧ ॥

ತನ್ನ ಮುಡಿ ಮೇಗಣ್ಣ ವಳ್ಳೆ ಹೂಗಿನಾದಂಡೆ
ತನ್ನ ತಂಗೀಯ ಮುಡಿಯೊಳಗಿರಿಸಿ
ಬಿನ್ನವನೆ ನುಡಿದ ಅರಸರಿಗೆ ॥ ೧೨ ॥

ತನ್ನ ಕೊರಳೊಳಗಣ್ಣ ಚಿನ್ನದಾ ಸರನ
ತನ್ನ ಅತ್ತಿಗೆಯ ಕೊರಳೊಳಗಿಡಿಸಿ
ಬಿನ್ನವನೆ ನುಡಿದ ಅರಸಂಗೆ ॥ ೧೩ ॥

"ಬಯ್ಯಾಡ ಬಾವಯ್ಯ ಬಯ್ಯಾಡ ಬಯ್ಯಾಡ
ಏನೇನು ಅರಿಯ ಕೊಡಿಗೂಸು ಶ್ಯಾಮಳೇ
ಸಲಗೀಕೊ ನಿನ್ನ ಮಡದೀಯ" ॥ ೧೪ ॥

“ಊರಮೇಲೋಗದೆ ಬಹಳ ಮಾತಾಡದೇ
ಬಡವರಾ ಕಂಡು ನಿಂದ್ಯ ಮಾಡದಿದ್ದಾರೆ
ಹೊಡೆಯಲೀ ಕ್ಯಾನು ಮರುಳಲ್ಲ” ॥ ೧೫ ॥

ಕೋರಿ ಮೇಲ್ ಹೋಗಾದೆ ಬಹಳ ಮಾತಾಡದೇ
ಊರವರ ಕಂಡು ಚಾರ್ಯ ಮಾತಾಡದಿದ್ದಾರೆ
ಹೊಡೆಯಲೀ ಕ್ಯಾನು ಮರುಳಲ್ಲ ॥ ೧೬ ॥

ಅಪ್ಪನಾ ಮನೆಮುಂದೆ ಚೆಂದುಳ್ಳ ಶಶಿತೋಟ
ಚೆಂದಕ್ ಶಿಂಗಾರ ಕೊನೆ ಬಂದು ಯೆರಗಿದವೋ
ನಾರಿ ತಾ ನೋಡಿ ನಗುವಾಳೊ ॥ ೧೭ ॥

ಅಣ್ಣನಾ ಮನೆ ಮುಂದೆ ಚೆಂದುಳ್ಳ ಶಶಿತೋಟ
ಚೆಂದಕ್ ಶಿಂಗಾರ ಕೊನೆ ಬಂದು ಯೆರಗಿದವೋ
ರಂಬೆ ತಾ ನೋಡಿ ನಗುವಾಳೊ ॥ ೧೮ ॥

ವಂದು ಮೆಟ್ಟಿಳಿದು ತುಂಬಿದವೊ ಕಣ್ಣಲ್ ನೀರು
ವಂದು ಮೆಟ್ಟಿಳಿದು ಮನೆಗಿಂದು ಹೋಪಾಗ
ತುಂಬಿದ್ ಕಣ್ಣಲ್ ನೀರು ನೆಲೆಗೊಂಡೊ ॥ ೧೯ ॥

ಎರಡು ಮೆಟ್ಟಿಳಿವಾಗ ಚೆಲ್ಲಿದವೊ ಕಣ್ಣಲ್ ನೀರು
ಎರಡು ಮೆಟ್ಟಿಳಿದು ಮನೆಗೆಂದು ಹೋಪಾಗ
ಚೆಲ್ಲಿದ್ ಕಣ್ಣಲ್ ನೀರೆ ನೆಲೆಗೊಂಡೊ ॥ ೨೦ ॥

“ಮುಂದ್ರಣ್ಣ ಬಾಗ್ಲೀಗೆ ಹಚ್ಲೇರಿ ಬೀಗವ
ಹಿಂದ್ರಣ್ಣ ಬಾಗ್ಲ ತೆಗೆಯದೀರೆ”ಸುತಲೇ
ಅರಸುತಾ ನುಡಿದ ಜನರೀಗೆ ॥ ೨೧ ॥

“ಮುಂದ್ರಣ್ಣ ಬಾಗ್ಲಲ್ಲಿ ಕಂಡೆ ನಿನ್ನಪ್ಪನ
ಶೀಳ್ನಾಯಿ ಕಚ್ಚಿ ಎಳೆದ ಶರೀರವ”
“ನೋಡ್ಲಾರೆ”ವೆಂದು ಮುರುಗೀದೋ ॥ ೨೨ ॥

"ಹಿಂದ್ರಣ್ಣ ಬಾಗ್ಲಲ್ಲಿ ಕಂಡೆ ನಿನ್ನಬ್ಬೆಯ
ಕಬ್ಬಿಣ ಸುಂಡಿ ಕಾಕೆ ಕಚ್ಚೈಳೆವ ಶರೀರವ"
"ನೋಡ್ಲಾರೆ"ವೆಂದು ಮರುಗೀದೊ ॥ ೨೩ ॥

"ಏನಾದರಾಗಲಿ ಕಂಡೆ ವಂದ್ ಅತ್ತೀರ್ಯ
ಏನ ಸ್ವದಿಂದ ನರಕದಲ್ಲಿವ್ರಿಬ್ಬರೂ
ಬಿದ್ದ ಕಾರಣದ ಬಗೆ ಹೇಳಿ" ॥ ೨೪ ॥

"ಉದ್ದೀನ ಬೇಳ್ಯಷ್ಟು ಬಿದ್ದ ಕಡಲಿ ಹಿಟ್ಟು
ಮುದ್ನಿಂದ ಶಿಶುವಿಗ್ ಕೊಟ್ಟ ಕಾರಣದಿಂದ
ಬಿದ್ದ ನಿನ್ನಪ್ಪ ನರಕಕ್ಕೆ ॥ ೨೫ ॥

ಕಡಲೇಯ ಬೇಳ್ಯಷ್ಟು ಬಿದ್ದ ಉದ್ದಿನ ಹಿಟ್ಟ
ಮೋಹದಲಿ ಮಗಳಿಗೆ ಕೊಟ್ಟ ಕಾರಣದಿಂದ
ಬಿತ್ತು ನಿನ್ನಬ್ಬೆ ನರಕಕ್ಕೆ" ॥ ೨೬ ॥

"ಏನಾದರಾಗಲಿ ಕಂಡೆ ವಂದ್ ತಿಳಿಯ
ಎಸ್ವದಿಂದಾ ನರಕದಿಂದಿವರಿಬ್ಬರೂ
ಸ್ವರ್ಗ ಕಂಡ ಬಗೆಯ ಹೋಪ ಬಗೆಯ" ॥ ೨೭ ॥

"ಹರುವ ಜಲದಿಗೆ ಹೋಗಿ ಐನೂರ್ ಸ್ನಾನವ ಮಾಡಿ
ಫಲ ಮೂರು ದಾನ ಕೊಡ್ತೆ ನೀನಾದರೇ
ಸ್ವರ್ಗಕ್ಕೆ ಹೋಪ ಬಗೆಯೀದು ॥ ೨೮ ॥

ಗಂಗ ನದಿ ಜಲದಿಗೆ ಹೋಗಿ ನೀನಾರು ಸ್ನಾನವ ಮಾಡೀ
ಫಲ ಮೂರು ದಾನ ಕೊಡ್ಯೊ ನೀನಾದರೆ
ಸ್ವರ್ಗಕ್ಕೆ ಹೋಪ ಬಗೆಯಿದು" ॥ ೨೯ ॥

"ಹರುವ ಜಲದಿಗೆ ಹೋಗಿ ಐನೂರ್ ಸ್ನಾನವ ಮಾಡೀ
ಫಲ ಮೂರು ದಾನ ಕೊಟ್ಟೆ ಅಪ್ಪ ಕೇಳೋ
ಸ್ವರ್ಗಕ್ಕೆ ಎದ್ದು ನಡೆ ಬೇಗ" ॥ ೩೦ ॥

"ಗಂಗ ನದಿ ಜಲದಿಗೆ ಹೋಗಿ ನಾನಾರು ಸ್ನಾನವ ಮಾಡೀ
ಫಲ ಮೂರು ದಾನ ಕೊಟ್ಟೆ ಅಬ್ಬೆ ಕೇಳೇ
ಸ್ವರ್ಗಕ್ಕೆ ಯೆದ್ದು ನಡೆ ಬೇಗ" ॥ ೩೧ ॥

"ಪುತ್ರಾನ ಪಡೆದಾರೇ ಸ್ವರ್ಗ ಕಾಣಿಸೂಗೂ
ಪುತ್ರಿಯ ಪಡೆದು ಸ್ವರ್ಗ ಕಂಡೇ"ಯೆಂದಾ
ಸ್ವರ್ಗಕ್ಕೆ ಅವರು ನಡೆದಾರು ॥ ೩೨ ॥

"ಬಾಲನಾ ಪಡೆದರೆ ಸ್ವರ್ಗ ಕಾಣಿಸೂಗು
ಬಾಲೆಯ ಪಡೆದು ಸ್ವರ್ಗ ಕಂಡೆ"ವೆಂದಾ
ಸ್ವರ್ಗಕ್ಕೆ ಅವರು ನಡೆದಾರು ॥ ೩೩ ॥

● **ಕೆಲವು ಪದಗಳ ವಿವರಣೆ**

| | | | | | |
|---|---|---|---|---|---|
| ತುರಗ | = | ಮೃಗ | ಹೋಪ | = | ಹೋಗುವ |
| ಜಲದಿ | = | ನೀರಲ್ಲಿ | ಬಾಲ | = | ಗಂಡು ಹುಡುಗ |

■ ಹೇಳಿದವರು : **ಶೇಷಮ್ಮ ಹಲಸಮಾವು,** ದಿನಾಂಕ ೨೩-೦೨-೧೯೯೯

# ೭. ಶಿವ ಕೊರವಂಜಿ

ನೀರ ಮಿಂದಾ ಕೊರಳು ಧಾರದ ಹಾಗಿದ್ದಾವ
"ಯಾಕೋ ಈ ಸಿಸವೂ ಮಲಿ ಉಣದೇನು?
ಯಾಕೇನೇ ಈ ಸಿಸವೂ ಮಲಿ ಉಣ್ಣಾದೇ ಸಂಗಮ್ಮ"
"ಬಚ್ಚಲ ಮನಿಗೇ ಕರಕೋಳೇ"
ಬಚ್ಚಲ ಮನಿಗೆ ಕರಕೊಂಡು ಹೋಗುವಾಗ
ಅತ್ತಲಿದೊಬ್ಬ ಪರ ಜೋಗಿ
ಅತ್ತಲಿದೊಬ್ಬ ಪರಜೋಗಿ ಬಂದಕೊಂಡು
ಬೆರಳೀಲಿಬೂತೀದರಿಶ್ಯಾನೆ
ಲಿಬೂತಿ ದರಿಶೀಯೇನಂಬಾನೆ ?
"ನನಗೆ ಈ ಕೂಸಾ ಕೊಡಬೇಕು"
ವಂದಂಬ ತಿಂಗಳ ತುಂಬಿತು ಗೌರಮ್ಮಾಗೆ
ವಂದ ತಿಂಗಳೊಂದ ವರಸಾಗಿ
ತಿಂಗಳೊಂದ ವರಸಾಗಿ ಗೌರಮ್ಮ
ಲಿಂಗುಗು ಚಲ್ಲರಸಿ ನೆರದಾಳೇ
ನಾಲ್ಕನೇ ತಿಂಗಳ ತುಂಬಿತು ಗೌರಮ್ಮಗೇ
ನಾಲ್ಕು ತಿಂಗಳ ನಾಲ್ಕು ವರಸಾಗಿ
ನಾಲ್ಕು ತಿಂಗಳ ನಾಲ್ಕು ವರಸಾಗಿ ಗೌರಮ್ಮ
ವಸ್ತುಗು ಚಲ್ಲರಸಿ ನೆರದಾಳೆ
ಎಂಟಾನೇ ತಿಂಗಳ ತುಂಬಿತು ಗೌರಮ್ಮಗೇ

ಎಂಟ ತಿಂಗಳೆಂಟ ವರಸಾಗಿ
ಎಂಟ 'ತಿಂಗಳೆಂಟ ವರಸಾಗಿ ಗೌರಮ್ಮ
ದೇವುರಿಗೆ ಚಲ್ಲರಸಿ ನೆರದಾಳೇ
ಹತ್ತನೆ ತಿಂಗಳ ತುಂಬಿತು ಗೌರಮ್ಮಗೆ
ಹತ್ತ ತಿಂಗಳ್ಳತ್ತ ತುಂಬಿತು ವರಸಾಗಿ
ಹತ್ತು ತಿಂಗಳಾತ್ತೂ ವರಸಾಗಿ ಗೌರಮ್ಮ
ಗಂಡಗು ಚೆಲ್ಲರಸಿ ನೆರದಾಳೇ
ಗಂಡಗು ಚೆಲ್ಲರಸೀ ನೆರೆದಾಳೆಂಬದುಕೊ
ಆಗ ಗಿರಿರಾಜಾ ಗನುಮಾನ
ಗಿರಿರಾಜಾ ಗನುಮಾನ ಗಿರಿರಾಜ
ಏಳ ಮಂಡಲುವಾ ಬರುದಾನೇ
ಏಳ್ ಮಂಡಲಾವಾ ಬರುದಾನೆ ಗಿರಿರಾಜಾ
ಮಂಡಲದಾಗೆ ನಿಲಿಸ್ಯಾನೆ
"ಜೋಗ್ಯಾಗಿ ಬಂದಾನು ಜಂಗಮ್ಮಾಗಿ ಬಂದಾನು
ಬಳಿಗಾರಾನಾಗಿ ತಿರಿಗ್ಯಾನು
ಬಳಿಗ್ಯಾರಾನಾಗಿ ತಿರಿಗ್ಯಾನೂ ಯಲಮಗಳೇ
ಯಾರು ಬಂದಾರೆರಗೆ ಬರಬೇಡೆ
ಜೋಗ್ಯಾಗೀ ಬಂದಾನು ಜಂಗುಮ್ಮಾಗಿ ಬಂದಲ್ಲು
ಮುತ್ತುಗಾರಾನಾಗಿ ಸುಳುದಾನು
ಮುತ್ತುಗಾರಾನಾಗಿ ಸುಳುದಾನು ಯಲ ಮಗಳೇ
ಯಾರ್ ಬಂದಾರ್ ಹೆರಗೇ ಬರುಬೇಡೆ"
ಅಷ್ಟೆಂದಾ ಮಾತಾ ಕೇಳ್ಯಾನೇ ಶಿವರಾಯಾ
ಬಾಳೇ ಹಿತ್ತಿಲಿಗೇ ನೆಡದಾನೆ
ಬಾಳೇಯಾ ಹಿತ್ತಿಲಿಗೇ ನೆಡದಾನೇ ಶಿವರಾಯಾ
ಬಳಿಗಾರಾನ್ಯಾಸಾ ತೊಡುತಾನೇ
"ಹಾಲು ಮಾರರು ಕೇರಿ ನೀಲಾ ಮಾರರು ಕೇರಿ
ಹಾರಾರಾ ಕೇರಿ ವಳಗಾಸೀ

ಹಾರಾರಾ ಕೇರಿ ವಳಗಾಸಿ ಬಳಿಯಾ ನಿಡುವಾ
ನಾರೇರೇ ಇಲ್ಲಾ ಪುರುದಾಗೇ"
ಅಷ್ಟೊಂದ ಮಾತಾ ಹೇಳ್ಯಾನೆ ಶಿವರಾಯಾ
ಬಾಳೇ ಹೂದೋಟುಕು ನಡದಾನೇ
ಬಾಳೇ ಹೂದೋಟುಕು ನೆಡದಾನೇ ಶಿವರಾಯಾ
ಮುತುಗಾರಾರ್ಯಾಸ ತೊಡುತಾನೆ
ಮುತ್ತೂ ಮಾರರು ಕೇರೀ ರತ್ನಾ ಮಾರರುಕೇರಿ
ಉಪ್ಪಾರೂರುಕೇರಿ ವಳುಗಾಸೀ
ಉಪ್ಪಾರುರು ಕೇರಿಗೆ ವಳುಗಾಸಿ ಮುತ್ತಾ ಕೊಳ್ಳೊ
ನಿಸ್ತ್ರೀರೆ ಇಲ್ಲಾ ಪುರುದಾಗೇ"
ಅಷ್ಟಂದಾ ಮಾತಾ ಹೇಳ್ಯಾನೆ ಶಿವರಾಯ
ಉಪ್ಪುರಿಗೇ ವಳಗೇ ನೆಡದಾನೆ
ಉಪ್ಪುರಿಗೇ ವಳಗೇ ಹೋದಾನೆ ಶಿವರಾಯಾ
ಮುತ್ತಿನ ಕುಡುಗೋಲಾ ಬಲಗೈಲಿ
ಮುತ್ತಿನ ಕುಡುಗೋಲ ಬಲಗೈಲಿ ತಕ್ಕೊಂಡು
ಹೋದಾರ ಹೊನ್ನೂರ ಹಬೆಯಾಕೆ
ಹೋದಾರ್ ಹೊನ್ನೂರ ಹಬೆಯಾಕೇ ಶಿವರಾಯಾ
ಮೂರ ಮೆದಿ ಹುಲ್ಲಾ ಕೊಯ್ದಾನೆ
ಮೆದಿ ಹುಲ್ಲಾ ಕೊಯ್ದನೆ ಸಿಕ್ಕಾ ಮಾಡೀ
ಹಾಲ ಬಿಂದಿಗು ತಕ್ಕ ನಿಲಗೋಳೆ
ಕಾಲಗು ಕಾಲುಂಗಲ್ ಕಿವಿಯಾಗ್ ಹಿತ್ತಾಳೋಲೆ
ಕೊಳ್ಳಗೆ ಗುಲಗುಂಜಿ ಸರದಂಡೆ (ಕರಮಿಣಿ)
ಕೊಳ್ಳಗೆ ಗುಲಗುಂಜಿ ಸರದಂಡೇ ಶಿವರಾಯಾ
ಕೊರಮಜಿರ್ಯೇಸ ತೊಡುತಾನೇ
ಹಕ್ಕಿ ಕಾಲಿನಂಗೆ ಕುಕ್ಕುನಾ ಕೊರಳೀನಂಗೆ (ಕೊಕ್ಕರೆ)
ಕೂಸ ಕಟ್ಯಾನೇ ಮಡಲಾಗೇ
ಹಾಲಾ ಮಾರರು ಕೇರಿ ನೀಲ ಮಾರರು ಕೇರಿ

ಹಾರಾರಾ ಕೇರಿ ವಳಗಾಸೀ
ಹಾರಾರಾ ಕೇರಿ ವಳಗಾಸಿ ಕೊರವಂಜಿ
ಹಾಲ ಬಿಂದಿಗು ತಕ್ಕ ನಿಲಗೋಳೇ
ಹಾಲ ಬಿಂದಿಗು ತಕ್ಕ ನಿಲಗೋಳಂಬುದು ಕೇಳೇ
ತಪ್ಪ ನೂಪ್ಪಾರಿಗೆ ಹೊರವಂಟ್ಲು
"ಇರುವೇನೂ ಕೊರವಂಜಿ ಹಲ್ಪೊಂದು ಕರಚಂದ
ಕೆನ್ನೆ ನೋಡಿರು ನಸಾಗೆರಿಸು
ಇರುವದೂ ಈ ಮಾಟ ತಿರುವದು ಆ ಮಾಟ
ತರುಮಲು ಬುಜ್ಜಣಿಗೇ ಮನಿಮಾರು"
"ದೇಸಾ ದೇಸಾ ತಿರುಗಿ ಬೇಸತ್ತು ನಾ ಬಂದೆ
ಇಪ್ಪೀಡೆ ಕೂಸೆ ಇಳಿವಲದೇ
ಈ ಪೀಡೇ ಕೂಸೇ ಇಳಿವಲದೇ ಗೌರಿ ಮನೆಯಾ
ದೋಸೆ ಕೊಡಸೀನೋ ಇಳಿಕೂಸೇ"
"ದೋಸೇನಾದರೂ ಕೊಡುವೇ ಕೂಸಿಗಾಲ ಕೊಡುವೆ
ಇಂದುಳೀಯೇ ಕೊರಮೇ ಪುರುದಾಗೇ
ಇಂದು ವಳದಿರೆ ಸಂಗಡುದೋರೋದಾರು
ಚೌಡೀ ನುಡುದಾರು ಕೊರವಾಗೇ
ನಡುದಾರು ಕೊರವಾಗೆ ಅವನಮಗೆ
ಹಾರೆಯಾ ಕಾಸಿ ಹಿಡಿಸ್ಯಾನು"
ಅಷ್ಟೊಂದಾ ಮಾತಾ ಹೇಳ್ಯಾನೇ ಶಿವರಾಯಾ
ಬಾಳೇ ಹೂದೊಟಕ ನೆಡದಾನೇ
ಬಾಳೇ ಹೂದೋಟಕು ನೆಡದಾನೇ ಶಿವರಾಯಾ
ಮುದಿ ಜಂಗುಮುರ್ಯೇಸ ತೊಡುತಾನೆ
ಮುತ್ತು ಮಾರರು ಕೇರಿ, ರತ್ನಾ ಮಾರರು ಕೇರಿ
ಉಪ್ಪಾರೂರು ಕೇರಿ ವಳಗ್ಹಾಸೀ
"ಉಪ್ಪಾರೂರು ಕೇರಿ ವಳಗ್ಹಾಸೀ ಬಿಕ್ಸನೀಡ
ಸಿಸ್ತೇರೇ ಇಲ್ಲಾ ಮರುದಾಗೇ"

ಅಷ್ಟೊಂದಾ ಮಾತಾ ಕೇಳಾಳೇ ಗೌರಮ್ಮ
ಉಪ್ಪುರಿಗೆ ವಳಗೇ ನೆಡದಾಳೇ ಗೌರಮ್ಮ
ಸಣ್ಣ ಅಕ್ಕಿ ಪಡಿಯಾ ಮೊಗುದಾಳೆ
ಸಣ್ಣ ಅಕ್ಕಿ ಪಡಿಯಾ ಮೊಗುದಾಳೆ ಗೌರಮ್ಮ
"ಕೊಳ್ಳೋ ಜಂಗುಮ್ಮ ನಿನ ಪಡಿಯ
ನಿಮ್ಮಪ್ಪನ ಬಾಗಿಲಾ ಹಾವುಂಟು ಚೇಳುಂಟು
ಇನ್ನೊಂದು ಮೆಟ್ಟಲ ಇಳಿದಾಕೇ
ಇನ್ನೊಂದು ಮೆಟ್ಟಲು ಇಳದಾನೆ ಹಾಕರೇ
ಹೊಸದೊಂದು ಗಂಡನ ಬಾಗ್ಯ ಹರಸೇನೊ"
ವಂದಗುಸೆ ಇಳಿದಾಳೇ ಯೆರಡಂಗುಸೇ ಇಳಿದಾಳೇ
ರೂವಾರಾ ದಗುಸೇ ಇಳುದಾಳೇ (ಭಿಕ್ಷೆ)
ರೂವಾರಾ ದಗುಸೇ ಇಳದು ನೆನೀಡಾಗಿ
ತಪ್ಪನೇ ಆರಟ್ಟೆ ಹಿಡದಾನೆ
ತಪ್ಪನೇ ಆರಟ್ಟೆ ಹಿಡದಾನೆ ಶಿವರಾಯಾ
ಹೋಗಾನೇ ನಮ್ಮರ ಶಿವಮಾರಕೆ
ಕಾಯಾ ಕಟ್ಟಲು ಬಹುದು ಸಣ್ಣಯಾ ಕಟ್ಟಲು ಕೂಡಾ
ನೋಡಿ ಬಲ್ಲಿ ಅಕ್ಕಮ್ಮರಣಕಾವ (ಬನ್ನಿ)
ನೋಡಿ ಬನ್ನಿ ಅಕ್ಕಮ್ಮನಣಕಾ
ಹಾಳಾ ರಂಡೇ ಸುದ್ದಿ ಯೇನಾ ಹೇಳತೀರೀ?
ಕೂಡಿ ಬಲ್ಲೊಬ್ಬ ಹೊಲಿಯಾಗೆ
ಕೂಡಿ ಬಲ್ಲೊಬ್ಬ ಹೊಲಿಯಾಗೆ ಮ್ಯೆಲೀನ ಕೇರೀ
ಸಣ್ಣ ಬಟ್ಟಗೂ ದಾರಿ ಯೆರ ಕೋಡೀ
ಸಣ್ಣ ಬಟ್ಟೊಗೆ ದಾರಿ ಯೆರ ಕೋಡೀ
ಇಂದೂನೆ ಹುಟ್ಟಲಿ ನಾಳೆ ಸಾಯಾಲೆಂಬೂ
ಗಂಡಗೇ ದಾರೆ ಯೆರ ಕೊಡಿ
ಇಂದನೇ ಹುಟ್ಟಲಿ ನಾಳೆ ಸಾಯಲೆಂಬಾ
ಗಂಡಗೇ ದಾರೆ ಯೆರ ಕೊಡಿ

"ಇಂದನೇ ಹುಟ್ಟಲಿ ನಾಳೆ ಸಾಯಲೆಂಬಾ
ಗಂಡಾನೊಲ್ಲೇಳಾ ಜನುಮಾಕೆ
ಗಂಡಾನಾ ಒಲ್ಲೇ ಏಳ ಜನುಮಾಕೆ ಮರ್ತ್ಯವ ಸಾಲುಗ್ವಾ
ಲೋಲಾನಾ ನಾನು ಮುದುವ್ಯಾದೇ"
"ವಿಟ್ವಾರೆ ದಟ್ಟಿಯಾ ತೊಟ್ವರೆ ರುದ್ರಾಕ್ಷಿಯ
ಇಟ್ವಾರೇ ಪಂಚಾಽ ಸರದಂಡೇ
ಇಟ್ವಾರೇ ಪಂಚಾಽ ಸರದಂಡೆ ಮರುತ್ಯವ ಸಲಗ್ವಾ
ಲೋಲಾನೂ ನಾನು ಹೌದೇನೇ?"
"ಇಂದೂನೇ ಹುಟ್ಟಲಿ ನಾಳೆ ಸಾಯಲೆಂಬಾ
ಗಂಡಾನೊಲ್ಲೇಳ ಜನುಮಾಕೇ
ಗಂಡಾನೊಲ್ಲೇಳಾ ಜನುಮಾಕೆ ನನ್ನಮ್ಮ
(ಮಗಳನ್ನು) ಮುಕ್ಕಣ್ಣನಿಗೂ ದಾರಿ ಯೆರ ಕೊಡಿ."

● **ಕೆಲವು ಪದಗಳ ವಿವರಣೆ**

| | | |
|---|---|---|
| ಸಿಸಿವೂ | = | ಶಿಶು |
| ಮಲಿ | = | ಸ್ಥನ, ಮೊಲೆ |
| ಲಿಬೂತಿ | = | ವಿಭೂತಿ |
| ಹಾರರ ಕೇರಿ | = | ಬ್ರಾಹ್ಮಣರ ಕೇರಿ |
| ನಿಸ್ತ್ರೇರೆ | = | ಸ್ತ್ರೀಯರು |
| ಕೊರಮಜಿ | = | ಕೊರವಂಜಿ |
| ಪುರು | = | ನಗರ |
| ಹಬೆ | = | ಬೇಣ, ಹೊಲ |
| ಬಿಂದಿಗು | = | ಬಿದಿಗೆ, ಹಾಲು ಕರೆಯುವ ಪಾತ್ರೆ |

■ ಹೇಳಿದವರು : **ಸೌ. ಗೌರೀಬಾಯಿ ಗೋಪಾಲನಾಯ್ಕ** ಹೊಸೂರು, ಮತ್ತು
**ಸೌ. ಮಹಾಲಕ್ಷ್ಮಿ ಮುಕುಂದ ನಾಯ್ಕ,** ಕೊಂಡ್ಲಿ, ಸಿದ್ದಾಪುರ. ೦೧-೧೧-೧೯೭೦

# ೭. ಸಾವಿತ್ರಿಯ ಹಾಡು

ನಾಲಿಗೆ ವಳಗೆ ನಲಿದಿರುವಾ ಸರಸ್ವತಿ
ನೀ ಬಾರೇ ನನ್ನಾಽಽ ವಚಽನಾಽ ಕೇ ।।
ಹಾಡಂಗಳ ಅರಸರ್ಗೆ ನೂರೊಬ್ಬಾ ರಿಂಡಾಽರೂ
"ಪಿಂಡಕ್ ನೀರ್ ಬಿಡುವಲ್ಲೇ ಗಂಡೂ ಮಕ್ಕಳಿಲ್ಲೇ
ಉಂಡೂಡೀ ನಿಲ್ಲುವಾಽ ಹೆಣ್ಣು ಬಾಲಗಳಿಲ್ಲೇ
ಅರಸಾಽ,ರೇ ನಾಽ ಇದ್ದೂ ಇನ್ನೂಽ ಫಲವೇನು?"
ಅಟ್ಟಂಬೂ ಮಾತಾಽಽ ಕೇಳಾಽರೇಽ ಅರಸಾಽರೂ
ಜಽಪಪಾ, ತಪವನೆ ಮಾಡೀ ಬಾಗಿಲಿಂದಾಽ ಗುಡಿಯ್ಯೆದೂ
ಅಂಗಳದಲ್ಲಿರುವಾಽಽ ತಿಂಗಳಾಽಽ ಬೆಳಚ್ನಂಽಽತೇ
ವಂದು ತಿಂಗಳಾಽ ಹೊಳಿದಾಽವು ನುರುಪಾಽ ನರಸೀಗೇ
ಯೆಯ್ಡಂಬೂ ತಿಂಗಳಾಽಲಾಽದವೂ ನುರುಪಾಽನರಸೀಗೆ
ಅಂಗಳದಲ್ಲಿರುವಾಽ ಉಪ್ಪೂಽ ಹುಳನೇ ಹಽಣ್ಣಾ
ತಿನ್ನಬೇಕೆಂದೂಽಽ ಬಯಸಾಽಽಽಳೇ
ಮೂರಂಬು ತಿಂಗಳಲಾಽದವು ನುರುಪಾಽನರಸೀಽಗೇ
ಹಿತ್ತಲದಲ್ಲಿರುವಾಽ ಜಾಽಜೀ, ಜೂಜೀ ಹೂಽಽವಾ
ಮುಡಿಯಬೇಕೆಂಬೂಽಽ ಬಯಕೀಽಗೇ
ನಾಕಂಬೂ ತಿಂಗಳಾಽಽಲಾಽದವು ನುರುಪಾಽನರಸೀಗೇ
ತೋಟಽದಲ್ಲಿರುವಾಽಽ ಸಿಂಗಾರ ಕೊನಿಯಾಽ
ಮುಡಿಯಬೇಕಂದೂಽಽ ಬಯಸ್ಯಾಽಽಳೇ

ಏಳಂಬೂ ತಿಂಗಳಾಽಽಲಾಽದವೂ ನುರುಪಾಽನರಿಸೀಗೆ
ಬಾಳೆಯ ಹಣ್ಣೂಽಽ ತಿನ್ನಬೇಕೆಂದೂಽ ಬಯಸ್ಯಾಽಳೇ
ಎಂಟಂಬೂ ತಿಂಗಳಾಽಲಾಽದವೂ ನುರುಪಾಽನರಸೀಗೆ
ಎಳೆಯ ಚಾತಿಯ ಕಾಯೂಽಽ ತಿನ್ನಬೇಕಂದೂ ಬಯಸ್ಯಾಽಳೇ
ಒಂಬತ್ನೇ ತಿಂಗಳಾಽ ತುಂಬದೆ ಅರಸನರಸೀಗೇಽ
ಊರ ನಾರ್ಯವರ್ ಬಂದೀಽ ಅನ್ನಪಾಯಸ ಮಾಡಿಽ
ಹೆರುವಾಽ ಕೋಟಲಿಯಾ ತೊಡಗಿತು ನುರುಪಾಽನರಸೀಗೆ
ಬಾಲೆ ಹುಟ್ಟಿದ ಸುದ್ದೀ ಬಾಗಿಲಲಿ ಕೇಳ್ಯಾರೇ
ನದಿ(ಯ)ಲಿ ಮುಳುಕೀಽ ಸಾಽಽನ ಮಾಽಽಡೀ
ಬಟ್ಟರ ಮನುಗೇಽಽ ನಡದಾಽಽರೇ
"ಬಟ್ಟರೆ, ನಿಮ್ಮಾಽಽ ಪುಸ್ತಕವಾಽಽ ತೆಗದೋದೀಽ
ಬಾಲೆ ಹುಟ್ಟಿದಾಽಽ ದಿನವೇಽಽಳಿ"
ಅಟ್ಟಂಬು ಮಾತಾಽ ಕೇಳರೆ ಬಟ್ಟರೂಽ
ಪುಸ್ತಕವ ತೆಗೆದೋಽದೀ ತೆಗದೋದೀಽ
ಬಟ್ಟರು ನುಡಿದಾರೇ ಪಟ್ಟಿಯ ಮಾತಾ
ವಂದು ಅಂಗುಡಿಯಾ ಇಂಗು ಸಂಬಾರವನ್ನು
ಮದ್ದು ಮೆಣಸೀಗೆಂದೂಽ ತಂದವ್ರೇಽ
ಬಾಳಂತಿ ಮನ್ಯಲ್ಲಿ ಬಾಳ್ಯಲಿ ಚಪ್ಪರಾಽ
"ಬಾಗಿ ಬಾರಲ್ಲೋಽ ಬಳಗಾರಾಽಽ
ಬಾಳಂತಿಗೆ ಬಳೆಯಾಽ ಇಡುವಲ್ಲೀಽ"
ಬಟ್ಟಕಳ ಮಂದಿನೂ ಮಂತ್ರಾನೇ ಜಪಿಸಾರೇ
ಅಮೆಯ ಕಾರ್ಯನೇಽ ಸಾಗಿತೂಽಽಽ
ಮುಸ್ಟನ್ನ ಬೋಜನವಾಽ ಮಾಡಿ ಬಡುಸಾಽರೇ
ಶಿವಮ್ಮ ಸಾಯಂತ್ರಿಯ ತೊಟ್ಟಿಲಿಗೇ ಹಾಕಾರೇಽಽ
ವಂದಂಬು ತಿಂಗಳಾಽ ಆಗಿತು ಶಿಶವೀಽಗೇ
ಅಂಗಳಲ್ಲಾರೂಽ ಹರದಾಡುತಾಽದೇ
ಯೆಯ್ಡಂಬು ತಿಂಗಳಾಽ ಆದವು ಸಾವಿತ್ರೀಗೇಽಽ

ಮೂರನೇ ತಿಂಗಳದಾಽಗೆ ಕೂತಳೇ ಸಾವಿತ್ರೀ
ಐದಂಬು ತಿಂಗಳ ಆಽಗಿತು ಸಾವಿತ್ರೀಗೇ
ಅಂಗಳದಲ್ಲಾರೂ ಓಡಾಡೂತಾದೇ
ಆರನೇ ತಿಂಗಳಾಽಽ ಆಽಗಿತು ಸಾವಿತ್ರೀಗೇ
ಆಗೆ ಹೆಣ್ಣ ಕೇಳಲಿಕ್ಕೇ ತಯಾರಾಗವ್ರೇಽ
ಏಳನೇ ತಿಂಗಳಾಽ ಆಽಗಿತ್ತು ಸಾವಿತ್ರೀಗೇಽ
ಹೆಣ್ಣ ಕೇಳ್ವದಕೇಽ ಬಂದವ್ರೇಽಽ
ಬಟ್ಟರ ಮನೆಗೇ ಹೋದರೂ ಲಾಽಗಿನ್ನು
ಎಲ್ಲೈಲ್ ಕೇಳಿದ್ರೂ ಜಾತಕವೇ ಆಗ್ಲಿಲ್ಲಽ
ಬಟ್ಟ ಜೋಯಿಸರ ಮನಿಗೋಽಽದ ರಾಽಗಿನ್ನು
ಋಷಿಪುತ್ರಗೆ ಜಾತ್ಕಾಽ ಲಾಽಗೀಽತೂಽ
ವಂಽದರಶನ ಕೊಂಬೂ ವಂದು ಹೊಂಗಿನ ಮಾಲೇ
ಮಗಳಿಗೆ ತಂದೂ ಕೊಡವಾನೇಽ
ಅಪ್ಪ ಕೊಟ್ಟಿದಾಽ ಅರಶನ ಕೊಂಬು ಹೂಂಗ್ನಮಾಲೆ ತಕ್ಕಂಡೀ
ಮುತ್ತಿನ ಕಣ್ಣೀಽರಾಽ ಹರಿಸ್ಯಾಳೇಽ ಸಾವಿತ್ರೀ
ಬಿದ್ದಾಽ ಮಾರಿಗವೇಽಽ ಹಿಡಿದಾಽಽಳೇ ಸಾವಿತ್ರೀ
ಋಷಿಪುತ್ರಗೆ ಹೂಗಿನ ಮಾಲಿ ಇಟ್ಟಾಽಽಳೇಽ ಸಾವಿತ್ರೀ
ಮದ್ವಿ ಕಾರ್ಯವೇಽಽ ಸಾಗೀಽಽತೂಽಽ
ಮದ್ವಿ ಕಾರ್ಯವೇ ಸಾಗೀತು ಸಾವಿತ್ರೀ
ವಂದಲ್ಲೇ ಯೆರಡಲ್ಲೇ ನಾಲ್ಕನೇ ದಿನದಽಲ್ಲಿ
ಕೇರ್‌ಯನ ನಾರಽಯರಽಽ ಕರಕಂಽಡೀಽ
ನದಿಗಿಂಽದಾಽಽ ರೇಽಽ ನಡೆದಾಳೇ ಸಾವಿಽತ್ರೀ
ಮಿಂದಾಽಽಽಳೇ ಚಂಡೂಕೀಽ ಸಳುದಾಽಳೇಽ
ಅಪ್ಪ ಕೊಟ್ಟಿದಾಽಽ ಅರಶಿಣಾಽ ಕೊಂಬಿಽನ್ನು
ಸುಳಿಯೊಳಗೆ ಸಿಕ್ಕೀಽಽ ಮುಳುಗೋಯ್ತು ಸಾವಿತ್ರೀ
"ಇನ್ನೇನೆ ನನ್ನಾಽಽ ಗತಿ?" ಯಂಽತೂಽ
ಮನೆಗಾದಾರಿನ್ನೇಽ ಬಂದಳೇ ಸಾವಿತ್ರೀ

ವಸ್ತಿಲ ಸಾರೆಸಾಳೇಽ ರಂಗೋಲೀ ಇಟ್ಟಾಽಳೆ
ಬಪ್ಪಲಿವರಿಗೇಽ ಈ ಹಲಿಯೇಽ ಅಳಿಬಾಽರಾಽ
ಅಡಗಿಯ ಮಾಡಾಽಳೇ ಶಿಕ್ಕಕೆ ಇಟ್ಟಾಽಳೆ
"ನಾಽ ಬಪ್ಪಲಿವರಗೇಽ ಅಡಗೀ ಹಳಸಬಾಽರ"ಂಽತೂ
ಸುತ್ತೇ ಕೊಟ್ಟುಗಿಗೋಗೀಽ ಯಳಿಯಹುಲ್ಲಕ್ಕಚ್ಚಿಟ್ಟೀ,
"ನಾಽ ಬರ್‌ವಲ್ಲಿವರಿಗೇಽ ಕರಗೋಳ ಹಶಿಯ ಬಾರ"ಂಽತೂ
ದೇವ್ರಲ್ಲಿ ದೀಪಾಽ ಇಟ್ಟಾಳೆ ಸಾವಿಽತ್ರೀ
ಯೆಯ್ಡೂ ಕೈ ಮುಗಿದೀಽ ನಮಸ್ಕಾರಽ ಮಾಽಡಾಽಳೇ
"ನಾ ಬಪ್ಪಲ್ಲಿವರಿಗೂ ನನಿಬಾಽಽರಽ
ಮಾಳುಗಿಗೆ ಹೋಗೀಽ ಪಟ್ಟೀ ಪೆಟ್ಟುಗಿ ಬಿಡೂಽಸೀ
ನಾರ ಪಟ್ಟೆಯಾಽಽ ಉಟ್ಟಾಽಽಳೇಽ
ಋಷಿಪುತ್ರ ಮುತ್ತಿನ ಕೈಕೊಡಲೀ ಹೆಗ್ಲಗಿಟ್ಟವ್ನೇ
ಮಾಳುಗಿ ವಳಗೇಽಽ ಮಾಽವನ ಕಂಽಡಿನ್ನು
"ನಾಽ ಹೋಗಿ ಬತ್ತೇಽಽವನಽಕಿಽಽನ್ನೂಽ"
"ಕಣ್ಣಿಲ್ಲೇ ಕಾಲಿಲ್ಲೇ ನಮ್ಮ ನೋಡುವರಿಲ್ಲೇ
ನೋಡಿಕೊಂಬನೆ ನೀನು ಇಲ್ಲಿ ಇರು" ಅಂಽಽದಾ
ಅತ್ತಿಯವರ ಕೂಡೇಽಽ "ವನಕೆ ಹೋಗಿ ಬತ್ತೇಽಽಳು" ಅಂದಾ
ರಾಽ ಜಂಗಳ ಮೆಟ್ಟಾಽಽ ಇಳದಳೆ ಸಾವಿತ್ರೀಽ
ಅಪ್ಪನ ಮನೆಗೇಽಽ ಬಂದಾಽಽಳೇ ಸಾವಿತ್ರೀ
ಕೊಟ್ಟುಗಿಗನ್ನೂಽಽ ನೆಡಿದಾಽಽಳೇಽಽ
ಕರವನ ತಂದಿಽನ್ನೂಽಽಽ ಹಸಿಯಾನೇ ತಂದ್ಹಾಕಾಳೇ
ಅಪ್ಪನ ಕೂಡೆಽ "ಅಪ್ಪಯ್ಯಽ" ಲಂದೇ ಕರಿದಾಳೇ ಸಾವಿತ್ರೀ
"ನಾನು ಹೋಯಿತೇಽ ವನಕ್ಕಿನ್ನೂಽ"
ಮಾಳುಗಿ ವಳಗೇ ನಡೆದಾಳೆ ಸಾವಿಽತ್ರೀ
"ತಾಯಾಽರೆ" ಲಂಗೀ ಕರಿದಾಳೇ ಸಾವಿಽಽತ್ರೀ
"ನಾನು ಹೋಯಿತೇ ವನಕಿಽನ್ನೂಽಽಽ"
"ನಮಗಾರು ಇನ್ನೇ ಗಂಡು ಮಕ್ಕಳಿಲ್ಲೇ

ನಮ್ಮ ನೋಡಿಕೊಂಡು ಮನಿಯಲ್ಲಿರು" ಅಂಽದಾ
"ನಿಮಗೆ ಇನ್ನೂ ಗಂಡು ಮಕ್ಕಳೂ ಬೇಕೂ
ನಾನು ಹೋಯಿತೇಽಽ ವನಕೀಽಽನ್ನೂ"
"ನೀವು ಇನ್ನೂಽ ವನಕೆ ಹೋಗುರೀ ಸ್ವಾಽಮಿಽಽ
"ನಾನಾರೂ ಇನ್ನೇಽಽ ಬರುತೇಽನೆಽಽ"
"ನೀನು ಇನ್ನೇ ಬರುಬೇಡ ಸಾವಿತ್ರೀ
ನೀನಾರು ಇಲ್ಲೇಽಽಽ ಇರುಽಽ" ಅಂಽದಾಽಽ
"ನೀವಾರು ಇನ್ನೇಽ ವನಕೆ ಹೋದರೆ ಸ್ವಾಮೀ
ನಾನಾರು ಇಲ್ಲಿದ್ದು ಪಲವೇನೂ?" ಅಂದಾಳೇ
"ನಾನೀ ನಿಮ್ಮ ನೆರಳೀಗೇ ಬರುವೇನೂ"
ಆಗಿನ್ನೇ ಋಷಿಪುತ್ರಾ ಸಾವಿತ್ರೀ ಹೊರುಟಾರೇ
"ನಿಂಬೇಽ ವನವೇಽ ನನ್ನಾಽಽ ನೆಽರಳಾಽಗೂಽಽ"
ಋಷಿಪುತ್ರ ಸಾವಿತ್ರೀಽ ವಡಗೂಡೀ ಹೋದಾರೇ
ಅಡಿಯು ಮುಂದಾಽಗೀಽಽ ನಡೆದಾರೇ
"ಬೆಟ್ಟದ ಮಲ್ಲಿಗೇಽ ಚೊಟ್ಟಿಗೆ ಪರಿಮಾಳ
ಕೊಯ್ಕಳ್ಳೇ ಮಡದೀಽಽ ಮುಡಿ ಕೊಽಳ್ಳೇಽಽ"
"ಮಲ್ಲುಗಿ ಹೂಗಾಽಽ ಮುಡ್ವಲೀ ತಡವುಂಽಟೂ
ನೀವ್ ಜಾಗ್ರತಿಲಾಗೀಽಽ ನೆಡೆಽಽ" ಅಂತೂ
"ಹುಡಕಿರಿ ಅತ್ತೀಽಽ ಮರ"ನಂಽಽತೂಽ
ಆಗಿನ್ನು ಇನ್ನೇಽಽನಡಿದಾಽಳೆ ಸಾವಿಽತ್ರೀ
"ಇದು ನೋಡೆ ಸಾವಿತ್ರೀಽ ಕಾಡ ಮೃಗಗೊಳಾಽ"
"ಕಾಡ ಮುರ್ಗಗಳು ಹುಲಿಗಳಿರಲಿ ಸ್ವಾಮೀಽ
ಜಾಗ್ರತೀಲಿನ್ನು ನೀವೂಽಽ ನಡಿ"ಲಂಽತೂಽ
ಅತ್ತಿಯ ಮರನಾಽಽ ಏರಿದ ಋಷಿಪುತ್ರಾಽ
ವಂದಂಬೂ ಹೆಣಿಯಾಽಽ ಕಡಿದೀಽದಾ
ವಂದಹೆಣಿಯ ಕಡದೀಽದು ಕಾಲ ಮೇನ್ ಬಿದ್ದೀಽತೂಽ
ಮತ್ತೊಂದು ಹೆಣಿಯಾಽಽ ಕಡದೀಽದಾಽ

"ಕೈ ಬೇನೆ ಕಾಲ್ ಬೇನೇ ತಲಬೇನೆ, ಸಾವಿತ್ರೀ
ನೀಡಲ್ ನಿನ್ನಾಽಽಽ ನಳಿತೋಽಽಳಾಽಽ ಸಾವಿಽತ್ರೀಽ"
"ನನ್ನ ನಳಿತೋಳೂ ನಿಮ್ಮ ಕಯ್ಯ ಮುಟ್ಟಿಽರ
ನನ್ನ ನಳಿತೋಳೂ ಯೆಲ್ಲಿಗೆ ಮುಟ್ಟಾಽಽದು?
ಇನ್ನೊಂದು ಮೆಟ್ಟಾಽಽಽ ಇಳಿಽಽಲಂಽಽತೂಽ"
ಅಟ್ಟಂಬು ಮಾತ ಹೇಳು ತಂಕ ಋಷಿಪುತ್ರ ಇಳದಾಽನ
ತನ್ನ ನಳಿತೋಳ ನೀಡಿನ್ನು ನೆಗದಾಽಳೇ
ಸಪ್ಪನೆ ಮುರಿದಾಽಳೆ ಸಪ್ಪನೆ ಹಾಸಾಽಳೇ
ಸಪ್ಪಿನ ಮೇನಿನ್ನೇಽಽಽ ವರುಗ್ಗಾಽಳೇಽ
"ದೂತರು ಬರುವರೂಽ ಕಲ್ಲೆಲ್ಲಾ ಚೂರಾಗೂಽದೂ
ನೀನಾರೂ ಇನ್ನೂಽ ಹೆದ್ರಬೇಡಾ ಸಾವಿತ್ರೀಽ
ದೈರೀಲೀ ನೀನೂಽಽ ಇರುಽಽ" ಅಂಽಽದಾಽಽ
ಅಟ್ಟಂಬೂ ಮಾತನೆ ನುಡಿದಾ ಋಷಿಪುಽತ್ರಾ
ತನ್ನ ಗಟವನೂಽ ಲೋಪಽ ಸಾಽಽನೇ
"ಬರ್‌ದೆಗಿದ ನೆಂಟಾಽಽ ಸುಕ್ಲವಾರಕೂ ಬಂದೀದಾಽ
ತುಂಬಿದಾಽ ಕೊಡನಾಽಽಽ ನೀರನೇ ಕೊಟ್ಟಿಽಽದೇ
ಅದ್ಕೆ ನಿಮ್ಮ ಅವಿಸಾಽಽಕಿರುಽಽದಾಽಽದೋ
ಬಿಚ್ಚೀ ಕಟ್ಟಿದಾಽ ಮುಡಿಯನು ಬಚ್ಲಕಲ್ ಮೇನ ಬಿಚ್ಚಿದಿನೋ ಪುರಿಸಾಽರೇಽ
ಬಿಚ್ಚೀ ಕಟ್ಟಿದಾಽ ಮುಡಿಯನು ಬಚ್ಲಕಲ್ ಮೇನ್ ಬಿಚ್ಚಿದೆನೋ ಪುರಸಾಽರೇಽ
ಅದ್ಕೆ ನಿಮ್ ಅವಿಸ್ಯಾಽಽಽ ಕಿರಿದಾಽಽದೋ
ಮಿಂದೀ ಬರುವಾಗೇಽಽ ಉಮಿಯನು ಚಲ್ಲೀಽದೇ
ಅದ್ಕೆ ನಿಮ್ ಆಽವಿಸವೇಽಽಽ ಕಿರಿದಾಽಽದೋಽ
ತಟ್ಟ ಪಾತ್ರಕೆ ಮುಕ್ಕ ಚೆಪ್ಪನೇ ಇಽಕ್ಕೀಽ
ಕೆರೆಕೆರ್ಸಿ ಇನ್ನೇಽಽ ಬಡ್ಸದ್ನೆನೋ ಅರಸಾಽರೇಽ
ಅದ್ಕೆ ನಿಮ್ಮಾವಿಸಾವೇಽಽ ಕಿರಿದಾಽಽದೋಽ
ಹತ್ ಜನ ಕೂತಲ್ಲೀ ಪಂತೀಲ್ ಪರ್ಪಂಚ ಮಾಡಿದ್ನೋ?
ಹತ್ ಜನ ಕೂತಲ್ಲೀ ಪಂತೀಲ್ ಪರ್ಪಂಚ ಮಾಡಿದ್ನೋ ಲರಸಾಽರೇಽ

ಅದ್ಕೆ ನಿಮ್ಮಾ್ಮವಿಸಾಽಽ ಕಿರಿದಾಽಽಽದೋಽಽ
ಹೊತ್ ಕಂತ್ವಾಗೇ ಉಟ್ಟ ಶೀರಿಯಾ ಶೆರಗಹಾಕಿ ಏರ್ಸಿದೆನೋ ಅರಸಾಽರೇಽ
ಅದ್ಕೆ ನಿಮ್ಮಾ್ಮವಿಸಾಽ ಕಿರೀದಾದೋಽಽ
ವಂಟ ಹಣತಗೀಗೆ ಎಂಟ ನೆಣಿ ಹಾಕಿದ್ನೋ ಪುರಿಸಾಽರೇಽ
ಅದ್ಕೆ ನಿಮ್ಮಾ್ಮವಿಸಾ ಕಿರುದಾಽಽದೋಽ
ಮಂಗಳ್ವಾರ ದಿನದಲ್ಲಿ ಅಂಗ್ಳದಲ್ಲಿ ಚಗಣೀಽಸದೆ ತೆಗದ್ನೇನೋ ಅರಸಾಽರೇಽ
ಅದ್ಕೆ ನಿಮ್ಮಾ್ಮ ವಿಸಾಽಽ ಕಿರುದಾಽಽದೋ"
ಅಟ್ಟಾರೂ ಇನ್ನೂ ಹೇಳು ಕೇಳು ತನಾಽಽಽಕಾಽಽ
ದೂತಾರೂ ಇನ್ನೇಽಽ ಬಂದಽವ್ರೇಽಽ
"ನಾಕ ಮಂದಿ ದೂತಾಽರೇಽ ಯೇನ್ ಬಂದ್ರಿ ದೂತಾಽಽರೇ?
ಬಂದಾಽಽ ಕಾರಣವಾಽಽಽ ವದಗಹೇಽಽಳಿ"
ವಡಯನ ಕರಯಾ ಆಗದೆ ಸಾವಿತ್ರೀ
"ಆತನ ಪರಣ ವಯ್ಯ್ಯಽವಾಽಽರೆ"ಂದಾಽಽ
"ಯೇನೇನ್ ಮಾಡೀರೂ ಆತನ ಪರಣಾಽಽನಾಽ ಕೊಡನಾಽಽರೇಽ
ನಿನ್ ವಡಿಯನ ಕೂಡೇ ಬಾ ಹೇಽಳಿ"
ಅಟ್ಟಂಬು ಮಾತನೆ ಕೇಳಾರೆಽ ದೂತಾಽಽರೂ
ಹಿಂಽದಕೆ ವಡಿಯನ್ದಲ್ಲಿ ನಡಿದಽವ್ರೇ
"ಯಾಕ್ ಬಂದ್ರಿ ದೂತರೇಽ ಯೇನ್ ಬಂದ್ರಿ ದೂತಾಽರೇಽ?
ಯಾಕವ್ನ ಪರಣಾಽಽಽ ತರಲಿಽಽಲ್ಲಾಽಽ?"
"ಯೆಟ್ಟು ಹೇಳಿದ್ರೂ ಕೊಡಲಿಲ್ಲ ಸಾವಿತ್ರೀ
'ಹೋಗಿ, ನಿಮ್ಮ ವಡಯನ್ ಕಳಗೀಽಽ' ಅಂತೂಽ
ಮುತ್ತಿನ ಕಣ್ಣೀರಾಽಽ ಹರಿಸಾಽಳೆ ಸಾವಿಽಽತ್ರೀ
ಮದಗಲಾಗಿನ್ನೇಽಽ ಹರಿದಾಽಽವೇಽಽಽ"
ಆಗಾರು ಇನ್ನೇಽಽ ಬಂದಾನೆ ಯಮರಾಽಯಾಽಽ
"ಕೇಳ್ಕೇಳೆ ಸಾವಿತ್ರೀ ಕೇಳಾಽಲೆ ಸಾವಿಽಽತ್ರೀಽಽ
ಆ ಗಂಡ್ನ ಉಂಗೊಟೆ ಹಿಡದು ಯಾಕೆ ನೀನಿನ್ನೂ ಕೂತಿದೆ?"
ಅಟ್ಟಂಬೂ ಮಾತಿನ್ನೇ ಕೇಳಿತು ಸಾವಿಽಽತ್ರಿ

ತಾವುರಿ ಹೂಂಗಾ, ಕೊಯ್ದು ತಂದಿತೂ ಸಾವಿತ್ರೀ
ಯಮರಾಯ್ನ ಪಾದಕೆ ಇಟ್ಟಿ ನಮಸ್ಕಾರ ಮಾಡಿತು
ಯಮರಾಯ್ನ ಪಾದಕೆ ನಮಸ್ಕಾರ ಮಾಡುತ್ಽನಕಿ
"ನಿನ್ನ ಮುತ್ತೈದೆತನವೆ ಹೆರಿದಾಗ್ಲಿ" ಅಂದಾ
ಅಟ್ಟಂಬೂ ಮಾತಾಽಽ ಹೇಳು ಕೇಳೂಽಽತನಾ
ಅಡ್ಡಮುಡಿಗೊಳಾಽಽ ಕಟ್ಟಾಽಳೆ
"ತಡಿಯಾದೆ ಇನ್ನೇಽಽ ವಯ್ಯಾವೆ ಸಾವಿಽಽತ್ರೀ
ಯಾಕೆ ಅಡ್ಡ ಮುಡಿಯನೆ ಕಟ್ಟಿದೆ?" ಅಂಽದಾಽ
ಈಗಾರು ಇನ್ನೆ ಸವ್ನೆದ್ದ ಯಮರಾಽಯಾಽ
ಸಾವಿತ್ರಿ ಇನ್ನೇಽಽಸವನೆಽಽತ್ತೂ
"ನನ್ ಕೂಡಾರು ಬರುದಕೆ ಸಾದ್ದಿಲ್ಲ ಸಾವಿಽತ್ರೀ
ನೀನಾರು ಇನ್ನೇಽಽ ಮನಿಗೆ ಹೋಽಽಗೂಽಽ"
"ಮನಿಗೆ ಹೋದರೆ ಇಂಗು ಸಂಬರಾಽಽ ಅರಿಲಾಽರೇ
ನಾನಾರು ಇನ್ನೇಽಽ ಬರುತೇಽಽನೇಽ"
ಅಟ್ಟಂಬು ಮಾತ ಹೇಳದೆ ಸಾವಿಽತ್ರೀ
ಸಾವಿತ್ರಿನಾರೂಽ ನುಡಿದಾಽಽಳೇಽಽ
"ನಾನರು ಇನ್ನೆ ಬರುತಂಽಽಕ ಹಕ್ ಪಕ್ಸಿಗೋಽಳಾಽ
ನೀವಾರು ಇವ್ರಾಽಽಕಾಽಯೆಽಽಂ"ಽಽದಾಽಽ
ಅಟ್ಟಂಬೂ ಮಾತಾಽಽ ಹೇಳಾಽಳೆ ಸಾವಿಽತ್ರೀ
ಕಾಡ ಮೃಗಗೊಳ ಕೂಡೆ ನುಡಿದಾಽಳೇ
"ಕಾಡ ಮೃಗಗೊಳೆಽ ನೀವಾರೂ ಇವ್ರಾ ಕಾಽಯೆ"ಂದಾಽ
ಅಟ್ಟಂಬು ಮಾತನೆ ಹೇಳಾಳೆ ಸಾವಿಽತ್ರೀ
ಯಮರಾಯ್ನ ಸಂಗಡೇ ನಡಿದಾಽಳೆ
ಯಮರಾಯ್ನಕಿಂದಾಽ ಮೂಽರ್ ಮೆಟ್ಟಾ ಮುಂದಾಽಗೀ
ಸಾವಿತ್ರೀ ಇನ್ನೂ ನಡಿದಾಽಽಳೇ
ಯಮರಾಯ್ನ ಪಟ್ಟಕೆ ಹೋಗೀ ಸಾವಿಽತ್ರೀ
"ಶಿವ ಶಿವ" ಅಂದಿ ಬಾಗ್ಲಮೆಟ್ಲ ಹಽತ್ತುತಾಽನಾ

ನರಕದಲ್ಲಿ ಬಿದ್ದವ್ರು ಯೆದ್ದೂ ಕೂತಾಽರೂ
ಯೆಯ್ದಂಬೂ ಮೆಟ್ಟ್ಯಾಽಽಽ ಹತ್ತಿತು ಸಾವಿಽತ್ರೀ
"ಯದಿ ಮೆನ್ ಕಲ್ ಹೇರ್ದಽರಾಽ ಏಳಿಽ" ಅಂತೂಽ
ಮೂರಂಬು ಮೆಟ್ಟ್ಯಾರೂ ಹತ್ತಿತು ಸಾವಿಽತ್ರೀಽ
"ಮುಳ್ ಜಗ್ಗಿ ಬಡ್ದೋರೆಲ್ಲ ಏಳಿಽಽ" ಅಂತೂ
ನಾಕಂಬೂ ಮೆಟ್ಟ್ಯಾಽಽಽ ಹತ್ತಿತ್ತು ಸಾವಿಽತ್ರೀಽ
"ಪಾಪ ಮಾಡ್ದೋಽರ್ಯೆಽಲ್ಲಾಽಽ ಏಳಿಽಽ" ಅಂತೂಽ
ಐದಂಬೂ ಮೆಟ್ಟ್ಯಾಽಽಽ ಹತ್ತಿತು ಸಾವಿಽತ್ರೀಽ
ಬೆಂಕಿ ಕೊಂಡ್ದಲ್ ಬಿದ್ದೋರು ಏಳಿಽಽ" ಅಂತೂಽಽ
ಆರಂಬು ಮೆಟ್ಟ್ಯಾಽಽ ಹತ್ತಿತು ಸಾವಿಽತ್ರೀಽ
"ಬಚ್ಲಕಲ್ನಗ್ ಹುಳ್ಯಾಗ್ ಮಿಡ್ಕ್ಯೊರೇಲ್ಲಾ ಏಳಿಽ" ಅಂತೂ
ಏಳಂಬು ಮೆಟ್ಟೀಽಗ್ ಕಾಲಲಿಟ್ಟಿಽಽತ್ತೂಽ
ಏಳಂಬೂ ಮೆಟ್ಟ್ಯಾಽಽ ಕಾಲ ಇಡೂಽ ತನಽಽಕಾ
ಯಮರಾಯನ ಹಿಂಡ್ತೀಽಽ ಬಲ್ಲಿ ಬಂದೀಽತೂ
"ಯಮರಾಯ್ನ ಪಟ್ಟಣವಾಽಽ ಹಾಳಾಽ ಮಾಽಽಡುರೀ ಸ್ವಾಮೀಽಽ
ಅದ್ರ ಗಂಡನ ಆವಿಶವಾಽ ಕೊಟ್ ಕಳುಗೆ"ಂಽಽತೂಽ
"ನರಕಲ್ ಬಿದ್ದೋಽರೂಽ ಯೆಲ್ಲರ್ ಯೆದ್ದಽಽವ್ರೇಽ
ಆದ್ರ್ ಗಂಡನ ಆವಿಶ್ಯ ಕೊಟ್ಟಿ ಕಳುಗ"ಂಽಽತೂಽಽ
"ಅಟ್ಟು ಹೇಳಿದ್ರೂ ತಾ ಕೇಳುದಿಲ್ಲಂ"ತೂ
"ತಾಽ ಪಗ್ದಿನಾರೂಽಽ ಆಡ್ವೆ"ನಂಽಽತೂ
ಆಡಾಽಡಿದ ಪಗಡೀಽ ಸಾವಿತ್ರಿ ಗೆದ್ದಿಽಽತೂಽ
ಆದ್ರೂ "ಆವಿಸ ನಿನಗೆ ಕೊಡಲಾರೆ"ಂದಾಽ
"ನೀ ಆಽವಿಸ ಕೊಡದಿರೆ ಯಮ್ನ್‌ಪಟ್ಣ ಸುಟ್ಟಿ ಸೂರೆಗ್ಯೆಽಽವೇಽ
ನನ್ ಪುರಿಸನಾಽವಿಸವಾಽಽ ಕೊಡಿಽ" ಅಂಽತೂಽ
"ಬೇಕಾದ್ದ ನಾನು ನಿನಗೆ ಕೊಡುವೇಽಽನೂ
ನಿನ್ ಪುರಿಸನಾಽವಿಸವಾಽಽ ಕೊಡನಾಽರೇಽಽ"
"ಅತ್ತಿಗೆ ಕಣ್ಣಿಲ್ಲೆ ಮಾಽವಗೆ ಕಾಲೀಽಽಲ್ಲೇ"

ಅಂದ ಹೇಳಿಲಿನ್ನೂಽಽ ನುಡಿದಾಽಽಳೇ
"ಮಾವಗೆ ಕಣ್ ಕೊಟ್ಟೆ ಅತ್ತಿಗೆ ಕಾಲ್ ಕೊಟ್ಟೆ
ನೀನಾರೂ ಇನ್ನೂಽಽ ನಡಿ"ಲೆಂಽಽದಾಽಽ
"ನನ್ನ ಅಪ್ಪಯ್ಗೆ ನೂರೊಂದು ಹೆಂಡಾಽಽರೂ
ಪಿಂಡಕೆ ನೀರಿಡ್ವಲ್ಲೆ ಗಂಡು ಮಕ್ಕಳಿಽಲ್ಲೇ"
ಅಂದಹೇಳಿಲಿನ್ನೂಽಽ ನುಡಿದಾಽಽಳೇಽ
"ಕೇಳ ಕೇಳೆ ಸಾವಿತ್ರೀಽಽ ನೀ ಕೇಳೆ ಸಾವಿಽಽತ್ರೀ
ನಿನ್ಗ್ ಬೇಕಾದ್ದ ನಾನೂಽಽ ಕೊಡುವೆಽಽನೂಽ
ಬೇಕಾದ್ದ ಇನ್ನೂಽಽ ಕೊಡುವೇನು ಸಾವಿಽತ್ರೀಽ
ನೀನು ತೌರಿಗೇಽಽ ನಡೆ"ಯೆಂಽಽದಾಽ
"ನೀವೆಟ್ಟೈಸಿರಿ ಕೊಟ್ಟರೆ ನಂಗ್ಯಾಕೆ ಸ್ವಾಮಿ?" ಅಂತೂ
ತಂಗ್ ತಿಂಬೂಕೆ ಇನ್ನೂಽಽ ಮಕುಳಿಲ್ಲಽ"
"ನಿಂಗೆ ಬೇಕಟ್ಟ ಮಕ್ಕಳ ಕೊಡುತೇನೆ ಸಾವಿಽಽತ್ರೀ
ನೀನಾರೆ ಮನೆಗೇಽಽ ನಡಿ" ಅಂಽಽದಾ
"ಪುರಿಸಾರಿಲ್ಲದೆ ನನ್ಗ್ ಮಕಿಳಿದ್ದ ಪಲವೇಽಽನೂ?
ನನ್ಗ್ ಪುರಿಸಾಽರ ಇನ್ನು ಕೊಡು" ಅಂಽತೂ
"ಪುರಿಸಾಽರೆ ಇಲ್ಲಾದೆ ಯೆಲ್ಲಾರೂ ಹೋದಾಽಽರೇಽ
ಇಂಗು ಸಂಬರವಾಽಽ ಹೊರಿ" ಅಂಽಽತ್ರೂಽ
ಕಾರ್ಯಕಟ್ಲೆಕೆ ಹೋದರೆ ಯಮರಾಽಽಯಾಽಽ
ಮುತ್ತೈದಕ್ ಹೋಽದರೆಽಽ ಕಳಸಕೆ ಬಾಽರಲಂತ್ರೂಽ
ಇದಿಯವ್ರು ಹೋದರೆಽಽ ಇಂಗು ಸಂಬರವಾಽಽ ಹೊರಿಽಽ ಅಂಽತ್ರೂ"
ಅವ್ನಕೂಡೆ ತರ್ಕಕೆ ನಿಂತಾಽಽದೇಽ
ಯೆಟ್ಟು ಹೇಳಿದ್ರೂಽಽ ಕೇಳುಲಿಲ್ಲ ಲಂದ್ ಹೇಳೀಽ
ಅರ್ ಪುರಿಸಾಽನಾವಿಸವಾಽಽ ಕೊಡುವಾಽಽನೇಽ
ತಾವೂರಿ ಹೂಂಗಾಽಽ ಮುಡಿದಾಽಳು ಸಾವಿಽಽತ್ರೀಽಽ
ಪುರಿಸನಾಽವಿಸವಾಽ ನಿಂಬೀ ಕಡಿಯಲ್ಲಿ ಹಿಡವಾಽಳೂ
ಪುರಿಸನಾಽವಿಸವಾಽಽ ಬಲಿಗೈಲಿಲಿಡು ಕಂಽಡೀಽ

ಯೆಡಗೈಲಿ ದೀಪಾಽಽ ಹಿಡಿದಾಽಽಳೂಽ
ಯೆಡಗೈಲಿ ದೀಪಾಽಽ ಹಿಡಕಂಡಿ ಸಾವಿಽಽತ್ರೀಽ
ಪುರಿಸರಿದ್ದಲ್ಲೀಽಽ ಬರುವಾಽಽದೇ
ಪುರಿಸರಿದ್ದಲ್ಲೀ ಬರುವಾಽಽ ತನಕಿನ್ನೂಽಽ
ಪುರಿಸನುಯೆದ್ದೀಽಽ ಕುಳೂವಾಽಽನೇಽಽ
ಪುರಿಸರಿದ್ದಲ್ಲೇ ಬಂದೀ ಕುಂತಾಽಳೆ ಸಾವಿಽಽತ್ರೀಽ
"ನಿನ್ನಗಿನ ದಿವ್ಸದಲ್ಲಿ ಯೆಂತಾ ಸಪ್ನವ ಕಂಡೀಽರೀ?
ಕಂಡ ಸಪ್ನವಾಽಽ ನನಗೆ ಹೇಽಽಳಿಽಽ"
ಮನಗಾರು ಇನ್ನೇಽಽ ಗಂಡ ಹಿಂಡ್ತೀಽ ಬಂದಾಽಽರೇಽ
ಅತ್ತಿಗೆ ಮಾವಗೆ ನಮಸ್ಕಾರ ಮಾಡವ್ರೇಽ
ಅವ್ರಾರೂ ಇನ್ನೂಽಽ ಹರುಽಽಸಽವ್ರೇಽಽ
"ಕೇಳ ಕೇಳೆ ಸಾವಿತ್ರಿಽ ಕೇಳಲೆ ಸಾವಿಽಽತ್ರೀಽ
ನಿನ್ನ ಪುಣ್ಯದಲ್ಲಿ ಇಟ್ಟು ಅನುವಾಽಽದೋ" ಲಂದೆಹೇಳೀಽ
ಮಗ್ನಿಗು ಸೊಸಿಗೂಽಽ ಹರುಸಽಽವ್ರೇಽ
ಹರಸದ್ದು ಕೇಳವ್ರೇ ತಮ್ಮ ತೌರಿಗೂ ಇನ್ನೂ ನಡೆದಽವ್ರೇ
ತಾಯಿಗು ತಂದಿಗೂ ನಮಸ್ಕಾರ ಮಾಡಽವ್ರೇ
"ಕೇಳ್ಕೇಳೆ ಸಾವಿತ್ರೀಽ ಕೇಳಾಲೆ ಸಾವಿಽಽತ್ರೀಽಽ
ಯಮರಾಯ್ನ ಪಟ್ನಕೋಗಿ ಬಂದವ್ರಿಲ್ಲಂ"ಽಽತ್ರೂ
"ನೂರೊಂದು ಹಿಂಡರ ಮದ್ವಿಯಾಲಾದಾಽರೂ
ಗಂಡುಮಕ್ಕಳ ಪಲವು ಇಲ್ಲಾಗಿಽಽತ್ತೂಽ
ಸಾವಿತ್ರಿ ನೀನೂ ತಂದೇ" ಅಂಽಽತ್ರೂಽಽ
ಸಾವಿತ್ರೀ ನೀನೂ ತಂದಿದೆ ಲಂದಹೇಽಽಳೀಽ
ಮಗಲೀಗೂ ಅಳಿಯಾಗೂಽ ಹರುಸಽಽವ್ರೇಽ.

● **ಕೆಲವು ಪದಗಳ ವಿವರಣೆ**

| | | |
|---|---|---|
| ನುರುಪಾ | = | ನೃಪ, ರಾಜ |
| ಜುಪ | = | ಜಪ |
| ಚೌತಿಕಾಯಿ | = | ಸೌತೇಕಾಯಿ |
| ಮುಸ್ವನ | = | ಮೃಷ್ಟಾನ್ನ |
| ಹಲಿ | = | ರಂಗೋಲಿ |
| ದ್ಯೆರಿ | = | ಧೈರ್ಯ |
| ನನಿಬಾರ | = | ನಂದಬಾರದು, ಆರಿಹೋಗಬಾರದು |
| ನೆರಳೀಗೆ ಬರುವದು | = | ಹಿಂದೆಯೇ ಬರುವದು |
| ವಡಗೂಡಿ | = | ಜತೆಯಲ್ಲಿ, ಜೊತೆಗೆ |
| ಗಟ | = | ಪ್ರಾಣ |
| ಉಮಿ | = | ಭತ್ತದ ಹೊಟ್ಟು |
| ಆವಿಸ | = | ಆಯುಷ್ಯ |
| ಪರ್ಪಂಚ | = | ಬೇಧಭಾವ (Partiality) |
| ವಂಟ | = | ಒಂದು |
| ಪರಣ | = | ಪ್ರಾಣ |
| ಮದಗ | = | ಕೆರೆ |
| ಉಂಗೋಟಿ | = | ಶವ |
| ಪಗ್ಡಿ | = | ಪಗಡೆ ಆಟ |
| ಇದಿಯವ್ರು | = | ವಿಧವೆಯರು |
| ಅನುವಾದೊ | = | ಅನುಕೂಲವಾಯಿತು |
| ನಿನ್ನಗಿನ ದಿವ್ಸ | = | ನಿನ್ನೆಯ ದಿನ |

■ ಹೇಳಿದವರು: **ಸಣ್ಣಮಗು ಹೊನ್ನಪ್ಪ ನಾಯ್ಕ,** ಹೊಸಾಕುಳಿ.

# ೮. ಸಮದವ್ವ

"ಅತ್ತೀಗೇ ಅತ್ತೀಗೆಯೇ, ನಾನೊಂದು ಸಪನ ಕಂಡೇ
ಆನೆ ಕೊಳ್ಳಗನ ಹೂವಿನ್ ಹಾರೇ" "ಅನ್ನೋದು
ಅದು ಗಂಡ ಪಲವೇ ಸಮದವ್ವಾ" ॥ ೧ ॥

ಅತ್ತೀಗೆ ನಾದೀನೀ ವಡನ ಸೂತಕಾಗೀ
ಹೋದರೇ ಹರುವ ಜಲದೀಗೇ
"ನಾ ಗಂಡ ಹಡದಾರೇ ನೀ ಹೆಣ್ಣ ಹಡದಾರೆ ॥ ೨ ॥

ಮಾಡಾನ ಮುಂದೇ ಮದವೀಯ
ಮಾಡಾನ ಮುಂದೇ ಮದವೀ ಕಾವಣದಡಿಗೇ
ನೋಡಾನ ಕಣ್ಣ ಆರತೀಯ ॥ ೩ ॥

ಕಾವಣ ಕಾವಣ ಸಾಕ್ಸಿ ಕಾವಣ ಕಂಬವೆ ಸಾಕ್ಸೀ
ಕಾವಣದಗಿದ್ದ ಜನ ಸಾಕ್ಸೀ॥ ಅಣ್ಣನ ಮಗಳೂ
ಆದಾಳೆ ನಮ್ಮ ಕೊಮರಾಗೇ" ॥ ಅಂದೇಳೀ
ತಂಗ್ಯಮ್ಮ ಈಳೇ ಕೊಡತಾಳೇ ॥ ೪ ॥

ವಂದಂಬ ತಿಂಗಳು ತುಂಬೈತಿ ಸಮದವ್ವಾ
ಅಂಗಳದಾಗ ಕುಡಿಬಿಸಲು ॥ ಕಾಸಂತಾ
ರಂಬೆ ಸಮದವ್ವ ಬಗಸ್ಯಾಳೇ ॥ ೫ ॥

ಯೆಯ್ಡಂಬು ತಿಂಗಳ ತುಂಬಿತು ಸಮದವ್ವಾಗೇ
ಅಂಗೈಯಲುಪ್ಪಾ ಯಳಿಗಂಜಿ ॥ ತಿಂದಂತಾ
ರಂಬೆ ಸಮದವ್ವಾ ಬಗಸ್ಯಾಳೇ ॥ ೬ ॥

ಮೂರಂಬ್ ತಿಂಗಳು ತುಂಬಿತು ಸಮದವ್ವಾಗೇ
ಅಂತೈಯಲುಪ್ಪು ಹುಳಿ ಹುಣಿಸು ತಿನ್ನಂತಾ
ರಂಬೆ ಸಮದವ್ವಾ ಬಗಸ್ಯಾಳೇ ॥ ೭ ॥

ನಾಕಂಬ್ ತಿಂಗಳ ತುಂಬಿತ್ ಸಮದವ್ವಾಗೇ
ಮೂಡೀಲ ಸೀಮೇ ಮಗಿಮಾವು ॥ ತಿನ್ನಂತಾ
ರಂಬೆ ಸಮದವ್ವಾ ಬಗಸ್ಯಾಳೇ ॥ ೮ ॥

ಐದಂಬ್ ತಿಂಗಳ ತುಂಬಿತ್ ಸಮದವ್ವಾಗೇ
ಕೊಯ್ದು ಮಲ್ಲಿಗೆ ವನಜಾಜಿ ॥ ಮುಡ್ವೆಂತಾ
ರಂಬೆ ಸಮದವ್ವಾ ಬಗಸ್ಯಾಳೇ ॥ ೯ ॥

ಆರಂಬ್ ತಿಂಗಳೂ ತುಂಬಿತ್ ಸಮದವ್ವಾಗೇ
ಆರಿದ ಬಾನ ಕೆನಿ ಮೊಸರು ॥ ಉಣವಂತಾ
ರಂಬೆ ಸಮದವ್ವಾ ಬಗಸ್ಯಾಳೇ ॥ ೧೦ ॥

ಯೇಳೆಂಬ ತಿಂಗಳ ತುಂಬಿತ್ ಸಮದವ್ವಾಗೇ
ದೆಸಿಯ ಮನೇ ಹಸರಕುಬಸ ತರುವಂತಾ
ಅಣ್ಣ ಮಾರಾಯ್ನ ಬಗಸ್ಯಾಳೇ ॥ ೧೧ ॥

ಯೆಂಟಂಬ ತಿಂಗಳ ತುಂಬಿತೆ ಸಮದವ್ವಾಗೇ
ಕಂಟವೂ ಲಕ್ಕಿ ಕಲಸನ್ನ ॥ ತರುವಂತಾ
ಅಣ್ಣ ಮಾರಾಯ್ನ ಬಗಸ್ಯಾಳೇ ॥ ೧೨ ॥

ಒಂಬತ್ತ ತಿಂಗಳ ತುಂಬಿತ್ ಸಮದವ್ವಾಗೇ
ಮೂಡಲಸೀಮೆ ಮಗೆಮಾವು ॥ ತರುವಂತಾ
ಮೈದುನ ಮಾರಾಯ್ನ ಬಗಸ್ಯಾಳೇ ॥ ೧೩ ॥

ಮಾಳೀಗೆ ವಳಗೆ ಹೋದನೆ ರಾಮಯ್ಯ
ತನ್ನ ಸತಿಯಳನೇ ಕರದಾನೇ
ತನ್ನ ಸತಿಯಳನೇ ಕರೆದು ಯೇನಂದಾನೆ?
"ತಂಗಿಗೇ ಬಯಕೆ ಬಲುಬೇಗ ॥ ೧೪ ॥

ಕಾಕೊಡ್ನ ಹಾಕ್ಯಾಳೆ ಮೂಕೊಡ್ನ ಹಾಕ್ಯಾಳೆ
ಹುಳಿ ಮಜ್ಜಿಗ್ ಬುತ್ತೀ ಬಲದಾಳೆ"
"ಮಂಚುವದ ಮ್ಯಾಲೆ ಕುಂತಿದ್ದ ರಾಯರೆ,
ನಿಮ ತಂಗೀಗೆ ಬಯಕೇ ಬಲದೀನೇ ॥ ೧೫ ॥

ಏ ರಾಯರೇ, ತಂಗೀಗೆ ಬಯಕೇ ವಯ್ಯಾ ಬನ್ನಿ"
ಮಾಳೀಗೆ ವಳಗೇ ಹೋದಾನೆ ರಾಮಯ್ಯ
ಸಾಲಿ ಪೆಟ್ಟಿಗಿಯ ಇಳಗ್ಯಾನೆ ॥ ೧೬ ॥

ಸಾಲಿ ಪೆಟ್ಟಿಗಿಯ ಇಳಗಿ ಬಾಯಾ ತೆಗದ
ಸಾಲಿ ದ್ಯೇವಂಗ ಸಳದುಟ್ಟೆ ॥ ರಾಮಯ್ಯ
ಮಾಳೀಗೆ ವಳಗೇ ನೆಡದಾನೇ ॥ ರಾಮಯ್ಯ ॥ ೧೭ ॥

ಬಲದೀದ ಬುತ್ತಿ ಬಲಗೈಲಿ ॥ ತಕ್ಕೊಂಡು
ಯೇರ್ಯಾರೇ ನೀಲ ಕುದರೀಯ
"ಗುತ್ತಿ ಗುಡ್ಡದ ಮ್ಯಾಲೆ ಯತ್ನ ಕಾಯ ಮಕ್ಕಳೀರಾ
ಮತ್ತೇಲಿ ಪಾಂಡೋರ ಲರಮನೀ?" ॥ ೧೮ ॥

"ಬಾಳೀಯ ಬಲಕೈತಿ ಈಳೀಯ ಯಡಕೈತೀ
ನಾಗ ಸಂಪೀಗೆ ಯಡನಡಗೇ ॥ ಹೋದಾರೆ ॥ ೧೯ ॥

ಅಲೈತಿ ಪಾಂಡೋರಾ ಅರಮನೆ" ॥ ತಂಗ್ಯಮ್ಮ
ಅಣ್ಣ ಬರವದು ಅಟ್ಟದೂರೆ ಕಂಡು
ಹತ್ತಿದಾ ಮಂಚಾ ಇಳದಾಳೆ ॥ ೨೦ ॥

ಹತ್ತಿದಾ ಮಂಚಾ ಇಳದ್ಹೋಗಿ ತಂದಾಳೇ
ಮುತ್ತಿನ ಗಿಂಡಿಯಾಗೆ ಹಣಿಯುದಕಾ ॥ ತಕ್ಕೊಂಡು
ಅಣ್ಣಯ್ನ ಸಿರಿಪಾದ ತೊಳಿದಾಳೇ ॥ ೨೧ ॥

ಪಾದನೇ ತೊಳದಾಳೆ ಪಡುಗನೆ ತುಂಬ್ಯಾಳೇ
ಕೊಡಿಗೆ ಹಾಸೇ ಸಣ್ಣ ಚಳಿಮಂಚ
ಹಾಲಾರಿದ ಹಸಿಯಡಕೇ ನೀರಾರಿದ ಕೆನಿಸುಣ್ಣ ॥ ೨೨ ॥

ಜೇನಿರಕಗೊಂಡ ಚಿಗರೆಲಿ ॥ ಈಳ್ಯದ ತಬಕು
ನೀಡ್ಯಾಳ್ಳಣ್ಣಯ್ನ ಬಲಗೈಲೀ
ಮಾಳೀಗೆ ವಳಗೇ ಹೋದಾನೇ ರಾಮಯ್ಯ
ಬಲದೀದಾ ಬುತ್ತೀ ಬಲಗೈಲಿ ॥ ೨೩ ॥

ಸಣ್ಣೊಳೆ ತಂಗ್ಯಮ್ಮ, ಅಣ್ಣಗೆ ಪಾದಕೆ ಬಿದ್ದು
ಹಿರಿಯಣ್ಣ ಕುಂದಾ ನುಡದಾನೆ ॥ "ತಂಗಮ್ಮಾ
ನಿನ್ ಹೊಟ್ಯಾಗಿನ್ ಸಿಸುವೇ ಮುನಿಯಾಲಿ" ॥ ೨೪ ॥

ಸಣ್ಣೊಳೆ ತಂಗ್ಯಮ್ಮ ಅಣ್ಣಗ ಪಾದಕ್ ಬಿದ್ದು
"ಹಿರಿಯಣ್ಣ, ಕುಂದ ನುಡಿದ್ಯಾಲೋ"
"ಅಲ್ಲ ಕಾಣೆ ತಂಗೀ, ಸುಳ್ಳ ಹೇಳು ಬ್ಯಾಡಾ ॥ ೨೫ ॥

ಚಕ್ರಬೀಮನೆಂಬಾ ಕೋಟೀಯ ॥ ವಪ್ಪಂತಾ
ಮಗನಡಿಯೇ ಯೇ ತಂಗ್ಯಮ್ಮ,
ಬಯಕೀ ತಂದೀನೇ ಉಣಲೋಗೇ" ॥ ೨೬ ॥

ಮಾಳೀಗೆ ವಳಗೇ ಹೋದಾಳೆ ಸಮದವ್ವಾ
ಬಲದೀದಾ ಬುತ್ತೀ ಬಲಗೈಲಿ
ಹಾಕೊಡ್ನ ಹಾಕ್ಯಾಳೇ ಮಾಕೂಡ್ನ ಬಲುದಾಳೇ ॥ ೨೭ ॥

ಹುಳೀಮಜ್ಗೆ ಬುತ್ತಿ ಬಲುದಾಳೇ ॥ "ಅಣ್ಣಯ್ಯ
ತಾಯವ್ವ ತವರಲ್ಲೋ"
ಮಾಳೀಗೆ ವಳಗೇ ಹೋದಾನೆ ರಾಮಯ್ಯ
ಅತ್ಯವ್ವನ ಕರದೇ ಬೆಸಗೊಂಡ ॥ ೨೮ ॥

ಅತ್ಯವ್ವನ ಕರದೇ ಬೆಸಗೊಂಡ್ಯೆನಂದಾನೇ?
"ತಂಗೀ ನನ್ನೊಡನೇ ಕಳುಗೀಸೆ ॥ ಅತ್ಯಮ್ಮ"

"ದಾರ್‌ಯಾಗೆ ಹಡದಾರೆ ಹುಕ್ಕಳಕೇ ಯೆಣ್ಣಿಲ್ಲ
ಸಾಲಿಗೊಳಿಲ್ಲ ಉಡವಿಲ್ಲ"
"ದಾರ್‌ಯಾಗೆ ಹಡದಾರ ದಟ್ಯಾಗೇ ಕಟಗೊಂಬೆ ॥ ೨೯ ॥

ನನ್ನ್ ಚಿನ್ನು ನನಗೆ ಹೊರಿಯೇನೇ? ॥ ಅತ್ಯಮ್ಮ
ತಂಗೀ ನನ್ನೊಡನೇ ಕಳುಗೂಸು
ನಿಂಬಿಯಾ ಮರನಡಿಲೇ ರಂಬೆ ನಿಲ್ಲಿಸಿಗಂಡು
ಬೇಡಾಂದರೆ ಬಿಡಾಳು ತನಗಾದರೆ ತಿಳಿಯಾವು
ವದಗೀಲತ್ಯಮ್ಮ ನೆಡಮೂಡಿ" ॥ ೩೦ ॥

"ಯೆಣ್ಣೀಯ ಚೆಟ್ಟಿಗೆ ಬಲಗೈಲಿ ಹಿಡಕೊಂಡು
ಮೂವರು ಸೊಸದೀರ ವಡಗೊಂಡು ॥ ವರವಾಗೇ
ನಾನೂ ಬರುತೀನೀ ನಿಮಕೂಡೇ ॥ ೩೧ ॥

"ಕಲ್ಲೀನಾ ಕಾವೀಗೆ ಮ್ಯಾಗೀನ ಬಿಸಲೀಗೆ
ಮ್ಯಾಗಾಲ ಗುಳ್ಳೇ ನೆಸದಾವೆ ॥ ಅಣ್ಣಯ್ಯ,
ಹೋಗಾನ ಮರನ ನೆಳಲೀಗೇ" ॥ ೩೨ ॥

"ಹಾದಿ ಬೀದ್ಯಲ್ಲ ಸಣ್ಣಕ್ಕೀ ಸಣಬತ್ತ
ಅವರ ಚೆಂದ ನೋಡೋ ಹಿರಿಯಣ್ಣ
ನಮ್ಮ ಪಾಂಡೋರು ವನದೇಸ ಹೋದಾರೆಂದು
ನಿಸಗರ್ಶವೇನೋ ಹಿರಿಯಣ್ಣ? ॥ ೩೩ ॥

ಹಾದೀ ಬೀದ್ಯಲ್ಲ ಕಾಡೆಮ್ಮೆ ಕಾಡ್‌ಕೋಣ
ಅವರ ಚೆಂದ ನೋಡೋ ಹಿರಿಯಣ್ಣ"
"ಅವರೇನ್ ಚೆಂದವ ನಾನೇನ ನೋಡಾಲಿ? ॥ ೩೪ ॥

ಅವ್ ನಿಮ್ ಪಾಂಡೋರೂ ಕರಯೆಮ್ಮಿ"
"ನಮ್ಮನೆ ಪಾಂಡೋರು ವನದೇಶ ಹೋಗ್ಯಾರೆಂದು
ನಿನಗೆಕ್ಕಳವೇನೋ ಹಿರಿಯಣ್ಣ?" ॥ ೩೫ ॥

ಕರಿಯಾನೆ ಕಂಬಳಿ ಮುರಿದು ಗದ್ದಿಗಿ ಹಾಸಿ
ಹೋದಾರೆ ಮರನಾ ನೆರಳೀಗೇ

"ಬೇಡವೆ ದಾರೀ ದೂರಾವೇ"
ಆಲದಾ ಮರನಡಿಗೆ ಹೋದಾರ್ ವಟ್ ಹೊತ್ತೀಗೆ
ಸಮದವ್ವಗೆ ನಿದ್ದೇ ಕಮದಾವೇ ॥ ೩೬ ॥

ಸಮದವ್‌ಗ್ ನಿದ್ದೇ ಕಮದಾ ವೋಟ್ ಹೊತ್ತೀಗೆ
ಹಿರಿಯಣ್ಣ ಶಿವಗತೆಯ ನೆಡಸ್ಯಾನೆ
ಹಿರಿಯಣ್ಣ ಶಿವಗತೆಯ ನಡಸ್ಯಾಗ್ವಟ್ ಹೊತ್ತಿಗೆ ॥ ೩೭ ॥

ಹೊಟ್ಯಾಗನ ಶಿಶವೇ 'ಹೂಂ ' ಅಂತು
ಹೊಟಯಾಗನ ಶಿಶವೇ ತಿರಗಿನ್ 'ಹೂ' ಅಂದಾಗ
ಹಿರಿಯಣ್ಣ ಹಲ್ಲ ಕಡದ್ಯಾನು
"ಬೇಡವೆ ದಾರೀ ದೂರಾವೇ ॥ ೩೮ ॥

ಅಲ್ಲ ಕಾಣೇ ತಂಗೀ ಸುಳ್ಳ ಹೇಳಲ್ ಬೇಡಾ
ಸುಣ್ಣದಾಗಿನ ಕಲ್ಲ ಕಡಿದೇನು"
ಸಮದವ್ವಗೆ ನಿದ್ದೇ ಕಮದಾಗಿನಟ್‌ಹೊತ್ತಿಗೆ ॥ ೩೯ ॥

ಉಟ್ಟ ಸೀರಯ ಸಳದ ಇಟ್ಟ ಬಂಗರ ಸೆಳದ
ಬೆಟ್ಟಿಂಬನರವೀ ಮೈಮ್ಯಾಲೇ
ಬೆಟ್ಟಿಂಬನರವೀ ಮೈಮ್ಯಾಗಿಟ್ಟಗೋ ॥ ೪೦ ॥

ಯೋಯ್ರ್ಯಾನೇ ನೀಲ ಕುದರೀಯ ॥ ರಾಮಯ್ಯ
ಬಂದಾನೇ ತನ್ನ ಅರಮನಿಗೆ
ಮಾಳಿಗೆ ವಳಗೇ ಹೋದಾನೆ ರಾಮಯ್ಯ
ತನ್ನ ಸತಿಯಳನೇ ಕರದಾನೇ ॥ ೪೧ ॥

"ಸಾಲೀ ಸೀರೆ ನುಡೇ ವಾಲೇ ಬಂಗಾರವೀಡೇ
ಮಾಳೀಗೆ ವಳಗೇ ಇರಲೋಗೇ ಸತಿಯೋಳೇ
ಬರಿವಡಲ ತಂಗೀ ಬರತಾಳೆ ॥ ನನ ಮಡದಿ ॥ ೪೨ ॥

ಬರಿವಡಲ ತಂಗೀ ಬರತಾಳೆ ಸತಿಯೋಳೇ
ಮುಕ್ಕ ಮಗಿಯಾಗೇ ನೀರ ತರಲೋಗೇ" ॥ ೪೩ ॥

ಆಲಾದ ಮರನಡಿಗೇ ಮನಿಗ್ಯಾಳಷ್ಟೊತ್ತಿಗೆ
ಸಮದವ್ವಗ್ ನಿದ್ದೇ ಹಣಿದಾವೇ
ಸಮದವ್ವಗ್ ನಿದ್ದೇ ಹಣಿದಾವ್ ಆಟ್ ಹೊತ್ತಿಗೆ
"ಅಣ್ಣ , ಅಣ್ಣ"ನೆಂದೇ ಕರದಾಳೇ ॥ ೪೪ ॥

"ಅಣ್ಣ ಅಣ್ಣ"ನೆಂದೇ ಕರವಾಳಷ್ಟೊತ್ತಿಗೆ
ಬಂದಾಳೇ ಅಣ್ಣಯ್ನರಮನಿಗೇ
ಬಂದಾಳೇ ಅಣ್ಣಯ್ನರಮನಿಗೆ ಆಟ್ ಹೊತ್ತಿಗೆ
ಮುಕ್ಕ ಮಗಿಯಾಗ್ ನೀರ ಕೊಡತಾಳೇ ॥ ೪೫ ॥

"ನಾ ನೋಡದ ತವರಲ್ಲ
ನಾ ನೋಡದ ತವರ ಮನಿಯಲ್ಲ ॥ ಅತ್ತೀಗೆ"
ನೀರ್ ತಂದ್ ಕಾಲ ತೊಳದೀ ॥ ೪೬ ॥

ಮಾಳೀಗೆ ವಳಗೇ ಹೋದಾಳೆ ಸಮದವ್ವ
ಸಮದವ್ವಗ್ ಬ್ಯಾನೀ ತೊಡಗ್ಯಾವೇ
ಸಮದವ್ವಗೆ ಬ್ಯಾನೀ ತೂಡಗ್ಯಾವಷ್ಟೊತ್ತಿಗೆ ॥ ೪೭ ॥

"ಅಣ್ಣ ಅಣ್ಣ"ನಂದೇ ಕರದಾಳೇ "ಅಣ್ಣಯ್ಯ
ಹೋಗಿ ಬನ್ನಿ ಸಂಗಮ್ನ ಅರಮನಿಗೇ"
ಮಾಳೂಗ ವಳಗೇ ಹೋದಾನೆ ರಾಮಯ್ಯ
ಸಾಲೀನ ಪೆಟ್ಟಿಗಿಯ ಇಳಗ್ಯಾನ ರಾಮಯ್ಯ ॥ ೪೮ ॥

ಸಾಲೀ ದೇವಂಗ ಸೆಳದುಟ್ರು ರಾಮಯ್ಯ
ಏರ್ಯಾರೇ ನೀಲ ಗುದರೀಯ
"ಗುತ್ತಿ ಗುಡ್ಡದ ಮ್ಯಾಲೆ ಯತ್ತ ಕಾಯೋ ಮಕ್ಕಳಿರಾ
ಮತ್ತೇಲಿ ಸಂಗಮ್ನ ಅರಮನೆ?" ॥ ೪೯ ॥

"ಬಾಳೆಯ ಬಲಕೈತೀ ಈಳೀಯ ಯೆಡಕೈತೀ
ನಾಗಸಂಪೀಗೆ ಯೆಡನಡಿಗೇ
ನಾಗಸಂಪಿಗೆಯ ಯಡನಡಿಗೆ ಹೋದಾರೆ
ಅಲ್ಲೈತಿ ಸಂಗಮ್ನ ಅರಮನೇ" ॥ ೫೦ ॥

ಹೋದಾನೆ ರಾಮಯ್ಯ ನಿಂದಾನಂಗಳದಾಗೇ
"ಸಂಗಮ್ಮ"ನಂದೇ ಕರದಾನೇ
"ಸಂಗಮ್ಮ ತಳಗೇ ಯೇಳ ಕಂಡಗ ಹೊಲ
ಉಂಬಳಿ ನಾನೂ ಬರಕೂಡವೇ || ೫೧ ||

ಉಂಬಳಿನಾರೂ ಬರಕೊಡ್ವೆ ತಂಗ್ಯಮ್ಮನ
ಹೊಟ್ಯಾಗಿನ ಶಿಸುವ ಕೊಲಬೇಕೆ
ಮಮ್ಮಕ್ಕ ಚೋಳಂಗಿ ಸೊಸದೀರ ಸೋಬಾನ
ಇಂದೆ ಬರುವದೇ ನೆಲಿವಿಲ್ಲ" || ೫೨ ||

ಮಾಳಿಗೆ ವಳಗೇ ಹೋದಾಳೆ ಸಂಗಮ್ಮ
ಸಾಲೀ ಪೆಟ್ಟಿಗಿಯ ಇಳಗ್ಯಾಳೇ
ಸಾಲೀಯ ಪೆಟ್ಟಿಗಿಯ ಇಳಗೀ ಬಾಯಾ ತೆಗೆದು || ೫೩ ||

ಸಾಲೀ ದೇವಂಗ ಸೆಲದುಟ್ಲೇ ಸಂಗಮ್ಮ
ವಾಲೇ ಬಂಗಾರ ಕಿವಿಕಿಟ್ಲೇ
ಮಾಳಿಗೆ ವಳಗೇ ಹೋದಾಳೆ ಸಂಗಮ್ಮ || ೫೪ ||

ಚಿತ್ತಾರದ ಕೊಡನ ಹಣಿಯೆಣ್ಣಿ || ತಕ್ಕೊಂಡು
ಕೆನ್ನೆ ಕೊದುಲನೇ ಕಲಬರಚೇ
ಕೆನ್ನೆಯ ಕೂದಲನ ಕೆಲಮರಚೇ ಬಲಮರಚೇ
ಗಿಣ್ಣಲ ದುರಬ ಸಳದಾಳೇ || ೫೫ ||

ಗಿಣ್ಣಲ ದುರಬ ಸರದಾಳ್ ಅದರ ಮ್ಯಾಲೆ
ಸಣ್ಣ ಮಲ್ಲಿಗೇ ಮುಡದಾಳೇ
ಸಣ್ಣ ಮಲ್ಲಿಗೇ ಮುಡದಾಳ್ ಅದರ ಮ್ಯಾಲೆ
ಚೆನ್ನ ಇಡ್ವಾಳೇ ತುರಬೀಗೆ || ೫೬ ||

ಚೆನ್ನಾನೆ ಇಟ್ವಾಳೆ ತುರಬೀಗೆ ಸಂಗಮ್ಮ
ಬಂದೀ ಐಬರಣ ಕೊರಳೀಗೇ || ಇಟಗೊಂಡು
ಸಾಲಗನ್ನಡಿಲಿ ಮೊಕ ನೋಡಿ ಸಂಗಮ್ಮ
ಇವು ವೊಪ್ಪ್ಯಾವೆಂದೇ ನೆಡದಾಳೇ || ೫೭ ||

"ಗುತ್ತಿ ಗುಡ್ಡದ ಮ್ಯಾಲೆ ಯೆತ್ತ ಕಾಯೋ ಮಕ್ಕಳಿರಾ,
ಮತ್ತೆಲ್ಲಿ ರಾಮಯ್ನ ಅರಮನೀ?"
"ಬಾಳೇಯ ಬಲಕೈತಿ ಈಳೀಯ ಯೆಡಕೈತೀ
ನಾಗಸಂಪೀಗೆ ಯೆಡನಡಿಗೆ ॥ ಹೋದಾರೇ ॥ ೫೮ ॥

ಅಲ್ಲೈತಿ ರಾಮಯ್ನ ಅರಮನೀ"
ಮಾಳೀಗೆ ವಳಗೇ ಹೋದಾಳೇ ಸಂಗಮ್ಮ
ರಾಮಯ್ಯನ ಕರದೇ ಬೆಳಗೊಂಡೇ ॥ ೫೯ ॥

ತಾಸು ತಾಸಿನ ಬೇನೆ ಚಾಣ ಚಿಮ್ಮಿಂದಾಂಗೇ
"ತಾಳನಾರಣ್ಣ ತಡಿನಾರೇ"
"ಅಟ್ಟದ ಮ್ಯೇಲಣ ಅಚ್ಚಳ್ಳನ್ಯೇಣ್ಣೀಯ ॥ ೬೦ ॥

ಇಚ್ಚೇಣಿ ಹಾಕೀ ತಗತನ್ನೀ ॥ ನಾನೀಗೆ
ಯೆಣ್ಣೀ ಮಂತರಿಸೀ ಕೊಡತೀನೀ"
ಯೆಣ್ಣಿಯ ಮಂತುರಿಸೀ ಕೊಡ್ವಾಳಷ್ಟೊತ್ತಿಗೆ
ಸಮದವ್ವಗ್ ಬ್ಯಾನೀ ತೊಡಕ್ಯಾವೇ ॥ ೬೧ ॥

"ಬಾಯಾಗೆ ಬಂದರೇ ಕ್ಯಾಕರಿ ತಾರೇ
ಯಾವಾ ರಸ್ತ್ಯಾಗೇ ಬರಲವ್ವ?
ಯಾವಾದೆ ರಸ್ತ್ಯಾಗೆ ಬರಲಾರೆ ನನ್ನ ಮಗನೇ
ಶಿವ ಕೊಟ್ಟ ರಸ್ತ್ಯಾಗೆ ಬರಬೇಕೋ" ॥ ೬೨ ॥

ಹನ್ನ್ಯೆಯ್ಡು ಬುಜ ಹದಿನಾರ ಮೊಕವೇ
ಲೋಕಾಕುಟ್ಯಾನೇ ಅಬಿಮನ್ಯು ॥ ಸಂಗಮ್ಮನ
ಸೊಂಟದ್ ಮೇನ್ ವದ್ದೇ ಕೆಡಗ್ಯಾನೇ ॥ ೬೩ ॥

ಸೊಂಟಾದಾ ಮ್ಯಾಲೊಮ್ಮೊ ವದ್ಯಾನೇ ಅಬಿಮನ್ಯು
ಸೋದರ ಮಾವನ ಕೂಡೇ ಕಾಳಗವೇ
ಸೋದರ ಮಾವನ ಕೈಲಿ ಕಾಳಗ ಆಡ್ವಾಗ
ಪಾಂಡೂರೀಗ್ವಾಲೀ ಬರದಾನೇ ॥ ೬೪ ॥

ಪಾಂಡೋರಿಗ್ವಾಲೀ ಯೇನಂದೀ ಬರದಾನೇ
“ಪಾಂಡೋರ್ ದಂಡ್ಯದ್ದೇ ಬರಬೇಕೂ”
ಪಾಂಡೋರ್ ದಂಡ್ಯದ್ದು ಬಂದರಷ್ಟೊತ್ತಿಗೇ
ಸೋದರ ಮಾವ್ನ ಕಯ್ಲೀ ಕಾಳಾಗಾ || ೭೫ ||

● **ಕೆಲವು ಪದಗಳ ವಿವರಣೆ**

| | | |
|---|---|---|
| ವಡನ ಸೂತಕ | = | ಮುಟ್ಟು, ಹೆಂಗಸರ ಋತುಸ್ರಾವದ ನಾಲ್ಕು ದಿನಗಳು |
| ಬಗಸ್ಯಾಳೆ | = | ಬಯಸಿದ್ದಾಳೆ |
| ಈಳೆ | = | ವೀಳ್ಯ |
| ಕಂಟವೂಲಕ್ಕಿ | = | ಅವಲಕ್ಕಿ |
| ಸಾಲಿ | = | ಶೀರೆ |
| ಕೊಡಿಗೆ | = | ಕುಡಗಿ, ರನಾಡಿಸಿ |
| ವಟ್ ಹೊತ್ತಿಗೆ | = | ಆ ಸಮಯಕ್ಕೆ |
| ವೋಟ್ | = | ಅಷ್ಟೂ, ಪೂರ್ತಿ |
| ಮುಕ್ಕ ಮಗಿ | = | ಮುಕ್ಕ ಚಂಬು, ಮುಕ್ಕ ಪಾತ್ರೆ |
| ದುರಬ | = | ತುರುಬು |
| ಐಬರಣ | = | ಆಭರಣ |

■ ಹೇಳಿದವರು : **ದಿ. ದೇವಿ ಬಂಗಾರು ಕೊಂಡ್ಲಿ** ಮತ್ತು **ಕನ್ನೆಕೋಂ ಕೃಷ್ಣ ಕೊಂಡ್ಲಿ,** ಸಿದ್ದಾಪುರ.

# ೯. ಅತ್ತೆ ಗೌರಮ್ಮ, ಸೊಸೆ ಹೊನ್ನಮ್ಮ

ವಂದ್ ತಾಯಿಗೇ ವಂದಲು ಮಗನೇ ತಂದ ನಂದನವೇ
ವಂದಲು ಮಗುನೇ ಜನುಸಿದನಲ್ಲೇ ತಂದ ನಂದನವೇ
ಅವ್ನಲು ನಗ್ನಾ ಮಾಡಲು ಬೇಕೂ
ತವ್ರ ಮನಿಗೋಗೇ ಹೇಳ್‌ಕೇಳ್ಕ ಬಂತೂ ॥ ೧ ॥

ಹೊನ್ನಮ್ಮಾ ಸೊಸೆಯ ನಗ್ಗನ ಮಾಡಿತೂ
ತಾಯಿ ಮಕ್ಕಳೂ ಚೆಂದಾ ಗುಣಿದೀರೂ
ವಂದಲು ವಂದ ದಿವ್ಸೇ ನೋಡೂ
ದಂಡಿನ ಕರ್‌ಯ ಬಂದೀತೂ ಲವಗೇ ॥ ೨ ॥

"ಕೇಳಲೇ ಕೇಳೇ ನನ್ನಲು ತಾಯೇ
ನಾನೂ ನಾದರೇ ದಂಡೀಗ್ ಹೋಗೂತೇ
ನಾ ಬರೂತನ ನಿನ್ ಸೊಸ್ಯೆ ಹೊನ್ನಮ್ಮಾ
ಬೆಂಕಿಗಾದರೂ ಕಳ್ಗಲು ಬೇಡ ॥ ೩ ॥

ನೀರಿಗಾದರೂ ಕಳ್ಗಲು ಬೇಡಾ"
ಅಂದ್ ಹೇಳಿನ್ನೆ ತಾಯ ಕೂಡೆ ಹೇಳ್ಬಾ
ದಂಡೀಗಾದರೂ ಹೋಗಿದ ಲರಸೂ
ಅವ್ ದಂಡೀ ಹೋಗಿ ಬರ್ವಲು ತನಕೇ ॥ ೪ ॥

"ಕೇಳಲೇ ಕೇಳೇ ನನ್ನತ್ತೆ ಗೌರಮ್ಮಾ
ನಾನು ನೀರನಾದರೂ ತರುತೇ"ನಂತೂ

"ಕೇಳಲೇ ಕೇಳಲ್ಲೇ ಸೊಸ್ಯೇ ಹೊನ್ನಮ್ಮಾ
ನಿನ್ನ ಗಂಡಾ ಲೇಗಿನ್ನೇ ಯೋನ ಹೇಳವ್ನೇ" ॥ ೫ ॥

"ಹೇಳಿದ್ರೆ ಹೇಳಲೀ ಏನಾದರಾಗಾಲೀ"
ಅಟ್ಟಂಬು ಮಾತಾ ಹೇಳಿತ್ ಹೊನ್ನಮ್ಮಾ
ಚಿನ್ನದ ಕೊಡುನಾ ಬಲುದಲ್ ಚಚ್ಚೀತೂ
ಬೆಳ್ಳಿಯ ಕೊಡುನಾ ಯೆಡುಕೆ ತಡುದೀತೂ ॥ ೬ ॥

ನೀರೀಗಾದಾರೇ ಹೋಗೀತೂ ಈಗೇ
ಕೆರ್ಯನಾದರೂ ಇಽಳದಽದೆ ಇನ್ನೂ
ಚಿನ್ನದಾ ಕೊಡುನಾ ಮೊಗದಿ ಇಟ್ವಾದೇ
ಬೆಳ್ಳಿಯ ಕೊಡುನಾ ಮೊಗಿತದೆ ನೀರ ॥ ೭ ॥

ಅರಸೂನಾದಾರೇ ಯೇನ ಮಾಡನೇ?
ಕೊದುರಿನಾದಾರೇ ಮರುಕೆ ಕಟ್ಟೀದಾ
ಕೆರೆಯಾನಾದಾರೇ ಇಳುದಿ ಹೋಗೀದಾ
"ಯಾವೂರೂ ಆಯ್ತೇ ಯಾವ ದೇಸ ಲಾಯ್ತೇ?" ॥ ೮ ॥

ಲಂದೀ ಲ್ಯಾಗಿನ್ನೇ ಕೇಳಿದ ನೋಡೂ
ತಲ್ಯನಾದಾರೇ ಲ್ಯೆತ್ತಿತು ಹೆಣ್ಣಾ
ಅರಸುನಾದರೇ ನೋಡಿದ ಹೆಣ್ಣಾ
ಮುತ್ತಿನ ಕಣ್ಣೀರಾ ಕಡಿತಾಳು ಹೆಣ್ಣಾ ॥ ೯ ॥

ಅಟ್ಟಂಬೂ ಮಾತಾ ಕೇಳಿದ ಲರಸೂ
ಕಟ್ಟಿನಾದಾರೂ ಹತ್ತಿದ ಲರಸೂ
ಕೊದುರಿನಾದಾರೂ ಏರಿದ ನೋಡು
ಮನಿಗೆ ನಾದಾರೇ ಬಂದಾನೇ ಲರಸೂ ॥ ೧೦ ॥

"ಕೇಳಲ್ಲೇ ಕೇಳೇ ನನ್ನಲು ತಾಯೇ
ನಿನ್ ಸೊಸ್ಕೇ ಹೊನ್ನಮ್ಮಾ ಯಲ್ಲಿಗ್ ಹೋಗೀತೇ?
ಜೇಜೀಗಾರುತಿಯಾ ತಕ್ಕಂಡ್ ಬಾರೇ"
ಅಟ್ಟಂಬೂ ಮಾತಾ ಹೇಳಲು ತನಕೇ ॥ ೧೧ ॥

ಮುತ್ತಿನ ಕಣ್ಣೀರಾ ಕಡೀತೇ ಹೊನ್ನಮ್ಮಾ
ಚಿನ್ನದ ಕೊಡುನಾ ಬಲುಕೇ ಚೆಚ್ಚಾದೇ
ಬೆಳ್ಳಿಯ ಕೊಡುನಾ ಯೆಡುಕೇ ಚೆಚ್ಚಾದೇ
ದುಕ್ಕ ಬಿಡುತಾದೆ ಕಣ್ಣೀರ ತೆಗಿತಾಳೇ ॥ ೧೨ ॥

ಚೆಚ್ಚಿದ ಕೊಡುನಾ ವಳುಗೆ ಇಟ್ಟೀತೂ
ಕಣ್ಣೀರ ಲನ್ನೇ ಬಿಟ್ಟಲು ಕಂತೀ
ಜೇಜೀಗಾರುತಿಯಾ ತಕ್ಕಂಡಿ ಬಂತೂ
ಲಾರುತಿ ಲನ್ನೇ ಕಂಡೀದಾ ಲರಸೂ ॥ ೧೨ ॥

ಕೊದುರೀ ನಾದರೊ ಲಿಳುದೀದ ಲರಸೂ
"ಕೇಳಲ್ಲೋ ಕೇಳೋ ನನ್ನಲು ಮಗುನೇ
ಊಟಕಾದರೂ ಹೋಗಲುಬೇಕೂ"
ಅಂದೇಳೀ ತಾಯೀ ಹೇಳೀತೂ ಈಗೇ ॥ ೧೩ ॥

"ಊಟಾ ಮಾಡೋಕೇ ನಂಗೇ ಹಸಿವಿಲ್ಲಾ
ಕೇಳಲ್ಲೇ ನನ್ನು ಗೌರಮ್ಮ ತಾಯೇ
ನಿನ್ನಲು ಸೊಸ್ಯೇ ತೌರೆ ಮುನಿಗೋಗದೇಯೇ?
ಬಾಳಲು ದಿನವಾ ಲಾಗಿತು ತಾಯೇ ॥ ೧೪ ॥

ತಾಯ್ ಮನಿಗೋಗಿ ಕಳಿಕೊಟ್ಟಿ ಬತ್ತೇ"
ಲಂದೀ ಲಗಿನ್ನೇ ಹೇಳಿದ ಮಗುನೇ
ಲಟ್ಟಂಬೂ ಮಾತಾ ಕೇಳಿತು ತಾಯೀ
"ಕೇಳಲ್ಲೇ ಕೇಳೇ ನನ್ನಲು ಸೊಸ್ಯೇ ॥ ೧೫ ॥

ತೌರ ಮನಿಗೋಗೀ ಬರಬಹುದು ಯೇನೇ
ಮಂಡೀ ಕಟಿಕೊಳ್ಳೇ ದಂಡೀ ಮುಡಿಕೊಳ್ಳೇ"
ಮಂಡೀ ಕಟ್ಟೀತೂ ದಂಡೀ ಮುಡಿದೀತೋ
ತಾನಿಡೂ ಚೆನ್ನ ಮೈದುಂಬತೂ ॥ ೧೬ ॥

ಕೊದುರೀ ನಾದರೂ ಹೇರಿಸಿ ಕಂಡಾ
ಬಿದ್ದಾ ದಾರೀಯಾ ಹಿಡುದೋದಾ ಲರಸೂ

ಲಾರಂಬಡುವೀಗೇ ಹೋಗಿದ್ ಲರಸೂ
"ಕೇಳಲಿ ಕೇಳಿ ನಮ್ಮಲು ಸ್ವಾಮೀ ॥ ೧೭ ॥

ತಾಯ್ ಮನಿಗೋಗೂ ದಾರೀ ಇದುವಲ್ಲಾ"
"ನೀ ಮಳ್ಳಾಲ್ಲೆಂಗಿಸುವೇ ಮರುಳಾ ಲ್ಡೆಂಗಿಸುವೇ
ನೀನೂ ಬಾರದೆ ಬಾಳಾ ದಿನವಾಯ್ತೂ
ಇದವೇಯ ದಾರೀ" ಲಂದೀ ಹೇಳಿದಾ ॥ ೧೮ ॥

ಅರಂಬಡುವೀಗೇ ಕರುಕಂಡ್ ಹೋಗೀದಾ
ಹೆಣ್ಣೀನಾ ರೊಂಡಾ ಹೊಡದೀದಾ ಲರಸೂ
ಮನಿಗೆ ಆದರೇ ಬಂದಾನೆ ಲರಸೂ
ಇಲ್ಲಿ ಆದಾರೇ ಯೇನ್ ಲಾಗದೇ? ॥ ೧೯ ॥

ಮನಿಯಲು ವಳಗೇ ಯೇನೇನು ಇಲ್ಲಾ
ತಾಯಮ್ಮಗೆ ಸಂಸೇ ಬಂದೀತೂ ಯೋಗೇ
"ಕೇಳಲೊ ಕೇಳಲ್ಲೋ ನನ್ನಲು ಮಗುನೇ
ಯಾವಲು ಗತಿಯಾ ಮಾಢೀ ಬಂದೀದೇ?" ॥ ೨೦ ॥

ಪಟುವಾ ತಕ್ಕಂತೂ ಬಾಗಲದಗ್ ಕೂತ್ತೂ
"ಸೊಸ್ಯ ಗೌರಮ್ನಾ ಯೆಲ್ ಹಾಕಿ ಬಂದ್ಯೋ
ಬಾಗ್ಲದಲ್ ನೀನೂ ಹೊಕ್ಕಿದಾರೇ
ನಿನ್ನಲು ಕಡದೀ ತುಂಡಾ ಮಾಡುತೇ" ॥ ೨೧ ॥

ಅಂದೇಳಿ ತಾಯೀ ಕೂಡದೇ ಲಾಗೇ
ಯೇಗೇ ನಿನ್ಯೆಗೇ ಯೋನೂ ಲಾಗೀತೂ
ಅದುರಾ ತಾಯೀಗೇ ಸಪನ ಬಿದ್ದೀತೂ
"ನಿನ್ನಲೂ ಮಗುಳೂ ಹೊನ್ನಮ್ಮ ನೋಡೂ ॥ ೨೨ ॥

ಆರಂಬಡುವೀಲೀ ಮೋಸ ಮಾಡವ್ರೇ"
ಅಂದ್ಹೇಳಿ ಸಪನಾ ಬಿದ್ದೀತೂ ಲೇಗೇ
ಹೊಯ್ಕಂತಿ ಜಪುಕಂತೀ ಯೆದ್ದಳು ನೋಡೂ
"ಕೇಳಲೆ ಕೇಳಲ್ಲೋ ನನ್ನ ಮಗುದೀರಾ, ॥ ೨೩ ॥

ನಿಮ್ಮಲೂ ತಂಗೀ ಹೊನ್ನಮ್ಮ ನೋಡೂ
ಅರಂಬಡುವೀಲೀ ಮೋಸ ಮಾಡವ್ರೇ"
ಕುಂತೇ ಬಿದ್ದದೆ ತಾಯೀ ಬಡಕಂತೇ
"ವಂದ ಸಲಗ್ಗೋಗೀ ಬರಬವ್ದು ಮಗುನೇ" ॥ ೨೪ ॥

ಅಂದೀಲಾಗಿನ್ನೇ ಹೇಳೀತೂ ನೋಡೂ
ಲಟ್ಟಂಬೂ ಮಾತಾ ಕೇಳೀರಣುದೀರೂ
ತಂಗೀಯಾ ಮನಿಗೇ ವೋಡಿ ಬಂದವ್ರು
"ಕೇಳಲ್ಲೆ ಕೇಳಲ್ಲೇ ನನು ಗೌರಮ್ಮ ಲತ್ತೇ ॥ ೨೫ ॥

ಹೊನ್ನಮ್ಮ ತಂಗೀಯೆಲ್ಲೀ ಹೋಗೀತೂ?"
"ಕೇಳಲೆ ಕೇಳಲ್ಲೋ ಯೇ ಅಳೀದೀರಾ,
ನಿನ್ನೇನಾದಾರೇ ಯೇನಾ ಮಾಡವ್ನೇ
ನನ್ನ ಕೋಡಿನ್ನೇ ಹೇಳಿದ ನೋಡೂ ॥ ೨೬ ॥

ಜಪಕಂತ್ ಜರ ಕಂತೀ ಬಿದ್ದೀದೆ ನಾನೂ"
ಅಟ್ಟಂಬೂ ಮಾತಾ ಕೇಳೀ ರಣುದೀರೂ
ಹೊಯ್ಕಂತಿ ಜಪುಕಂತೀ ಲಡುವೀ ಬಿದ್ದಾರೇ
ಅರಂಬಡುವೀಯಾ ತಿರುಗೀರಣದೀರೂ ॥ ೨೭ ॥

ರುಂಡಾನಾದರೂ ಸಿಕ್ಕೀತು ಯೇಗೇ
ರುಂಡಾನಾದರೂ ಸಬ್ಬನಾದರೂ
ಅಂಗ್ಯೆ ಮೆನ್ ಸುಟ್ಟೇ ಬೂದೀ ಮಾಡವ್ರೇ
ಮನಿಗೆ ಲಾದರೂ ಹೋದಾ ರಣದೀರೂ ॥ ೨೮ ॥

ತಾಯೀಗಾದಾರೇ ಬುದ್ಧೀ ಹೇಳವ್ರೇ
"ನಮ್ಮವರ ನಡುಗೇ ಹೊನ್ನಮ್ಮ ತಂಗೀ
ಯೆಲ್ಲ ಅಂದೇಳೀ ತಳುಕೊಳ್ಳೆ ತಾಯೇ
ಅಂಗ್ಯೆ ಮೇನ್ ಸುಟ್ಟೇ ಬೂದೀ ಮಾಡವ್ರೇ ॥ ೨೯ ॥

ಮನಿಗೇನಾದಾರೇ ಬಂದರೂ ತಾಯೇ
ನಮ್ಮ ನೋಡಿನ್ನೇ ಸಂತರಸೂ ನೀನೂ"

ಅರಸೂನಾದಾರೇ ಯೇನಾ ಮಾಡವ್ನೇ
ಊಟ ಯೆಲ್ಲವೊ ಉಪಚಾರಿಲ್ಲವೋ ॥ ೩೦ ॥

ಊಟಾನೂ ಯೆಲ್ಲಾ ಉಪುಚಾರ ಯೆಲ್ಲಾ
ಬೆಳ್ಗಾಗ್ಯದ್ದೀದಾ ಯೇನಾ ಮಾಡೀದಾ?
ಕೆರ್ಯ ನೀರೀಗೆ ಮೊಕ ತೋಳೂಕೋದಾ
ಐಜ್ಜನಣದೀರೂ ತಂಗೀಯಾ ಸುಟ್ಟೀ ॥ ೩೧ ॥

ಅಂಗೈಯ ಕೆರ್ಯಲ್ಲೀ ತೊಳದಿ ಹೋಗೀರೂ
ಅರಸುನಾದರೇ ಮೊಕ ತೊಳುಕೋದಾ
ತಾಂಬರೆಳ್ಳೀಯಾ ಹೂಂಗೂ ಆಗಾದೇ
ನೀರನೇ ಮೊಗುದಾ ॥ ೩೨ ॥

ಯೇನಾ ಮಾಡಿದ್ರೂ ಕಯ್ಯಿಗೆ ಶಿಕುತಾದೇ
ಅಡ್ಡ ಹಾಕ್ಬೇಕಂದಿ ನಗುದಿದಾ ಮೇನೇ
ಹೆಣ್ಣಾಗೀ ಲಿನ್ನೇ ಬಂದೀತು ಕೈಗೇ
ನೆಗುದೀ ನಾದಾರೇ ಕುಳ್ಳೀಸಿ ಕಂಡಾ ॥ ೩೩ ॥

"ಹರಹರ"ನಂದಾ "ಸಿರಿಹರೀ"ನಂದಾ
"ಮನಿಗೆ ಹೋದಾರೇ ನನ್ನಲೂ ತಾಯೀ
ನನ್ನಲು ಕಡದೀ ತುಂಡೂ ಮಾಡುತಾದೇ"
ಕೊದುರೀ ನಾದಾರೆ ತಕ್ಕಂಡಿ ಹೋದಾ ॥ ೩೪ ॥

ಕೊದುರೀಯಾ ಮೇನೆ ನೆಗುದೀ ಕುಳ್ಸೀದಾ
ಹಿಂದಲೂ ಕಡಿಗೇ ಆಡಿಕಂಡಿ ಕೂತಾ
ಕೊದುರೀ ನಾದಾರೇ ಹೇರಿಕಂಡಿ ಬಂದಾ
ತಾಯಮ್ಮಾ ಲಿನ್ನೇ ಯೇನ ಹೇಳ್ತದೇ ॥ ೩೫ ॥

"ನಗ್ಗನಾ ಕಂಡೀ ಬಂದೀದೆ ನೀನೂ
ಮುಂದಲೂ ಬಾರೋ" ಲಂದೀ ಹೇಳೀತೂ
ನಿನ್ನಲು ಕುತಗೀ ಮೊದಲೀ ನಾ ಕಡೀತೇ
ನೀ ಮದ್ಯಾಕಾ ಬಂದದ್ದ ಕಡಿಗೆ ನಾ ಕಡಿತೇ" ॥ ೩೬ ॥

ಅಂದ್ದೇಳಿ ತಾಯೀ ಹೇಳಲುತನ್ಕೇ
"ಕೇಳಲಿ ಕೇಳೇ ನನ ಗೌರಮ್ಮ ಲತ್ತೇ
ನಿನ್ ಹೊನ್ನಮ್ಮ ಸೊಸ್ಯೇ ನಾನೇಯ ಹೌದೂ"
ಯೇನ ಹೇಳಿದರೂ ಕೇಳೂದಿಲ್ಲಾ || ೩೭ ||

ಕಳವನಾದಾರೂ ಲತ್ತಿಗೆ ತಪ್ ಹೋಯ್ತೂ
"ನಾನೇಯ ಲತ್ತೆ ಹೊನ್ನಮ್ಮ ನೋಡೂ
ವಳ್ಗ್ ಹೋಗಿ ನೀನೂ ನೋಡಾಲು ಬಾರೇ"
ವಳ್ಗ್ ಹೋಗಿಲಿನ್ನೇ ನೋಡೀತು ಲತ್ತೇ || ೩೮ ||

ಮುಂಚೇ ಯಾವ್ ತರ ವಳುಗೆ ತುಂಬೀತೂ
ಅದೇ ಸಂಪತ್ತೂ ವಳುಗೇ ಲಾಗದೇ
ಆಗ್ ಹೋಗಿ ಲಿನ್ನೇ ನೋಡಿ ಬಂತೂ
ಗೌರಮ್ಗೆ ಸಂತೋಸೂ ಲಾಗಿತೂ ಇನ್ನೇ || ೩೯ ||

"ನನ್ನಲು ಸೊಸಿಯೇ ಮನ್‌ದುಂಬಿ ಬಂತೂ
ಜೀವದಲಿ ಸಂತರಸೀ ಕಂಡೀತೂ ಯೇಗೆ
ಹೊನ್ನಮ್ಮ ಸೋಸಿಯೇ ವಳುಗೇ ಹೊಕ್ಕೀತೂ
ಸಂತೋಷದಿಂದೇ ಮನೀಲಿ ಉಳದೀರೂ || ೪೦ ||

● **ಕೆಲವು ಪದಗಳ ವಿವರಣೆ**

| | | |
|---|---|---|
| ನಗ್ನಾ | = | ಲಗ್ನ |
| ಯೋನ | = | ಏನ |
| ಚೆಚ್ಚಾದೆ | = | ಚೆಚ್ಚಿಕೊಂಡಳು, ಇಟ್ಟುಕೊಂಡಳು |
| ಜೇಜಿ | = | ಕುದುರೆ |
| ಮಳ್ಳ್ಯಾಲೆಂಗಿಸುವೆ | = | ಮಳ್ಳು ಹೆಂಗಸು |
| ಆರಂಬಡುವಿ | = | ಘೋರಾರಣ್ಯ |
| ಸಾಂಸೆ | = | ಸಂಶಯ |
| ಸಬ್ವ | = | ಶವ |
| ಯೆಲ್ಲ | = | ಇಲ್ಲ |

| | | |
|---|---|---|
| ಸಂತರಸು | = | ಸಂತೈಸಿಕೊಳ್ಳು |
| ತಾಂಬರೆಳ್ಳಿ | = | ತಾವರೆ ಹೂವು, ಕಮಲ |
| ನಗ್ಗ ನಾಕಂಡಿ | = | ಲಗ್ನ ಮಾಡಿಕೊಂಡು |
| ಮದ್ಯಾಕಬಂದದ್ದ | = | ಮದುವೆ ಮಾಡಿಕೊಂಡು ಬಂದಿದ್ದು |
| ಲತ್ತಿಗೆ | = | ಲತ್ತೆಗೆ, ಹೊಡೆತಕ್ಕೆ |
| ಸಂತರಿಸಿ | = | ಸಂತೋಷಪಟ್ಟ |

■ ಹೇಳಿದವರು: **ಗೌರಿ ಕೋಂ. ಶಿವಪ್ಪ ನಾಯ್ಕ,** ಹೆಗಡೆ ಊರು

# ೧೦. ಹೊಸಗತ್ತು

ಅತ್ತಿಗುರಪನ ಸಾಲೆ ಮಾವಗೆ ಮಂಗ್ಲ ಸಾಲೆ
ಕಾಮದೇವ್ರುಡುವಾ ಕರಿಕಂಬಿನ ಸಾಲಿಯಾ
ವಗ್ವೆಂದರಿಟ್ಟೊ ನೀರೆಲ್ಲ॥
ಹೊತ್ತಾಳೇ ಹೊನ್ನಾ ಮುಡಿಮೇನೆ ॥ ೧ ॥

ಮೋಡ್ಲನ್ ಸಮುದ್ರಕ್ಕೇ ನೆಡದಾಳೂ
ಶಾಣಾಗಲ್ಲಿಟ್ಟೇ ವಗದಾಳ
ಚಂದ್ರಂತಾ ಬಿಸ್ಲೀಗೇ ಹರಗೀತು
ಕಟ್ಟೇದಳ್ವೊಂದಾ ಹೂರಿಗೋಳಾ ॥ ೨ ॥

ಹೊತ್ತಾಳೆ ಹೊನ್ನಾ ಮುಡಿಮೇನೇ
ಹಿಂತಿರುಗಿ ಮನಿಗೇ ಬರ್ವದೂ
ತಂದವ ಹೊರಿಯಾ ತೊಳ್ಚಿ ಪೀಟದ್ ಮೇನಿರ್ಸ್ತು
ತೊಟ್ಲನ್ ಬಾಲಪ್ಪಾ ತೊಟ್ಲಲ್ ತೀಡುತಾ ॥ ೩ ॥

ಹಿತ್ತಿಲ ಕಡುಗೇ ನೆಡುದಾಳೇ
ಜಾಂಜಿ ಹೂಂಗಿಟ್ಟಾ ಕೊಯ್ದಾಳೂ
ಕ್ಯೆಂದುಗಿ ಕೊನ್ಯ ತಂದಾಳೆ
ಅಟ್ಟುವ ವಟ್ಟೇ ಮಾಡೀತು || ೪ ||

ತೊಳ್ಚಿ ಪೀಟದ ಮೇನ್ ಇರಿಸಿತು
ಚಿನ್ನದಟ್ಟಕ್ಕೇ ಬೆಳ್ಳಿಯೇಣೀ ಚಾಚೀ
ಅಚ್ಚ ಕಂಬ್ಯಣ್ಣೀ ತೆಗೂತಂತೊ
ತೊಟ್ಲನ್ ಬಾಲಪ್ಪಾ ನೆಗದೀತು || ೫ ||

ಚೆಂದದಿಂದ್ ಯೆಣ್ಣೀ ತಿಕ್ಕೀತೂ
ಕಪ್ಪಿನ ಕೈಡ್ಗೀಯಾ ತಂದಾಳೆ
ಕಣ್ಣಿಗ್ ಕಪ್ಪವಾ ಯೆಚ್ಚೀದಳೂ
"ಚೆಂದದಿಂದ್ ಮೊಲಿಯಾ ಕುಡೀ ಮಗನೇ" || ೬ ||

ತೊಟ್ಲನ್ ಬಾಲಪ್ಪಾ ತೊಟ್ಲಲೇ ಮನಸತು
ತೊಳ್ಚಿಪೀಟಕೇ ಬಂದಾಳೆ
ಹೂಂಗೂ ಕಟ್ಟಿದ್ದ ಹೊರಿಯಾ ಹೊತ್ತಾಳೆ
ಶಿಳ್ಯ ಬಂದ್ ಹೊರಿಯಾ ಹೊತ್ತಾಳೆ || ೭ ||

ಹೊಸಗುತ್ತೀಗ್ ಯೇಗೇ ನೆಡೂದಳೂ
"ಕೇಳಿರ್ ಕೇಳೀರೀ ಹೊಸಗುತ್ತೇ ನೀವೂ
ನಿಮ್ಮಡಿ ನಾನು ವಗದೇ ತಂದಿದೇ
ನಿಮ್ಮ ಮಡಿ ನೀವೂ ವಪ್ಪೀಸಿಕೊಳ್ಳೀ" || ೮ ||

"ಮತ್ತೊಂದಾ ಮೆಟ್ಟಾಲಿಳೀ" ಅಂದ್ರೂ
"ಕೇಳಲ್ ಕೇಳೀರೀ ಹೊಸಗುತ್ತೆ ನೀವೂ
ನಿಮ್ಮಡೀ ನೀವೂ ವಪ್ಪೀಸಿಕೊಳ್ಳೀ"
"ಮತ್ತೊಂದ ಮೆಟ್ಟಾಲಿಳೀ" ಅಂದ್ರು || ೯ ||

ಯೆಯ್ದಲು ಮೆಟ್ಟಾ ಇಳದೀತು
"ಕೇಳಲ್ ಕೇಳೀರೀ ಹೊಸಗುತ್ತೇ ನೀವೂ

ನಿಮ್ಮಡೀ ನೀವೂ ವಪ್ಪಿಸಿಕೊಳ್ಳೀ"
"ಮತ್ತೊಂದ ಮೆಟ್ಟಾಲಿಳೀ" ಯಂದ್ರೂ ॥ ೧೦ ॥

ಮೂರಲು ಮೆಟ್ಟಾ ಇಳಿದೀತು
"ಕೇಳಿರಿ ಕೇಳೀರೀ ಹೊಸಗುತ್ತೇ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ
ಮತ್ತೊಂದಾ ಮೆಟ್ಟಾಲಿಳೀ ಯಂದ್ರೂ ॥ ೧೧ ॥

ಮತ್ತೊಂದಾ ಮೆಟ್ಟಾ ಇಳ್ದಾಳೆ
"ಕೇಳಿರ್ ಕೇಳೀರಿ ಹೊಸಗುತ್ತೇ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ"
"ಮತ್ತೊಂದು ಮೆಟ್ಟಾಲಿಳೀ" ಯಂದ್ರೂ ॥ ೧೨ ॥

ನಾಕೊಂದು ಮೆಟ್ಟಾ ಇಳ್ದೀತು
"ಕೇಳೀರ್ ಕೇಳೀರೀ ಹೊಸಗುತ್ತೇ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ"
"ಮತ್ತೊಂದು ಮೆಟ್ಟಾಲಿಳೀ" ಅಂದ್ರೂ ॥ ೧೩ ॥

ಐದೊಂದು ಮೆಟ್ಟೂಲಾಗಿತು ಲಾಗೇ
"ಕೇಳೀರ್ ಕೆಳೀರೀ ಹೊಸಗುತ್ತೆ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ"
"ಮತ್ತೊಂದು ಮೆಟ್ಟಾ ಇಳೀ" ಅಂದ್ರೂ ॥ ೧೪ ॥

ಆರೊಂದು ಮೆಟ್ಟಾಲಾಗೀತು ಲಾಗೇ
"ಕೇಳಿರ್ ಕೇಳೀರೀ ಹೊಸಗುತ್ತೆ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ"
"ಮತ್ತೊಂದ ಮೆಟ್ಟಾ ಇಳೀ" ಅಂದ್ರು ॥ ೧೫ ॥

ಯೇಳೊಂದು ಮೆಟ್ಟಾ ಲಾಗಿತು ಲೀಗೇ
"ಕೇಳಿರ್ ಕೇಳೀರಿ ಹೊಸಗುತ್ತೆ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳಿ"
"ಮತ್ತೊಂದು ಮೆಟ್ಟಾಲಿಳೀ" ಅಂದ್ರೂ ॥ ೧೬ ॥

ಯಂಟೊಂದು ಮೆಟ್ಟಾ ಲಾಗಿತು ಲಾಗೇ
“ಕೇಳಿರ್ ಕೇಳೀರೀ ಹೊಸಗುತ್ತೆ, ನೀವೂ
ನಿಮ್ಮಡಿ ನೀವೂ ವಪ್ಪಿಸಿಕೊಳ್ಳೀ”
“ನಮ್ಮಡಿ ನಾವೂ ವಪ್ಪೀಸ್ ಕೊಳ್ವ” ॥ ೧೭ ॥

ಅಂದ್ವೇಳಿ ಲಾಗೇ ನುಡಿದರು ಲವರೂ
ತೊಟ್ಲನ್ ಬಾಲಪ್ಪಾ ತೊಟ್ಲಲ್ ಸತ್ ಹೋದಾ
ಗಂಡನಾದಾರೇ ಲರಸೂಕೆ ಬಂದಾ
ಅಲ್ಲಿನಾದಾರೆ ದನ ಕಾವು ಮಕ್ಕಳ್ ಸಿಕ್ಕೀರು ॥ ೧೮ ॥

“ಯೆಲ್ಲಿಗೆ ಹೋತೇ?” ಕೇಳಿರು ಲವರು
“ನನ್ನಲು ಮಡದೀ ಹೊಸಗುತ್ತಿಗೆ ಬಂದಿತೂ
ಬಂದದುಲಿನ್ನೂ ಹಿಂತಿರ್ಗಿ ಬರಲಿಲ್ಲ
ನೀನಾದ್ರೂಲಣ್ಣಾ ಹೋಗಲು ಬ್ಯಾಡಾ ॥ ೧೯ ॥

ಹೊಸಗುತ್ಗ್ ಹೋದೋರೂ ಬಂದೋರಿಲ್ಲಾ
ನೀನಾದ್ರೂಯೇಗೇ ಹೋಗಲುಬೇಡಾ
ಹಂತಿರುಗಿ ಮನಿಗೇ ಹೋಗಲು ಬೇಕು”
ಹಿಂತಿರುಗಿ ಮನಿಗೇ ಬಂದಾನವನೇ ॥ ೨೦ ॥

● **ಕೆಲವು ಪದಗಳ ವಿವರಣೆ**

| | | | | | |
|---|---|---|---|---|---|
| ಸಾಲೆ | = | ವಸ್ತ್ರ | ಶಾಣಾಗಲ್ಲು | = | ಚಾಣವಿದ್ದ ಕಲ್ಲು |
| ಕೈಂದುಗಿ | = | ಕೇದುಗೆ | ಜಾಂಜಿ | = | ಜಾಜಿ |
| ಯೆಚ್ಚಿ | = | ಹಚ್ಚಿ | ಹೊರಿ | = | ಹುರಿಯುವುದು |
| ಮೋಡ್ಲನ್ | = | ಪೂರ್ವದ | ಕೈಡಗಿ | = | ಕರಡಿಗೆ |
| ಶಿಳ್ಳು | = | ಸೀಟಿ ಹಾಕುವುದು | | | |

■ ಹೇಳಿದವರು: **ಲಕ್ಷ್ಮಿಯೇರಪ್ಪ ನಾಯ್ಕ, ಕೋಡಕಣಿ.**

# ೧೧. ಸತಿಯ ದಿವ್ಯ

"ಕೇಳಲೆ ಮಡದೀ ಕೇಳಲೆ ನನ್ನ ಮಾತು
ಲಿಂದಿನ ಹೂಗೊಂದು ನನ್ನ ತಂಗಿಗೇ ತಾನಾ
ಲಿಂದಿನ ಹೋಗೊಂದು ನನ್ ತಂಗೀಗೆ" ಲಂದೇಳೀ
ಚೊಬ್ಬಿ ತುಂಬ್ ಹೂಗ ಕೊಯ್ಕಂಡ್ತೇ ತಾನಾ ॥ ೧ ॥

ಚೊಬ್ಬಿ ತುಂಬ್ ಹೂಗ ಕೊಯ್ಕಂಡ್ತೇ ಮಡುದೀಯೇ
ಸಣ್ಣ ದಂಡೀನೇ ಕಟಿದಳು ತಾನಾ
ಸಣ್ಣ ದಂಡೀಯ ಕಟ್ಟೀ ಕಂಡಿನ್ನೂ
ತಂಗೀಯ ಮನುಗೇ ಬರುವನೋ ತಾನಾ ॥ ೨ ॥

ವಂದ ಗೊಡ್ಡಿಯ ಹತ್ತಿ ವಂದ ಗೊಡ್ಡಿಯ ಇಳಿದಿ
ವಂದ್ ಗುಡ್ಡಿ ಕಾಲಿಳುದಿ ಬರುವ ಸಮ್ಯದಲ್ಲಿ
ಬೆಳ್ಳಿಯ ಕೊಡ ತಟ್ಟಿ, ಚಿನ್ನದ ಕೊಡ ತಟ್ಟಿ,
ಬಾವಿಯ ನೀರಿಗ್ ಹೋಗೆ ಬರುವಳು ತಾನಾ ॥ ೩ ॥

"ಕೇಳಲೆ ಕೇಳಲೆ ತಂಗಿ ಕೇಳಲ್ಲೆ ನನ್ನಲು ಮಾತು
ನೆತ್ತಿ ತುಂಬ್ ಹೂಗ ಮುಡ್ಕಳೇ" ತಾನ
"ಕೇಳಲೊ ಕೇಳಲ್ಲೊಲಣ್ಣ ಕೇಳಲೊ ನನ್ನಲು ಮಾತು
ಇಂದಿಗೆ ನಮ್ಮನೆಗೇ ಬರಬೇಕೋ" ತಾನಾ ॥ ೪ ॥

"ಕೇಳಲೆ ಕೇಳಲೆ ತಂಗೀ ಕೇಳಲ್ಲೇ ನನ್ನಲು ಮಾತು
ಲಿಂದೇ ಮನ್ಯಾಗೇ ಹೋಗುವೇನು ತಾನ
ಲಿಂದೇ ಮನ್ಯಾಗೇ ಹೋಗುವೆ, ನಾನಿನ್ನೇ
ನಾಳೇ ದಿನದಲ್ಲೀ ಬರುವೆನೇ ತಾನಾ ॥ ೫ ॥

ನಾಳೇ ದಿನದಲ್ಲಿ ಬರುವೆನೇ" ಲಂದ್ಹೇಳಿ
ಹಿಂತಿರುಗಿ ಮನುಗೇ ನಡುದನೇ ತಾನಾ,
ಕೊಡದಲ್ಲೀ ನೀರೇ ತುಂಬಿ ಚಂಬುಗಿಲಿ ನೀರೇ ತುಂಬೀ
ಹಿಂತಿರುಗೇ ಮನುಗೇ ಬರುವಳೇ ತಾನ ॥ ೬ ॥

ಹಿಂತಿರುಗೇ ಮನುಗೇ ಬರುವಳು ತಂಗಿನ್ನೇ
ಕೆರೆಬಾವಿ ಮೆಟ್ಟ ಹತ್ತಿನ್ನೇ ಬಂದಳು
ಗಂಡ ಲೇನಂದೀ ನುಡಿದನೇ ತಾನ?
"ಗಂಡಲು ತಂದ ಹೂಗೇ ಮಿಂಡ ತಂದ ಹೂಗೇ ॥ ೭ ॥

ಯಾರಲು ತಂದದ್ದು ವೊಂದು ಹೊಸ ಹೂಗೇ? ತಾನ
ಯಾರಲು ತಂದದ್ದು ಹೂ?" ಲಂದ್ಹೇಳಿ ಕೇಳ್ದಾನೇ ತಾನ
"ಗಂಡಲು ತಂದ್ ಹೂಗಲ್ಲ ಮಿಂಡಲು ತಂದ್ ಹೂಗಲ್ಲ
ನನ್ನಣ್ಣ ತಂದ ಹೊಸ ಹೂಗೇ ತಾನ ॥ ೮ ॥

ನನ್ನಣ್ಣ ತಂದ ಹೊಸ ಹೂಗೇ" ಲಂದ್ಹೇಳಿ
ಕೊಡನ ಪೆಟಗೀಯ ಹಿಡಿದಳೇ ತಾನ
"ಕೇಳಲೆ ಕೇಳಲೆ ಮಡದಿ, ಕೇಳಲ್ಲೇ ನನ್ನಲು ಮಾತು
ನಿನ್ನಲು ಸತ್ಯವು ನಿನ್ ಕೈಲಿ ಲಿದ್ದರೆ
ಸಾಣೂಗಿಲಿ ನೀರ ತರಬೇಕೇ" ತಾನ ॥ ೯ ॥

ಅಟ್ಟಂಬೂ ಮಾತ ಕೇಳಿದ ಮಡದೀಯೇ
ಬಾವೀಗೇಯೇಗೇ ನಡದಳೇ ತಾನ
"ನನ್ನ ಸತ್ಯವೊಂದು ನನ ಕೂಡೇ ಲಿದ್ದರೇ
ಒಂದನಿ ಚೆಲ್ಲದೆ ಒಂದನಿ ತೋಕದೆ
ಸಾಣೂಗಿಲಿ ನೀರ ಬರಬೇಕೇ" ತಾನ ॥ ೧೦ ॥

"ಕೇಳಿರಿ ಕೇಳಿರಿ ಸ್ವಾಮಿ, ಕೇಳಿರಿ ನನ್ನಲು ಮಾತು
ನನ್ನ ಸತ್ಯವೊಂದು ನನಕೈಲಿ ಲಿದ್ದಿತು
ಸಾಣುಗಿಲಿ ನೀರು ತರುತಂದೇ" ತಾನಾ
"ಗೆದ್ದೆ ಗೆದ್ದೆನೆಂದು ಹೊಸ ನಗ್ಗಿ ಮಾಡಬೇಡ ॥ ೧೧ ॥

ಪತ್ತುವರ್ತಿ ಕರೆಯಾದರೇ
ವಳುಸೆರಗ್ನಲ್ಲಿ ಬೆಂಕಿ ತರಬೇಕೇ" ತಾನ
ಲಟ್ಟಂದ ಮಾತು ಕೇಳಿದಳು ಸಣಗಂಗಿ
ಜೋತಿಯ ಮುಂದೆ ನಡದಾಳೇ ತಾನ ॥ ೧೨ ॥

ಜೋತಿಯ ಮುಂದೇ ನಡದಾಳೇ ಸಣಗಂಗಿ
ಬಾಯೊಡುದಿ ಕೇಳಲಿಲ್ಲ ಕೈಹಾಕಿ ತೆಗಿಲಿಲ್ಲ
"ಸೆರಗಿನಲಿ ಬೆಂಕಿ ಬರಬೇಕು" ತಾನ
ವಳಸೆರಗ್ನಲಿ ಬೆಂಕಿ ತಂದಳು ಸಣಗಂಗಿ
ಗಂಡನ ಬುಡದಲಿ ಬಂದು ನಿತ್ತಾಳೇ ತಾನ ॥ ೧೩ ॥

"ಕೇಳಿರಿ ಕೇಳಿರಿ ಸ್ವಾಮಿ, ಕೇಳಿರಿ ನನ್ನಲು ಮಾತು
ನನ್ನಲು ಸತ್ಯವೊಂದು ನನಕೈಲಿ ಲಿದ್ದಿತು
ಏಳು ಸೆರಗ್ನಲಿ ಬೆಂಕಿ ತಂದೆನು" ತಾನ
"ಗೆದ್ದೆ ಗೆದ್ದೆನೆಂದು ಹೊಸ ನಗ್ಗಿ ಮಾಡಬೇಡ ॥ ೧೪ ॥

ನಿನ್ನಲು ಸತ್ಯವೊಂದು ನಿನಕೈಲಿಲಿದ್ದರೆ
ಕತ್ತಿಗಹಾಕಿ ಕಡಿಬೇಡ ಬಳ್ಳಿ ಹಾಕಿ ಕಟ್ಟಬೇಡ
ಸೌದೀಯ ಲೀಗೆ ತರಬೇಕೇ" ತಾನ ॥ ೧೫ ॥

"ಕತ್ತಿಹಾಕಿ ಕಡಿಬಾರ ಬಳ್ಳಿಹಾಕಿ ಕಟ್ಟಬಾರ
ಸೌದೀಯ ಲೀಗೆ ತರಬೇಕು"ಲಂದಳು
"ಹರಹರ"ನಂದಳು "ಶಿವಶೀವ"ನಂದಳು
ಮೂಡಿನ ಬೆಟ್ಟಕೆ ನಡೆದಾಳೇ ತಾನ ॥ ೧೬ ॥

ಮೂಡಿನ ಬೆಟ್ಟಕೆ ನಡೆದಳುತ್ರ ದೇವೀ
"ಕತ್ತಿಹಾಕಿ ಕಡಿಲಾರೆ ಬಳ್ಳಿ ಹಾಕಿ ಕಟ್ಟಲಾರೆ
ಬೆಟ್ಟದ ಸೌದೀ ರಾಶಿಬೀಳೆ ತಾನ ॥ ೧೭ ॥

ನೆತ್ತಿಮೇಲೀಗೀ ರಾಶಿಬೀಳೆ"
ನೆತ್ತಿಯ ಮೇಗೆ ರಾಶಿಬಿದ್ದು ಸಹದೇವಿ
ಹಿಂತಿರುಗಿ ಮನಗೆ ನಡೆದಳೇ ತಾನ
ಹಿಂತಿರುಗಿ ಮನೆಗೆ ಬರುವಳೇ ಸಣಗಂಗಿ ॥ ೧೮ ॥

"ಕೇಳಿರಿ ಕೇಳಿರಿ ಸ್ವಾಮಿ, ಕೇಳಿರಿ ನನ್ನಲು ಮಾತು
ನನ್ನಲು ಸತ್ಯವೊಂದು ನನ್ನ ಕೂಡೆ ಲಿದ್ದಿತು
ಕತ್ತಿಹಾಕಿ ಕಡಿಯಲಿಲ್ಲ ಬಳ್ಳಿಹಾಕಿ ಕಟ್ಟಲಿಲ್ಲಾ
ಸೌದೀನ ಲೀಗೇ ತಂದೇನೆ" ತಾನ || ೧೯ ||

"ಗೆದ್ದೇ ಗೆದ್ದೆನೆಂದು ಹೊಸ ನಗ್ಗಿ ಹೊಡಿಬೇಡ
ಮತ್ತೊಂದು ಸರತ ಲಿಡವೆನೇ ತಾನ
ಕೇಳಲೆ ಕೇಳಲೆ ಮಡದೀ, ಕೇಳಲೆ ನನ್ನಲು ಮಾತು
ಏಳೆಡೆ ಮಾಡಿ ನಾಗಸರ್ಪ ಮುಡಿದ್ ಬಾರೆ" ತಾನ || ೨೦ ||

ಅಷ್ಟೊಂದು ಮಾತು ಕೇಳೀತು ಸಣಗಂಗಿ
ಮಾಳೂಗಿ ವಳುಗೇ ನಡದಾಳೇ ತಾನ
ಮಾಳೂಗಿ ವಳುಗೇ ನಡದಳುತ್ರ ದೇವಿ
ನೆತ್ತಿ ತುಂಬೆಣ್ಣೆ ಯರುಕಂಡ್ತೇ ತಾನ || ೨೧ ||

ನೆತ್ತಿ ತುಂಬೆಣ್ಣೆಯರೆದಳು ಸಹದೇವಿ
ಬಣ್ಣದ ಬಾಚಣಗೇಲಿ ಮುಡಿಕಟ್ಟಿ ತಾನ
ಕಂದನ ಲೀಗೇ ನೆಗದಳು ಸಹದೇವಿ
ಹೊಟ್ಟಿ ತುಂಬಿ ಹಾಲು ಕುಡಿಸಳೇ ತಾನ || ೨೨ ||

ಹೊಟ್ಟಿ ತುಂಬ್ ಹಾಲು ಕುಡಿಸಾಳೇ ಸಹದೇವಿ
ಮುತ್ತಿನ ಕಣ್ಣೀರು ತಗದಳು ತಾನ
ಮುತ್ತಿನ ಕಣ್ಣೀರು ತಗದಳುತ್ತರ ದೇವಿ
ಹರವಣದಾಗಾಲೂ ಹಣ್ಣು ಇಟ್ಟಲುತ್ರ ದೇವಿ
ಬಾಗಿಲ ಮೆಟ್ಲಿಳುದಿ ನಡದಳೋ ತಾನ || ೨೩ ||

ಬಾಗಿಲ ಮೆಟ್ಲಿಳುದಿ ನಡದಳುತ್ರದೇವಿ
ಹುತ್ತಿನ ಬುಡದಲ್ಹೋಗಿ ನಿತ್ತಳು ತಾನ
ಹುತ್ತಿನ ಬುಡದಲೋಗಿ ನಿತ್ತಳುತ್ರ ದೇವಿ
"ಕೇಳಲಿ ಕೇಳಲಿ ಸರ್ಪ, ಕೇಳಲೊ ನನ್ನಲು ಮಾತು
ಈಗಾದರೆ ಗಳುಗೇ ಬರಬೇಕು ತಾನ || ೨೪ ||

"ಹಾಲನು ಕೊಡುವೆ ಸರ್ಪ, ಹಣ್ಣಲು ಕೊಡುವೆ ಸರ್ಪ
ಸರ್ಪ ಸರ್ಪನವಾಗಿ ಬರಬೇಕೇ" ತಾನು
ಹಾಲೂ ಹಣ್‌ವಂದು ಇಟ್ಟಳು ತಾನ
ಹಾಲೂ ಹಣ್‌ವೆಂದು ಇಟ್ಟಳುತ್ರ ದೇವಿ ॥ ೨೫ ॥

"ಕೇಳಲೆ ಕೇಳಲೆ ಸರ್ಪ ಕೇಳಲೋ ನನ್ನಲು ಮಾತು
ನನ್ನ ಮುಡಿ ಮೇನೇ ಕುಳ್ಳಬೇಕೋ ತಾನ
ನನ್ನ ಮುಡಿ ಮೇನೇ ಕುಳ್ಳಬೇಕು ಸರುಪ ಕೇಳು
ನಿನ್ನ ಹಸ್ರೊಂದು ನನಗೇ ಹಾಕಲು ಬೇಡ ॥ ೨೬ ॥

"ನನ್ನ ಹೆಸ್ರವಂದು ನಿನಗೆ ಕೊಟ್ತೆ ತಾನ
ನನ್ನ ಹೆಸ್ರ ವಂದು ನಿನಗೆ ಕೊಡ್ತೇ" ಲಂದಿ
ಹಿಂತಿರುಗಿ ಮನೆಗೆ ಬರವಳೇ ತಾನ
"ಕೇಳಲೆ ಕೇಳಲೆ ಸ್ವಾಮಿ, ಕೇಳಿರಿ ನನ್ನಲು ಮಾತು ॥ ೨೭ ॥

ನನ್ನಲು ಸತ್ಯವೊಂದು ನನ್ನ ಕೈಲಿ ಲಿದ್ದಿತು
ಏಳು ಹೆಡೆ ಮಣಿ ಸರ್ಪ ಮುಟ್ಟಿತಂದೇ ತಾನ
ಲಟದೂರ ಬರವಾಗ ಲಿಟದೂರೆ ಕಂಡಾನೇ
"ಕೇಳಲೇ ಕೇಳಲೆ ಮಡದಿ, ಕೇಳಲಿ ನನ್ನಲು ಮಾತು
ಹೋಗಿ ಹುತ್ತೀನಲ್ಲಿ ಬಿಟ್ಟಿ ಬಾರೇ ತಾನ ॥ ೨೮ ॥

ಹೋಗಿ ಹುತ್ತೀನಲ್ಲಿ ಬಿಟ್ಟಿಬಾರೆ ಮಡದೀ ಕೇಳೇ
ದಮ್ಮಯ್ಯಲಾಗೂದು ದತ್ತಯ್ಯ, ಲಾಗೂದು
ಲಿಂತಿರುಗಿಲದುರ ಬಿಟ್ಟಿ ಬಾರೇ" ತಾನ ॥ ೨೯ ॥

ಲಟ್ಟೊಂದು ಮಾತು ಕೇಳೀತು ಸಣಗಂಗಿ
ಬಾಗೀಲ ಮೆಟ್ಲು ಇಳಿದೀತು ತಾನ
ಬಾಗೀಲ ಮೆಟ್ಲು ಇಳಿದಹೋಗಿ ಸಣಗಂಗಿ
ಹುತ್ತಿನಲ್ಲದುರ ಬಿಟ್ಟಿ ಬಂತು ತಾನಾ ॥ ೩೦ ॥

ಲುತ್ತೀನಲ್ಲದುರ ಬಿಟ್ಟಿಬಂದಿ ಸಣಗಂಗಿ
ಹಿಂತಿರುಗಿ ಮನೆಗೆ ಬರವಳೇ ತಾನ ॥ ೩೧ ॥

● **ಕೆಲವು ಪದಗಳ ವಿವರಣೆ**

| | | | | | |
|---|---|---|---|---|---|
| ಒಂದನಿ | = | ಒಂದು ಹನಿ | ಸರತ | = | ಶರತ್ತು |
| ಹಸ್ರು | = | ವಿಷ | ಪತುವರ್ತಿ | = | ಪತಿವ್ರತೆ |

# ೧೨. ಅತುಮವ್ವಿ

ಅಡವೀಲಿ ಮೊಳೆ ಹೊಯ್ದಿ ಗಿಡವಿಲಿ ಪಟ್ಟಣಗಟ್ಟಿ
ತಡಿಯ ತಾವುರಿಯಾ ಸುಳಿ ಹುಟ್ಟಿ ಅಣತಮ್ಮ ॥ ೧ ॥

ಲಾಗೊಂದ ಮಾತಾ ನುಡುದವ್ರೇ
ಲಾಗೊಂದ ಮಾತಾ ಯೇನೇಳಿ ನುಡಿದರೇ ॥ ೨ ॥

"ಪತುವರತೀರ್ ಉಂಟೇ ಜಗದಲ್ಲೀ?" ಲಂದೇಳೀ
ಅಣ್ಣನು ತಮ್ಮಾನು ನುಡಿಮಾತೂ ॥ ೩ ॥

ಅಣ್ಣನು ತಮ್ಮಾನು ನುಡಿ ಮಾತಾಡುವಾಗೇ
ಅಲ್ಲೇ ಮಲುಗೌಡೀ ಬರುವದೆ ॥ ೪ ॥

ಅಲ್ಲೇ ಮಲುಗೌಡೀ ಬಂದು ಕಂಡ್ಯೇನಂಬೂದೆ?
"ನಮ್ಮಮ್ಮ ನಮ್ಮೂರ್‌ಗೆ ಪತುರುತೀ" ॥ ೫ ॥

ಲಿಟ ಮಾತ ಕೇಳಾನೆ ಕುತುಮಂಜಾ ಜಡುದಾನೇ
ದೊರುರಾಯ ಮನುಗೇ ನೆಡುದಾನೇ ॥ ೬ ॥

ದೊರುರಾಯ ಮನ್ನು ನಡ್ಕಂಡೇ ನಂಬೂನೇ
"ನಾರೀ" ಲಂದೇಳೀ ಕರಿದಾನೆ ॥ ೭ ॥

ವಂದನ್ ಕರುದರೆ ಯೆರುಡಲ್ "ವೊ"ಯೆಂದಾಳೆ
ನಲ್ಲನುತ್ರಕ್ಕೇ ವದಿಗಾದೇ ॥ ೮ ॥

ನಲ್ಲನುತ್ರಕ್ಕೇ ವದಗೀಲ್ಯೇನಂಬೂದೇ
"ಸ್ವಾಮೀ, ಸನ್ಯಾಕೇ ಕರದೀರೀ" ಕೇಳೂ ತನಕಾ ॥ ೯ ॥

"ಆಸರಕೆ ತಾರೇ ನೊರೆಹಾಲಾ"
ಮಾಳೂಗಿಗಿನ್ನು ನೆಡುದಾಳೆ ಲತುಮವ್ವೀ ॥ ೧೦ ॥

ಕರುಬಿಟ್ಟಿ ಕೊಟ್ಟಿಗೆಗೇ ಹೊಡುದಾದೇ
ಕರುಬಿಟ್ಟಿ ಕೊಟ್ಟಿಗೆಗೆ ಹೊಡ್ವಾ ಸಮ್ಯಾದಲ್ಲೀ ॥ ೧೧ ॥

ಕರು ಗುದ್ದಿ ಹಾಲಾ ಕುಡಿದದೆ
ಕರು ಸೊಗದಿ ಕಂಬಾಕೇ ಬಿಗುದಾದೆ ಲತುಮವ್ವೀ ॥ ೧೨ ॥

ಹಾಲ ಕರವಾಕೇ ಕುಳ್ಳೂವದೇ
ಹಾಲ ಕರ್‌ವಕೆ ಕುಳ್ಳೂ ಸಮ್ಯದಲ್ಲೀ
"ನಾರೀ" ಲಂದ್ ಹೇಳೀ ಕರಿದಾನೇ ॥ ೧೩ ॥

ತಡುದಾ ಗಿಂಡಿಯ ಅಂತ್ರುಟಕಿಲಿ ಮಡುಗಿಟ್ಟೀ
ನಲ್ಲನುತ್ರಾಕೇ ವದುಗದೇ ॥ ೧೪ ॥

ನಲ್ಲನುತ್ರಾಕೇ ವದುಗೀಯೇನಂಬೂದೇ?
"ಸ್ವಾಮೀ, ನನ್ಯಾಕೇ ಕರುದೀರೀ? ॥ ೧೫ ॥

"ಸ್ವಾಮಿ ತನ್ಯಾಕೇ ಕರುದೀರಿ?" ಕೇಳೂ ತನಕಾ
"ಹಾಲ್ ಗಂಜಿ ಹಗಲೂಟಾಕೇ ಅನು ಮಾಡೇ" ॥ ೧೬ ॥

ಬಣ್ಣದ ಗೆರುಸೀಲೀ ಶಣ್ಣಕ್ಕೀ ಹೊಯ್ಕಂಡೀ
ರನ್ನದ ಹೊಳ್ಳಿಗೂ ಹೊಯುದಾದೇ ॥ ೧೭ ॥

ರನ್ನಾದ ಹೊಳ್ಳಿಗು ಹೊಯ್ದದೇ ಲತುಮವ್ವೀ
ಚಂದಾಣಾದೊಣಕೇ ತಡೀದಾದೇ ॥ ೧೮ ॥

ಚಂದಾಣಾದೊಣಕೆ ತಡಿದೀ ಮೇಲೆತ್ತುತನಕಾ
"ನಾರೀ" ಲಂದ್ ಹೇಳೀ ಕರಿದಾನೇ ॥ ೧೯ ॥

ತಡಿದಾ ವನಕೀಯಾಲಂತ್ರುಟಿಕಿಲಿ ಮಡುಗಿಟ್ಟೀ
ನಲ್ಲಾನುತ್ರಾಕೇ ವದಗಾದೇ ॥ ೨೦ ॥

ನಲ್ಲಾನುತ್ರಕ್ಕೆ ವದುಗಾದೇ ಲತುಮವ್ವೀ
"ಸ್ವಾಮೀ, ನನ್ಯಾಕೇ ಕರುದೀರೀ?" ॥ ೨೧ ॥

"ನಿನ್ನ ಸತ್ಯಾವೇ ನಿನಕೂಡೇಲಿದ್ದಾಗೂ
ಬೆಂಕಿಲ್ಲದೆ ಕಿಚ್ಚಾ ಉರಿಸೇ ಮುದುದೀ" ॥ ೨೨ ॥

"ಮತಿತನ ನನಗ್ಯಾಕೆ ಸ್ವಾಮಿ ಸತಿತನ ನನುಗ್ಯಾಕೆ ಸ್ವಾಮೀ?
ಪತುರತತನವೇ ನನುಗ್ಯಾಕೇ?" ॥ ೨೩ ॥

ಅಟ್ವಾರುಲಿನ್ನು ನುಡುದಾದೆ ಲತುಮವ್ವೀ
ವಲಿಯ ಬುಡುದಲೋಗೀ ಕುಳುವದೇ ॥ ೨೪ ॥

"ಕೇಳು ಕೇಳೇ ಅಗ್ನಿದೇವೀ ಕೇಳಲೇ ಅಗ್ನೀತಾಯೇ
ನನ್ನ ಸತ್ಯಾವೇ ನನ ಕೂಡೇಲಿದ್ದಾಗೂ ॥ ೨೫ ॥

ಬೆಂಕಿಲ್ಲದೆ ಕಿಚ್ಚು ಉರಿಬೇಕೇ"
ಅಟ್ವಾರೂಲಿನ್ನು ಹೇಳೂ ಕೇಳೂತನಕಾ ॥ ೨೬ ॥

ಬೆಂಕಿಲ್ಲದೆ ಕಿಚ್ಚು ಉರಿದಾವೇ
ಆ ಕಿಚ್ಚಾರು ಇನ್ನು ನೆಗ್ದಿ ಕೈಲಿ ಹಿಡಹಿತನಕಾ ॥ ೨೭ ॥

"ನಾರೀ" ಅಂದ ಹೇಳೀ ಕರಿದಾನೇ ॥ ೨೮ ॥

"ನಿನ್ನ ಸತ್ಯಾವೇ ನಿನ ಕೂಡೇಲಿದ್ದಾಗೇ
ಅಂತ್ರಾಟ್ಕಿಲಿ ನೀರು ತರುಬೇಕೇ" ॥ ೨೯ ॥

"ಮತಿತನ ನನುಗ್ಯಾಕೆ ಸ್ವಾಮಿ? ಸತಿತನ ತನುಗ್ಯಾಕೆ ಸ್ವಾಮೀ?
ಪತುರತತನವೇ ತನುಗ್ಯಾಕೇ?" ॥ ೩೦ ॥

ಅಟ್ವಾರೂಲಿನ್ನೂ ನುಡಿದಾದೇ ಲತುಮವ್ವೀ
ಬೆಳ್ಳಿಕೊಡ ಕರುಗೀ ತಡದಿದೇ ಲತುಮವ್ವೀ
ಮೂಡಿನ ಬಾವೀಗೂ ನೆಡಿದಾದೇ ॥ ೩೧ ॥

ಮೂಡಿನ ಬಾವೀಗೂ ನೆಡದಿಯೇನಂಬೂದೇ
"ನನ್ನೆ ಸತ್ಯಾವೇ ತನ ಕೂಡೇ ॥ ೩೨ ॥

ನನ್ನ ಸತ್ಯಾವೇ ನನ ಕೂಡೇಲಿದ್ದಾಗೂ
ಯೆರಡ ಕೊಡ ನೀರೂ ಬರಬೇಕೇ" II ೩೩ II

ಅಟ್ಟಾರೂ ಲಿನ್ನೇ ಹೇಳೂ ಕೇಳತನಕಾ
ಯೆರಡೂ ಕೊಡ ನೀರು ಮೇನ್ ಬಂತೂ II ೩೪ II

ಯೆರಡೂ ಕೊಡ ನೀರೂ ಮೇನೇಲೂ ಬರುತನಕಾ
ಇದು ಕೈಲಾರೂಲಿನ್ನು ಹಿಡಿದಾದೇ II ೩೫ II

ತಾನಾರೂಲಿನ್ನೂ ಕೈಲಿ ಹಿಡೂತನಕಾ
"ನಾರೀ" ಲಂದ್ ಹೇಳಿ ಕರುದಾನೇ II ೩೬ II

ತಂದಾಲೂ ಕೊಡುವಾ ಅಂತ್ರುಟಿಕೀಲಿ ಮಡುಗಿಟ್ಟೀ
ನಲ್ಲಾನುತ್ರಾಕೇ ವದುಗಾದೇ II ೩೭ II

ನಲ್ಲಾನುತ್ರಕ್ಕೇ ವದಗೀ ಯೇನಂಬೂದೇ
"ಸ್ವಾಮೀ, ನನ್ಯಾಕೇ ಕರೂದೀರೀ?" II ೩೮ II

"ನಿನ್ನ ಸತ್ಯಾವೇ ನಿನ ಕೂಡೇಲಿದ್ದಾಗೂ
ನೀ ಮೂರೂ ಮಣಿ ನಾಗೂರಾ ತರುಬೇಕೇ II ೩೯ II

"ಮತಿತನ ನನುಗ್ಯಾಕೆ ಸ್ವಾಮಿ? ಸತಿತನ ತನುಗ್ಯಾಕೆ ಸ್ವಾಮೀ?
ಪತುರತತನವೇ ತನುಗ್ಯಾಕೇ?" II ೪೦ II

ಪತುರತತನ ತನಗ್ಯಾಕೇ" ಲಂದೇಳೀ
ಮುತ್ತಿನ ಕಣ್ಣೀರಾ ಶಡೀದಾದೇ II ೪೧ II

ಮಾಳೂಗೀ ವಳಗೆ ಹೋಗಾದೇ ಲತುಮವ್ವೀ
ಹೊಸ ಕೊಡುನಾ ಬಾಯಾ ಬಿಡೂಸಾದೇ II ೪೨ II

ಹಾಲುಹಣ್ಣನೆನಿಟ್ಟು ದೀಪಾಧೂಪನೆಲಿಟ್ಟು
ಕಾಯೀಕತ್ತೀಗಳಾ ಅರುಸಾದೇ II ೪೩ II

ಕಾಯೀಕತ್ತಿಗಳಾ ಲಿರುಸಾದೆ ಲತುಮವ್ವೀ
ಹೆರಿನಾಗರ್ ಹುತ್ತೀಗೆ ನಡೆದ್ಬುದೆ II ೪೪ II

ಮಣಿನಾಗರ್ ಹುತ್ತಿಗೆ ನಡುದದೆ ಲತುಮವ್ವಿ
ಹುತ್ತಿಗೆ ಕ್ಯಯಾ ಮುಗಿದೀಽದೆ || ೪೫ ||

ಗುತ್ತಿಗೆ ಕೈಯಾ ಮುಗಿದದೆ ಲತುಮವ್ವಿ
ಮುತ್ತೀನ ಕಣ್ಣೀರಾ ಶೆಡಿದಾಽದೆ || ೪೬ ||

ಮುತ್ತೀನಾ ಕಣ್ಣೀರ ಶೆಡಿದೀತೆ ಲತುಮವ್ವಿ
ಹೆರಿ ನಾಗರೂಗೆ ಏನ ಹೇಳೀತು? || ೪೭ ||

ಮಣಿ ನಾಗೂರುಗೆ ಏನ ಹೇಳಿತು ಲತುಮವ್ವಿ
"ನನ ಪುರುಷರಿಗೆ ನನ ಮೇಲೆ ಸಂಶಽಯ || ೪೮ ||

ನನ ಸತ್ಯ ನನ ಜೊತೆ ಲಿದ್ದಿದಾದ್ದರೆ
ನಾ ಮೂರು ಮಣಿನಾಗೂರಾ ತರಬೇಽಕು || ೪೯ ||

ನನ ಸತ್ಯ ನನ ಜೊತೆ ಲಿದ್ದಿದ್ದಾದಾಽರೆ
ನೀವ್ ನನ ಜೊತೆ ಬರಬೇಽಕು" || ೫೦ ||

ಅಂದ್ಹೇಳಿ ಗುತ್ತೀಗೆ ನಮಽನ ಮಾಡೀತು ಲತುಮವ್ವಿ
ಹೊಸ ಕೊಡುನಾ ಬಾಯಾ ತೆಗದೀತು || ೫೧ ||

ಮೂರು ಮಣಿನಾಗೂರು ಗುತ್ತಿಂದ ಹೊರ ಬಿದ್ದಾವೆ
ಕೊಡುನಾ ಹತ್ತೀರ ಬಂದಾಽವೆ || ೫೨ ||

ವಂದೊಂದು ನಾಗೂರಾ ತೆಗುದೀಲೀಽಗ ಲತುಮವ್ವಿ
ಹೊಸ ಕೊಡುನಾ ಒಳಗೇ ಮಡುಗಾಽದೆ || ೫೩ ||

ಕೊಡುನಾ ಒಳಾಗೆ ಲಿರುಸೀಽತು ಲತುಮವ್ವಿ
ಕೊಡುನಾ ಬಾಯಾ ಬಿಗಿದಾಽದೆ || ೫೪ ||

ಕೊಡುನಾ ಬಾಯಾ ಬಿಗಿದೀಲೀಽಗ ಲತುಮವ್ವಿ
ಮನೆಯ ದಾರೀಯಾ ಹಿಡುದಾಽದೆ || ೫೫ ||

ಮನೆಯ ದಾರೀಯಾ ಹಿಡಿದು ಲತುಮವ್ವಿ
ಪುರುಸಾಽರ ಮುಂದೇಽ ನಿಂತಾಽದೆ || ೫೬ ||

ಪುರುಸಾರ ಮುಂದೇ ನಿಂತೀತೆ ಲತುಮವ್ವಿ
ಪುರುಸಾರಿಗೇನು ಹೇಳಾದೆ || ೫೭ ||

"ಕೇಳ್ ಕೇಳೀ ಪುರುಸಾರೆ ನೀವ್ ಕೇಳಿ ಪುರುಸಾರೆ
ನೀವ್ಹೇಳಿದ್ದಂಗೆ ಮಣಿನಾಗೂರಾ ತಂದೀದೆ || ೫೮ ||

ನಾನೂ ತೆಗ್ದರ್ ಸ್ವಾಮೀ, ಹಾವೆಂಬರಿ ಚವಳ್ಯಂಬಿರಿ
ಭಯವಿಲ್ಲಾ ಸ್ವಾಮೀ ತೆಗೀಬೌದೇ?" || ೫೯ ||

"ತೆಗೆತೆಗೆತೆಗೆ ನಾರೀ ನಿನ್ ಪಾದಾವೇ ಮುಟ್ಟೂವೇ
ತೆಗೆಯೇ ನೀನಿಟ್ಟಾ ವಲಮಾಲೇ" || ೬೦ ||

ವಂದೊಂದ ತೆಗುದಾದೇ ಹೊಸ ಕೊಡುನಲ್ ಮಡುಗಾದೇ
ಹೊಸ ಕೊಡುನಾ ಬಾಯಾ ಬಿಗೀದಾದೇ || ೬೧ ||

ಹೊಸ ಕೂಡುನಾ ಬಾಯಾ ಬಿಗಿದಾದೇ ಲತುಮವ್ವೀ
ಪುರುಸಗೆ ಸೂಸಲ್ ಮದ್ದ ಲಿರುಸಾರೇ || ೬೨ ||

ಪುರಿಸಗೆ ಸುಸ್ಲಮದ್ದಾ ಲಿರುಸದೆ ಲತುಮವ್ವೀ
ರಾಜಂಗಳ ಮೆಟ್ಟಾಲಿಳೀದಾದೇ || ೬೩ ||

ರಾಜಂಗಳ ಮೆಟ್ಟ ಇಳಿದಾದೇ ಲತುಮವ್ವಿ
ಹೆರಿಹುತ್ತಿನಲ್ಲೀ ನೆಡಿದಾದೇ
ದೀಪದೂಪ ಲಿಟ್ಟಾದೇ ಹಾಲುಹಣ್ಣಾ ಲಿರಿಸಾದೇ || ೬೪ ||

ಮೂರು ಕೋಳಿಮೊಟ್ಟೀ ಲಿರುಸಾದೇ ಲತುಮವ್ವೀ
ಕಾಯೊಡುದೀ ಕಯ್ಯಾ ಮುಗಿದಾದೇ ಲತುಮಾವೀ
ಆಗೊಂದು ಮಾತಾ ನುಡಿದಾದೇ || ೬೫ ||

"ನಾನೋಂದೂ ಪಾಪ್ಯಾದೇ ನಾನೊಂದು ಲೋಬ್ಯಾದೇ
ನಿನ್ ತಿಂಬುಂಬು ಲಾಯರವಾ ಕೆಡುಸೀದೇ || ೬೬ ||

ತಿಂಬುಂಬುಲಾಯರನಾ ಕೆಡುಸೀದೆ ಸುಬುರಾಯ,
ನಿಂದೀಕೊಳೋ ನಿಮ್ಮಾ ತಳದಲ್ಲೀ" || ೬೭ ||

ಅಟ್ಟಾರೂ ಹೇಳಿ ತಮ್ಮನೇಗ್ ಬಂದಾದೇ
ನಲ್ಲನ ಸುಸಿಲ್ ಮದ್ದಾ ತೆಗುದದೇ ಲತುಮಿಪ್ಪೀ
ಬಾಗ್ಲಮೆಟ್ಟಮೇನ್ ಹೋಗಿ ನಿಲುವದೇ || ೬೮ ||

“ಗೆದ್ದೆ ಗೆದ್ದೆ ಗೆದ್ದೆಲಂದೀ ಮುಗುಳ್ನಗಿ ನಗುಬ್ಯಾಡಾ
ನಿನ್ನ ಸತ್ಯವೇ ನಿನಕೂಡೇ ಲಿದ್ದರೂ
ತುಂಬಿದ್ದ ತೆರಿಯಳುದೀ ಬರುಬೇಕೇ” || ೬೯ ||

“ಮತಿತನ ನನುಗ್ಯಾಕೆ ಸ್ವಾಮೀ? ಸತಿತನ ತನುಗ್ಯಾಕೆ ಸ್ವಾಮೀ?
ಪತುರತತನವೇ ತನುಗ್ಯಾಕೇ? || ೭೦ ||

ಪತುರತತನ ತನುಗ್ಯಾಕೇ?” ಲಂದೇಳೀ
ಮುತ್ತಿನ ಕಣ್ಣೀರಾ ಸೆಡೂದದೇ || ೭೧ ||

“ಕೇಳಿ ಕೇಳಿ ಕೇಳಿ ಸ್ವಾಮೀ, ನಾನೊಂದ್ ಮಾತ್ ಹೇಳೂತೇ
ನಾ ಅಪ್ಪನ ಮನಿಗೋಗಿ ಬರೂವೇನೇ” || ೭೨ ||

“ನೀ ಅಪ್ನ ಮನಿಗೋಗೂವೇ ತುಪ್ಪಾಗಾರಂಬೂವೇ
ಅಲ್ಲೊಂದಾ ಮನುಸಾ ಯೆಣಿಸೂವೇ || ೭೩ ||

ಅಲ್ಲೊಂದಾ ಮನ್ಸಾ ಯೆಣಿಸೂವೆ ಯೆಲುನಾರೀ
ಅನ್ನಕು ಸುಣ್ಣಾಕೂ ಪರತವೇ || ೭೪ ||

ಅನ್ನಕು ಸುಣ್ಣಾಕು ಪರತಾ ಕಟ್ಟೀಕಂಡೀ
ನೀ ಅಪ್ಪನ ಮನಿಗೋಗೀ ಬರಬವುದೇ” || ೭೫ ||

“ಅಪ್ನ ಮನಿಗೋಗುತೆ ಸ್ವಾಮಿ, ತುಪ್ಪಾಗಾರುಂಬುದಿಲ್ಲಾ
ಅಲ್ಲೊಂದಾ ಮನುಸಾ ಯೆಣುದಿಲ್ಲಾ || ೭೬ ||

ಅಲ್ಲೊಂದಾ ಮನ್ಸಾ ಯೆಣುದಿಲ್ಲಾ ದ್ಯೇವಾರೇ
ಅಣ್ಣನ ಮನಿಗೋಗೀ ಬರೂವೇನೇ” || ೭೭ ||

“ಅಣ್ಣ ಮನಿಗೋಗೂವೇ ಯೆಣ್ಣಿಗಾರುಂಬೂವೇ
ಅಲ್ಲೊಂದಾ ಮನುಸಾ ಯೆಣುಸೂವೇ || ೭೮ ||

“ಅಲ್ಲೊಂದಾ ಮನ್ಸಾ ಯೆಣೇಸುವೇ ಯಲನಾರೀ
ಅನ್ನಕು ಸುಣ್ಣಾಕೂ ಪರತವೇ || ೭೯ ||

ಅನ್ನಕು ಸುಣ್ಣಾಕು ಪರತು ಕಟ್ಟೀಕಂಡೀ
ನೀ ಅಣ್ಣನ ಮನೆಗೋಗೀ ಬರಬೌದೇ" ॥ ೮೦ ॥

"ಅಣ್ಣ ಮನಿಗೋಗೂತೇ ಯಣ್ಣಿಗಾರುಂಬೂದಿಲ್ಲಾ
ಅಲ್ಲೊಂದ ಮನುಸಾ ಯಣುದಿಲ್ಲಾ ॥ ೮೧ ॥

ಅಲ್ಲೊಂದು ಮನುಸಾ ಯಣುದಿಲ್ಲಾ ದ್ಯಾವರೇ
ನಾ ಅಣ್ಣ ಮನಿಗೋಗೀ ಬರುವೇನೇ" ॥ ೮೨ ॥

ಅಟ್ಟಾರೂಲಿನ್ನೇ ನುಡಿದಾದೇ ಲತುಮವ್ವೀ
ಮಾಳೂಗೀ ವಳುಗೇ ನೆಡೀದಾದೇ ॥ ಲತುಮವ್ವೀ
ಪಟ್ಟೀಪೆಟ್ಟುಗೀಯಾ ತೆರದಾದೇ ॥ ೮೩ ॥

ಪಟ್ಟೀಪೆಟ್ಟುಗಿಯಾ ತೆಗುದಾದೇ ಲತುಮವ್ವೀ
ಅಪ್ಪ ಕೊಟ್ಟೀದಾ ಇಪ್ಪತ್ ವರನ್ ಗೌಡೀರು ॥ ೮೪ ॥

ಅವ್ರಗಾಗೀ ಮನಿಯಾ ಬಿಡುದೇ ಬಂತೂ
ಚಿನ್ನದ ಪೆಟ್ಟುಗಿಯಾ ಬಿಡುಸಾದೇ ಲತುಮವೀ ॥ ೮೫ ॥

ಚಿನ್ನ ಕಂಡೀ ದುಕ್ಕಾ ಬಿಡೂವದೇ
ಅಣ್ಣ ಕೊಟ್ಟೀದಾ ಹತ್ಲೋರನಾ ಗೌಡೀರು ॥ ೮೬ ॥

ಅವ್ರಗಾಗೀ ಮನಿಯಾ ಬಿಡುದೇ ಬಂತೂ
ಮುಂದ್ಲಕಡುಗ್ ಹೊಕ್ಕಾದೇ ಹಿತ್ಲಕಡುಗ್ ಹೆರುಬಿದ್ದಾದೇ ॥ ೮೭ ॥

ನಂದಗೋಕಿಲವಾ ಇಳೂದಾದೇ
ನಂದಾಗೋಕಿಲವಾ ಇಳುದಾದೇ ಲತುಮವ್ವೀ ॥ ೮೮ ॥

ನೆಟ್ಟಾ ಸಂಪುಗಿಯಾ ಬಲನಲ್ಲೀ
ನೆಟ್ಟಲು ಸಂಪುಗಿಯಾ ಬಲುನಲ್ಲೀ ನೆಡುದಾದೇ ॥ ೮೯ ॥

ಅಪ್ಪ ಮನಿ ಗಂಟೀಗೋಲೀದಾರೇ ಬರೂವದೇ
ಗಂಟೀಗೋಲಿ ದಾರೇ ಬರುವಾ ಸಮ್ಯದಲ್ಲೀ ॥ ೯೦ ॥

ಅವ್ರಾರೂ ಇನ್ನೂ ನೋಡಾರು ಕಂಡಿನ್ನು
ಅದ್ ಅವ್ವಾನರುಮನೆಗೇ ಬರುವಾದೇ ॥ ೯೧ ॥

“ಕೇಳು ಕೇಳೇ ದೊಡ್ಡಮ್ಮ, ಕೇಳಾಲೇ ದೊಡ್ಡಮ್ಮ
ದೊರೆಮಗಳೂ ದೊರೆ ಮನಿಗೇ ಬರುವಾದೇ ॥ ೯೨ ॥

ಹಾದೀಗ್ ಹಂದಲುವಿಲ್ಲ ಬೀದಿಗು ಚಪ್ಪರವಿಲ್ಲಾ
ಅದು ಹೇರೂ ಕುದುರೀ ಲದೂಕಿಲ್ಲಾ ॥ ೯೩ ॥

ಅದು ಹೇರೂ ಕುದ್ರಿ ಅದುಕಿಲ್ಲಾ ದೊಡ್ಡಮ್ಮಾ
ಕಂದವೇ ಕಯ್ಯೀ ನಾ ಬಳೆಗೋಳು ॥ ೯೪ ॥

ಕಂದವೇ ಕಯ್ಯಿನಾ ಬಳೆಗೋಳೂ ಮೊಕಬಾಡೀ
ದೊರೆ ಮಗಳು ದೊರೆ ಮನೀಗೇ ಬರುವಾದೇ” ॥ ೯೫ ॥

ಅಣದೀರ್ ಪಗ್ಡ್ಯಾ ಡುಕೇ ಕುಳ್ಪಾ ಸಮ್ಯದಲ್ಲೀ
ತಾಯಲ್ಲೀಗೋಗೀ ನುಡಿದಾದೇ ॥ ೯೬ ॥

“ಹಾದೀಗ್ ಹಂದಲುವಿಲ್ಲ ಬೀದೀಗ್ ಚಪ್ಪರವಿಲ್ಲಾ
ಅದು ಹೇರೂ ಕುದುರೀ ಅದಕಿಲ್ಲ ॥ ೯೭ ॥

ಅದು ಹೇರೂ ಕುದ್ರಿ ಅದುಕಿಲ್ಲಾ ನನುಮಗುನೇ
ದೊರೆ ಮಗ್ಳು ದೊರೆ ಮನಿಗೇ ಬಂತೋ” ಲಂತೂ ॥ ೯೮ ॥

ಮುತ್ನ ಪಲ್ಲಂಕೀ ತಕ್ಕಂಡೂ ಅಣ್ಣಯ್ಯಾ
ತಂಗೀ ನಿಲ್ವಲ್ಲೀ ನೆಡುದಾನೇ ॥ ೯೯ ॥

“ಹಾದೀಗ್ ಹಂದಲುವಿಲ್ಲ ಬೀದೀಗ್ ಚಪ್ಪರವಿಲ್ಲಾ
ನೀನ್ ಹೇರೂ ಕುದುರೀ ನಿನುಗಿಲ್ಲಾ” ॥ ೧೦೦ ॥

“ಹಾದೀಗ್ ಹಂದಲವ್ಯಾಕೋ, ಬೀದಿಗ್ ಚಪ್ಪರವ್ಯಾಕೋ?
ನಾನ್ ಹೇರೂ ಕುದುರೀ ನನಗ್ಯಾಕೋ ॥ ೧೦೧ ॥

ನಾನ್ ಹೇರೂ ಕುದುರಿ ನನಗ್ಯಾಕೋ ಅಣ್ಣಯ್ಯಾ?
ಕಾಲ ದಾರ್ಯಲ್ಲೀ ಬರುವೆನೋ ॥ ೧೦೨ ॥

ತಾಯ್ ಮುತ್ತಿನಾರುತಿ ತಂತು । ತಾಯ್ ತಂಬಿಗಲ್ ಉದಿಕವ ತಂತು
ತಾಯ್ ಕೊಟ್ಟಾ ಲುದಿಕಾ ಬಲಗೈಲಿ ॥ ೧೦೩ ॥

ತಾಯ್ ಕೊಟ್ಟಾಲುದ್ಕ ಬಲಗೈಲಿ ತಕ್ಕಂಡೀ
ಕಾಲೂ ಸಿರಿಮೊಕುವಾ ತೊಳಿದದೇ ॥ ೧೦೪ ॥

ಕಾಲೂ ಸಿರಿಮೊಕುವಾ ತೊಳಿದಾದೇ ಲತುಮವ್ವೀ
ಮಂಚ್ಚದ್ಮೇನೇ ಬಂದೀ ಕುಳುವಾದೇ ॥ ೧೦೫ ॥

"ಆದಾ ಲಡಗ್ಯುಂಟು ಕಾದಾಲೂ ನೀರುಂಟೂ
ದಾಳಾನಾಡುಣ್ಣೀ ದೊರೆಮಗುಳೇ" ॥ ೧೦೬ ॥

"ಆದಾ ಲಡ್ಗಿದ್ದರೇನೂ? ಕಾದಾ ನೀರಿದರೇನೂ?
ನನ್ಗ್ ದಾಲಾ ನಾಡುಂಬೂಕೂ ಮನಸಿಲ್ಲ" ॥ ೧೦೭ ॥

"ಯಾವಾಗ್ ಬಂದ್ಮಗ್ಗಾ ಈ ನಮೂನ್ಯಲ್‌ವಾಗೀತು
ಇದುವೇನೇ ಮಗುಳೇ ವಿಪರೀತ?" ॥ ೧೦೮ ॥

"ಕೇಳೂ ಕೇಳೆ ತಾಯವ್ವಾ, ಕೇಳಾಲೆ ತಾಯವ್ವಾ
ಹೋಗೀ ನಾಗಾಣಿಯಾ ಕರಿಲಾರೇ" ॥ ೧೦೯ ॥

"ನಿಂಗ್ಯಾರ್ ಹೇಳ್ವರೆ ಮಗುಳೆ, ನಿನಗ್ಯಾರು ಕೇಳ್ವರೆ ಮಗುಳೇ?
ನಿನುಗ್ಯಾರೂ ಕುಂದಾ ನುಡಿದವ್ರೇ ॥ ೧೧೦ ॥

ನಿನುಗ್ಯಾರೂ ಕುಂದ ನುಡಿದರೆ ಮಗುಳೇ, ಕೇಳೂ
ಕುಂದೀನಾ ಮಾತಾ ನನುಗೇಳೂ" ॥ ೧೧೧ ॥

"ನಂಗ್ಯಾರ್ ಹೇಳ್ವಾರೆ ತಾಯೇ, ನಂಗ್ಯಾರೂ ಕೇಳ್ವಾರೇ?
ದೇವಾರ್ ಹೇಳಿದಾರೇ ಮನಿಯಲ್ಲೀ" ॥ ೧೧೨ ॥

ಅಟ್ಟಾರೂ ಲಿನ್ನು ನುಡಿದಾದೇ ತಾಯವ್ವೀ
ನಾಗಣೀಲರಮನಿಗೇ ಬರುವಾದೇ ॥ ೧೧೩ ॥

ನಾಗಣೀಲರಮನಿಗೇ ಬಂದೀಯೇನಂಬೂದೇ
"ನಾಗಣೀ" ಲಂದೀ ಕರಿದದೇ ॥ ೧೧೪ ॥

"ವಳಗಿದ್ದಾ ಮಡ್ಡಿ ವಳಗ್ಯೇನಾ ಮಾಡೂತೇ
ಹಣ್ಣಡ್ಕೀ ಹಡಪಾ ಹೆರುಗಿಡೂ" ॥ ೧೧೫ ॥

ದೊಡ್ಡಮ್ಮ ಮುಂದಾಗೀ ನಾಗಾಣಿ ಹಿಂದಾಗೀ
ದೊರ್‌ಯಲರುಮನಿಗೇ ಬರುವರೇ || ೧೧೬ ||

"ಕೇಳ್‌ಕೇಳು ತಾಯವ್ವಾ, ಕೇಳಾಲೇ ತಾಯವ್ವಾ
ಪಡಿಯಕ್ಕೀ ಕಾಯೀ ತಡ್ಡೀ ಬಾರೇ || ೧೧೭ ||

ಪಡಿಯಕ್ಕೀ ಕಾಯ ತಡ್ಡ್ ಬಾರೇ ತಾಯವ್ವಾ
ಯರಡೂ ಕೈಲ್‌ಯೆಯ್ಡೂ ಮಣಿತಾರೇ" || ೧೧೮ ||

"ಹರ ಹರ" ಲಂದಾದೇ "ಶೀಶಿವ" ಲಂದಾದೇ
ತಾಯ್ ಬಿದ್ದ ಬಿದ್ದಾರೂ ಹೊಡ್ಯೇಲಾಡೀ || ೧೧೯ ||

"ನಿನಗ್ಯಾರ್ ಹೇಳ್ವರೆ ಮಗುಳೇ, ನಿನಗ್ಯಾರೂ ಕೇಳ್ವರೆ ಮಗುಳೇ?
ನಿನಗ್ಯಾರೂ ಕುಂದಾ ನುಡಿದಾರೇ || ೧೨೦ ||

ನಿನಗ್ಯಾರೂ ಕುಂದ ನುಡಿದರೆ ಮಗುಳೇ ಕೇಳು
ಕುಂದೀನಾ ಮಾತಾ ನನಗೇಳೇ" || ೧೨೧ ||

"ಯಟ್ಟೂ ಹೇಳಿದ್ರೂ ತೆಳ್ಯವೇನನು ತಾಯೀಗೆ
ನಾನೂ ಇನ್ಯೇಟ್ಟಾ ಹೇಳೂಲಪ್ಪಾ?" || ೧೨೨ ||

ಯೆಯ್ಡೂ ಜನ ಹೋಗೀ ಯೆಯ್ಡ ಮಣಿಮೇನ್ ಕುಂತವ್ರೇ
ಪಡಿಯಕ್ಕೀ ಕಾಯಾ ಇಟ್ಟೇಲವ್ರೇ || ೧೨೩ ||

"ಪನ್ನೀಗೆವು ನಾಗಾಣೀ, ನೀ ಯಾಕೇ ನಡಗೂತೆ
ಪನ್ನೀಗ್ಯೆರುದುಕೇ ಬಯವೇನೂ" || ೧೨೪ ||

ದೊಡ್ಡವರ್ ಹಿಂಡರೂ ದೇವಕೋಳಾ ಮಕ್ಕಳು
ಪನ್ನೆಗ್ಯೆವದುಕೇ ಬಯ ನಮಗೇ" || ೧೨೫ ||

"ದೊಡ್ಡವರ್ ಹಿಂಡರಾದರೇನು? ದೇವ್‌ಕೋಳ್ ಮಕ್ಕಾದ್ರೇನು?
ಪನ್ನೀಗ್ಯೆವದುಕೇ ಬಯವಿಲ್ಲ" || ೧೨೬ ||

ಪನ್ನೀಗ್ಯೆಸ್ಕಂಡದೆ ಕನ್ನಡಿ ಕೈಲ್ ತಡುದದೇ
ತನ್ನಾರೂ ಮೊಕುವಾ ನೋಡೇಲದೇ || ೧೨೭ ||

ದೇವಲೋಕದ ಸತ್ತೂಗೀ ದೇವ್‌ಲೋಕದ ದಂಡೂಗೀ
ದೇವಲೋಕದಾ ನವಲುಯ್ಲಾ ಸೈತವಾಗೀ
ಅತುಮವೀ ಕಣ್ಣೀಗೂ ಹೊಳಿದದೇ ॥ ೧೨೮ ॥

ಅತುಮವಿ ಕಣ್ಣಿಗೂ ಹೊಳ್ವಾ ಸಮ್ಯದಲ್ಲೀ
ಪನ್ನೀ ಮರಿಯಲ್ಲೀ ಮುಗುಳಾ ನೆಗ್ಗೇ ॥ ೧೨೯ ॥

ಕನ್ನಡಿ ತಕ್ಕೊಂಡಾ ನಾಗಾಣಿ ನೋಡಿನ್ನು
ಪಡಿಯಕ್ಕಿ ಕಾಯಿ ತಕಳ್ಳಿಲ್ಲಾ ನಾಗಾಣೀ
ವೋಡೋಗಿ ತನುಮನಿಗೇ ನೆಡುದಾನೆ ॥ ೧೩೦ ॥

"ಯೇಳ್ ಕೊಪ್ಪುಗೆ ನೀರ್ ಕಾಸೆ ತಾಯೆ, ಯೇಳ್ ಕೊಡ್ ಯೆಣ್ಣಿತಾರೇ
ಶೀಗೀಬಾಗೀಯಾ ಲದೀ್ಲ ಬಾರೇ" ॥ ೧೩೧ ॥

"ಯಾವಾಗ್ ಬಂದ್ ಮಗ್ಳು ಈ ನಮೂನ್ಯಲ್ಲಾಗೀತ್ತು
ಇಂದೇನೋ ದೇವಾ ಲಿಪುರೀತಾ ॥ ೧೩೨ ॥

ಇಂದೇನೋ ದೇವಾ ಇಪುರೀತಾ" ಅಂದ್ದೇಳೀ
ತಾಯ್ ಬೀದ್ ಬಿದ್ದಾರೂ ಹೊಡೀಲಾಡೀ ॥ ೧೩೩ ॥

ತಾಯ್ ಬಿದ್ ಬಿದ್ದಾರು ಹೊಡ್ಯಾಡ್ ಯೆದ್ದೇ ಕುಂತೀ
ಶೀಗೀಬಾಗೀಯಾ ತಿರುದೇ ತಂತೂ ॥ ೧೩೪ ॥

ಗೌಡ್ಯರು ಮೀಸೂಕೇ ಕರ್‌ಕಂಡೀ ಲೋಗಾರೇ
ವಂದ್ ಕೊಡ ಯೆಣ್ಣೀ ಬರೂಮಾಡೀ ॥ ೧೩೫ ॥

"ವಂದ್ ಕೊಡುನ್ಯೆಣ್ಣಿ ವಂದು ಕೇಸಿಗೆ ಸಾಲಾ
ಕೇಡೀಗೀ ಕೇಸೂ ನೆರುದಾದೇ ॥ ೧೩೬ ॥

ಯರಡ್ ಕೊಡುನೆಣ್ಣೀ ಯರಡೂ ಕೇಸಿಗೆ ಸಾಲಾ
ಕೇಡೀಗೀ ಕೇಸೂ ನೆರುದಾದೇ ॥ ೧೩೭ ॥

ಮೂರಾ ಕೊಡುನ್ಯಣ್ಣೀ ಮೂರು ಕೇಸಿಗೆ ಸಾಲಾ
ಕೇಡೀಗೀ ಕೇಸೂ ನೆರಿದಾದೇ ॥ ೧೩೮ ॥

ಯೇಳ್ ಕೊಡುನೆಣ್ಣಿ ಹಾಕೀ ಯೇಳ್ ಕೊಪ್ರಗ್ ನೀರನ್ ಮಿಂತೂ
ಸೀಗೀ ಬಾಗೀಯಾ ಗುಡುಸಿನ್ನು ॥ ೧೩೯ ॥

"ನೀನಿಡು ಪಟ್ಟಿಯ ಕೊಡೆ, ನೀನಿಡು ಚಿನ್ನವ ಕೊಡೇ
ನೀನಿಡು ಸರುಬರುಣಾ ಕೊಡೇ ತಾಯೇ" ॥ ೧೪೦ ॥

"ಹರಹರ" ಲಂದಾದೆ "ಸಿವಸೀವ" ಲಂದಾದೇ
ತಾಯ್ ಬಿದ್ದಬಿದ್ದಾರೂ ಹೊಡಿಯಾಡೀ ॥ ೧೪೧ ॥

"ನಿಂಗ್ಯಾರ್ ಹೇಳ್ವರೆ ಮಗ್ಳೆ, ನಿನುಗ್ಯಾರೂ ಕೇಳ್ವರೆ ಮಗುಳೇ?
ನಿನಗ್ಯಾರೂ ಕುಂದಾ ನುಡಿದಾರೇ? ॥ ೧೪೨ ॥

ನಿನಗ್ಯಾರೂ ಕುಂದಾ ನುಡಿದರೆ ಮಗುಳೇ ಕೇಳು
ಕುಂದೀನಾ ಮಾತಾ ನನಗೇಳೇ" ॥ ೧೪೩ ॥

"ಯೆಟ್ಟೂ ಹೇಳಿದ್ರೂ ತೆಳಿಯವೆ ನನು ತಾಯೀಗೇ
ನಾನೂ ಇನ್ನೇಟ್ಟಾ ಹೇಳಾಲಾಪ್ಪಾ?" ॥ ೧೪೪ ॥

ತಾಯುಡು ಪಟ್ಟಿಯ ಕೊಟ್ಟು ತಾಯಿಡು ಚಿನ್ನವ ಕೊಟ್ಟು
ತಾಯಿಡು ಸರುಬರುಣಾ ಕೊಡುವದೆ ॥ ೧೪೫ ॥

ಪಟ್ಟೀ ಉಟ್ಟಾದೇ ಚಿನ್ನಾರೂಲಿಟ್ಟಾದೇ
ತಾಯ್ ಕೊಟ್ಟ ಸರುಬರುಣಾ ಲಿಡುವದೇ ॥ ೧೪೬ ॥

ಮುಂದ್ಲ ಕಡ ಹೊಕ್ಕದೆ ಹಿತ್ಲಕಡೆಗೆ ಹೆರುಬಿದ್ದಾದೇ
ಕ್ಯೇದುಗಿ ಮೂರು ಚೆಳ್ಳಾ ಕೊಯಿದೇ ತಂದೇ ॥ ೧೪೭ ॥

ಕ್ಯೇದುಗಿ ಮೂರು ಚೆಳ್ಳಾ ಕೊಯುತಂದೀ ಲತುಮವ್ವೀ
ಚೆಳ್ಳುಗುರಲಿ ವಾಲೀ ಬರೀದಾದೇ ॥ ೧೪೮ ॥

ತಾಯ್ ಬಳ್ಗಕ್ ವಂದ್ ವಾಲೇ, ತಂದಿ ಬಳ್ಗಕೆ ವಂದೋಲೇ
ಗಂಡ್ನೆ ಬಳ್ಗದೋರೀಗೆ ವಂದೇ ವಾಲೇ ॥ ೧೪೯ ॥

ಗಂಡ್ನ ಬಳ್ಗದೋರೀಗೇ ವಂದೋಲೆ ಸ್ಯೆತವಾಗೀ
ಅತುಮವ್ವೀಲಿನ್ನೂ ಕಳೂಗದೇ ॥ ೧೫೦ ॥

ಅಪ್ಪಯ್ಯಿದ್ದಲ್ಲಿ ನೆಡುದಾದೇ ಲತುಮವ್ವೀ
"ಅಪ್ಪಯ್ಯ"ಲಂದೀ ಕರೀದಾದೇ ॥ ೧೫೧ ॥

“ದೇವಲೋಕ್ನಮಣಿ ಬೇಕು, ದೇವಲೋಕ್ದ ಕೊಳ್ಗಬೇಕು
ದೇವಲೋಕದ ಮಡಿಯೇ ನನುಗೇ ಬೇಕು” || ೧೫೨ ||

“ತೆರಿಯಳುಕ್ ಹೋಗೂ ಮಗಳು ನಿನ್ನೆ ಮೊನ್ನೆ ಹೇಳಿದ್ಯೇ
ನಾ ಇಂದ್ಯೆಲ್ಲಿಂದೇ ತರುಬೇಕೇ?” || ೧೫೩ ||

ಅಣ್ಣಯ್ಯಿದ್ದಲ್ಲಿ ಹೋಗಾದೇ ಲತುಮವ್ವೀ
ಆಗೊಂದಾ ಮಾತಾ ನುಡಿದಾದೇ || ೧೫೪ ||

“ಕೇಳ್ ಕೇಳೊ ಅಣ್ಣಯ್ಯಾ ಕೇಳಾಲೋ ಅಣ್ಣಯ್ಯ
ದೇವಲೋಕದ ಕೂಡುಬಾಳೀ ನನುಗೇ ಬೇಕೋ” || ೧೫೫ ||

“ತೆರಿ ಅಳುಕ್ ಹೋಗು ತಂಗೀ ನಿನ್ನೆ ಮೊನ್ನೆ ಹೇಳೀದ್ಯೇ
ನಾ ಇಂದಿನ್ಯೆಲ್ಲೀ ತರುಬೇಕೇ?” || ೧೫೬ ||

ಅಪ್ಪಾ ಸಂಕರುನಾ ಯೇನೇಳೀ ಶಿವಪೂಜ್ಯೋ
“ನನ್ ತೆರಿ ಅಳುಕ್ ಹೋದ್ ಮಗಳು ತಿರುಗೇ ಬಂದ್ರೆ || ೧೫೭ ||

ತೆರಿ ಅಳುಕ್ ಹೋದ್ ಮಗಳು ಹಿಂತಿರುಗ್ ಬಂದದ್ದಾದ್ರೆ
ಮ್ಯೇನಿದ್ದ ದೇವರಿಗೇ ಹಿಡಿಹೊನ್ನೂ” || ೧೫೮ ||

“ತೆರಿ ಅಳುಕ್ ಹೋದ್ ತಂಗೀ ತಿರಗೇ ಬಂದದ್ದಾದ್ರೇ
ಮ್ಯೇನಿದ ದೇವರಿಗೇ ಹಿಡಿಹೊನ್ನು || ೧೫೯ ||

ಮೇನಿನ ದೇವರಿಗೇ ಹಿಡಿಹೊನ್ನ ಗಂಟ ಕಟ್ಕೊಡುತೇ
ನನ್ ತೆರಿ ಅಳುಕ್ ಹೋದ್ ತಂಗೀ ತಿರುಗೇ ಬಂದ್ರೆ” || ೧೬೦ ||

ಆಚ್ಯೋಳ್ ಜನ ಅಣುದೀರು ಈಚ್ ಯೇಳ್ ಜನ ಅತ್ತುಗುದೀರು
ತಾಯೀ ತಂದೆ ಮಗಳೂ ನೆಡುಗೇ ಕುಂತೀ || ೧೬೧ ||

ತಾಯೀ ತಂದೆ ಮಗಳು ನೆಡ್ಗ ಕುಂತೂಟಾ ಮಾಡ್ವಾಗೇ
“ಆಚೆ ನೋಡಣ್ಣಯ್ಯಾ” ಅನುತಾದೇ || ೧೬೨ ||

“ಆಚೆ ನೋಡ”ಂತದೆ “ಈಚ್ ನೋಡೂ” ಅಂತಾದೇ
ಜನ್ಕ ವನ್ನಂದ್ ತುತ್ತಾ ಬಾಚಾಕ್ತಾದೇ || ೧೬೩ ||

ಜನ್ಕವನ್ನಂದ್ ತುತ್ತಾ ಬಾಚಾಕು ಸಮ್ಯದಲ್ಲೀ
ಅದ್ರೊಳ್ಗ್ ವಂದ್ ಅತ್ಗೀ ನೋಡೇ ಬಿಟ್ಟು || ೧೬೪ ||

“ಕೇಳ್ ಕೇಳೆ ಲತ್ಯಮ್ಮ, ಕೇಳಾಲೇಲತ್ಯಮ್ಮ
‘ಆಚೀಗೆ ಲೀಚೀಗೆ ನೋಡೇ’ಲಂತದೇ ॥ ೧೬೫ ॥

‘ಆಚೀಗೆ ಈಚೀಗೇ ನೋಡ’ಂತದೆ ಲತ್ತೂಗೇ’
ಜನ್ಕ್ ವನ್ನಂದ ತುತ್ತೂ ಬಾಚ್ ಹಾಕ್ತಾದೇ ॥ ೧೬೬ ॥

ಜನ್ಕ ವಂದಂದ್ ತುತ್ತ ಬಾಚಾಕ್ತದೆ ಅತ್ತೂಗೆ
ತಾನೂಲೂಟಾನೇ ಮಾಡೂದಿಲ್ಲಾ” ॥ ೧೬೭ ॥

“ಹರಹರ” ಲಂತದೇ “ಶಿವಶಿವಾ” ಲಂತದೇ
ತಾಯ್ ಬಿದ್ ಬಿದ್ದಾರೂ ಹೊಡಿಯಾಡೀ ॥ ೧೬೮ ॥

ತಾಯ್ ಬಿದ್ ಬಿದ್ದಾರೂ ಹೊಡ್ಯಾಡೀಯೆದ್ ಕುಂತೀ
“ನಿನುಗ್ಯಾರೂ ಕುಂದಾ ನುಡಿದಾರೇ? ॥ ೧೬೯ ॥

ನಿನುಗ್ಯಾರೂ ಕುಂದ ನುಡಿದರೆ ಮಗುಳೇ, ಹೇಳು
ಕುಂದೀನಾ ಮಾತಾ ನನುಗೇಳೂ” ॥ ೧೭೦ ॥

“ಅವ್ನ ಮನಿಗೋಗೂವೇ ತುಪ್ಪಾಗಾರುಂಬೂವೇ
ಅಲ್ಲೊಂದು ಮನುಸಾ ಯಣುಸೂವೇ ॥ ೧೭೧ ॥

ಅಲ್ಲೊಂದು ಮನ್ಸಾ ಯಣುಸೂವೇ ಯಲುನಾರೀ
ಅನ್ನಕು ಸುಣ್ಣಾಕೂ ಪರತವೇ ॥ ೧೭೨ ॥

ಅನ್ನಕು ಸುಣ್ಣಾಕು ಪರತಾನು ಕಟಿಕಂಡೀ
ನನ್ನಾರೂಲಿನ್ನು ಕಳುಗವ್ರೇ ॥ ೧೭೩ ॥

‘ಅಣ್ಣ ಮನಿಗೋಗೂವೇ ಯೆಣ್ಣಿಗಾರುಂಬೂವೇ
ಅಲ್ಲೊಂದಾ ಮನ್ಸಾ ಯೆಣಿಸುವೇ ॥ ೧೭೪ ॥

ಅಲ್ಲೊಂದಾ ಮನ್ಸಾ ಯೆಣಿಸೂವೇ ಯಲುನಾರೀ
ಅನ್ನಕು ಸುಣ್ಣಾಕೂ ಪರತವೇ ॥ ೧೭೫ ॥

ಅನ್ನಕು ಸುಣ್ಣಾಕೂ ಪರುತಾನೇ ಕಟ್ಟಿನ್ನು
ನೀ ಅಣ್ಣ ಮನಿಗೋಗೀ ಬರುಬೌದೇ” ॥ ೧೭೬ ॥

ತಾಯ್ ಕಯ್ಯ್ಯಾರೂ ಕುಡಗೀ ಕಯ್‌ಬಾಯಾ ತೊಳುದಾದೇ
ಹಾಲ ಕರುವಲ್ಲೀ ನೆಡುದದೇ ॥ ೧೭೭ ॥

ಹಾಲನು ಕರುತಂತೂ ಸಕ್ಕರೆ ಬಾಳೀಹಣ್ಣ ತಂತೂ
ಮಗಳಿಗೂ ಲಿನ್ನೂ ಕೊಡುವದೇ ॥ ೧೭೮ ॥

ನೊರಿಹಾಲ ಕುಡುದಾದೇ ಸಕ್ರೀ ಬಾಳೀಹಣ್ಣ ತಿಂದೀ
ಲತುಮವಿ ಇನ್ನಾರೂ ತಯ್ಯ್ಯಾರಾಯ್ತು ॥ ೧೭೯ ॥

ತಾಯ್ ಬಳ್ಗದ್ ವಂದ್ ಸಾವ್ರಾ, ತಂದಿ ಬಳಗ್ ವಂದ್ ಸಾವ್ರಾ,
ಗಂಡನ ಬಳಗದವ್ರು ಲಯನೂರು ॥ ೧೮೦ ॥

ಗಂಡ್ನ ಬಳಗ್ದೋರೂ ಐನೂರೇ ಸೈತವಾಗೀ
ಹಣ್ಣೀನಾ ಮುಟ್ಟೀ ಹದುನಾರೂ ॥ ೧೮೧ ॥

ಹಣ್ಣೀನಾ ಮುಟ್ಟೀ ಹದ್ನಾರೇ ಸೈತವಾಗೀ
ಅತುಮವಿ ಬೆನ್ನೀಗೂ ಬರುವಾರೇ ॥ ೧೮೨ ॥

"ಕೇಳ್ ಕೇಳೋ ಅಣ್ಣಯ್ಯಾ, ಕೇಳಲೋ ಅಣ್ಣಯ್ಯಾ
ತಾಯಿ ತಂದಿ ತಕಂಡೋಗಿ ವಳುಗಾಕು ॥ ೧೮೩ ॥

ತಾಯಿ ತಂದ್ ತಕಂಡೋಗಿ ವಳೂಗಾಕ್ ಕದವನೆ ಜಡಿಯೋ"
ಲಂದೇಳೀಲಿನ್ನು ನುಡಿದಾದೇ ॥ ೧೮೪ ॥

"ಬೆನ್ನಿಗೆ ಬರುವರು ಸುಮ್ಮನೆ ಬನ್ನೀರಪ್ಪಾ
ತೀಡುತೆಲಳ್ಳೂತೇ ಬರೂಬೇಡಿ" ॥ ೧೮೫ ॥

ಸಮುದ್ರಕಾರೂ ಇನ್ನಾರೂ ನೆಡುದದೆ ಅತುಮವೀ
ದೇವಲೋಕದ ಮಡಿಯೇ ಉಟ್ಟೇಲಾದೇ ॥ ೧೮೬ ॥

ಮಡಿಯೇ ಲುಟ್ಟಾದೇ ಮಣಿಯಾರೂ ಇಟ್ಟಾದೇ
ದೇವ್‌ಲೋಕದ ಕೊಡುಬಾಳೀ ಇರೂಸಾದೇ ॥ ೧೮೭ ॥

ದೇವ್‌ಲೋಕದ ಕೊಡುಬಾಳೀ ಇರುಸಾದೇ ಲತುಮವ್ವೀ
ದೇವ್ ಲೋಕದ ಕೊಳೂಗಾ ಇರುಸೂದೇ ॥ ೧೮೮ ॥

ಹಣ್ಣೀನಾ ಮುಟ್ಟೀ ಹದಿನಾರೇ ಹರುಗಾದೇ
ಕಾಯೊಡುದೀ ಕಯ್ಯಾ ಮುಗಿದಾದೇ ॥ ೧೮೯ ॥

ಕಾಯೊಡುದೀ ಕಯ್ಯಾ ಮುಗಿದಾದೇ ಲತುಮವ್ವೀ
ಕರಿದಂಬೂ ಕೊಳುಗಾ ಅಳುದಾದೇ ॥ ೧೯೦ ॥

ವಂದಂಬೂ ಕೊಳೂಗಾ ಅಳೀದಾದೇ ಲತುಮವ್ವೀ
ಯರ್ಡಂಬೂ ಕೊಳುಗಾ ಅಳಿದಾದೇ ॥ ೧೯೧ ॥

ಯರ್ಡಂಬು ಕೊಳ್ಗ ಅಳೀದಾದೆ ಅತುಮವ್ವೀ
ಮೂರಂಬೂ ಕೊಳೂಗಾ ಅರಕೊಳೂಗಾ ॥ ೧೯೨ ॥

ಮೂರಂಬೂ ಕೊಳ್ಗ ಅರುಕೊಳುಗಾಗೂ ತನಕಾ
ಅತ್ತೀಮರನೋಗೀ ಮರಸಾರೀ ॥ ೧೯೩ ॥

ಅತ್ತೀಮರನೋಗೀ ಮರಸಾರಿ ನೋಡೂತನಕಾ
ಸತ್ತುಗಿ ದಂಡೂರೀ ಕಾಣೂದಿಲ್ಲಾ ॥ ೧೯೪ ॥

"ಆಸ್ರಕೆ ಬಂದೊರಿಗೇ ಆಸ್ರಾನೇ ಕೊಟ್ಟೀದೆ
ಬಾಯರುಕೇ ಸಕ್ಕರಿ ಹೊಡಾಲಿಲ್ಲಾ ॥ ೧೯೫ ॥

ಹಸ್ವಗಿ ಬಂದರಿಗೇ ಮೊಸ್ರನ್ನಾಲಿಕ್ಕೀದೇ
ಉಪ್ಪಾನಾರುಲಿನ್ನೇ ಕೊಡಲಿಲ್ಲಾ ॥ ೧೯೬ ॥

ಇದ್ಯೆರಡಾತಪ್ಪಾ ಮಾಡೇಲಿದ್ದೇ
ಇದ್ಯೆರಡು ತಪ್ಪಾ ಮಾಡೀದೇ ಕನ್ನ್ಯೇರಾ ॥ ೧೯೭ ॥
ನಿಂದೀ ಕೇಳಿ ನೀವೂ ತಳದಲ್ಲೀ
ನಿಂದೀ ಕೇಳಿ ನಿಮ್ಮ ತಳದಲ್ಲೀ" ಲಂದೇಳಿ ॥ ೧೯೮ ॥

ಕನ್ನೀಯೊರಿಗ್ ಕಯ್ಯಾ ಮುಗಿದದೇ
ಅಟ್ಟಾರೂಲಿನ್ನೇ ಹೇಳೂ ಕೇಳೂ ತನಕಾ ॥ ೧೯೯ ॥

ದೇವ್‌ಲೋಕುದ ಸತ್ತುಗಿ ಬರೂವಾದೇ
ಸತ್ತುಗಿ ಹತ್ತಾದೇ ದಂಡುಗಿಮೇನ್ ಕುಂತಾದೇ ॥ ೨೦೦ ॥

ನವ್ವ ಉಯ್ಯಾಲ ಮೇನೇ ಕುಳೂವದೇ
ತೆರಿ ಅಳೂಕ್ ಹೋದ್ ತಂಗೀ ತೆಗುದೇ ಬಂದ್ರು ಲಂದೇಳಿ ॥ ೨೦೧ ॥

ಶರಿಬಂಟ್ರು ಕುಡೆ ನೆಗಿಮಾಡ್ಸಕಂಡ್ "ತಂಗಮ್ಮ
ಹೋಗೂರೊಳ್ಗೆ ಹೇಗೇ ಇರಬೇಕೇ?" ॥ ೨೦೨ ॥

"ಕದ್ದಾ ಕಳುವಲ್ಲಾ ಮಾಡೀದ್ ಹಾದರವಲ್ಲಾ
ಸುಳ್ಳಾ ಗಾತಾಕಾತನವಲ್ಲ ॥ ೨೦೩ ॥

ಸುಳ್ಳಾ ಗಾತಾಕಾತನವಲ್ಲೋ ಅಣ್ಣಯ್ಯಾ
ಹೋಗ್ ನೀವೂರೊಳಗೆ ಇರಬೌದು" ॥ ೨೦೪ ॥

"ಕೇಳ್ ಕೇಳ ಅತ್ತೀಗೆ ಕೇಳಾಲೇ ಲತ್ತೀಗೇ
ತೆರಿ ಅಳುಕ್ ಹೋದ್ ಅತ್ತುಗಿ ತೆಗುದೆ ಬಂದಂದೇಳಿ ॥ ೨೦೫ ॥

ಶೆರುಗೆಣತೀರ್ ಕೂಡೆ ನೆಗೆಮಾಡೀ
ಶೆರುಗೆಣತೀರ್ ಕೂಡೆ ನೆಗು ಮಾಡಿ ಲತ್ತೀಗೇ ॥ ೨೦೬ ॥

ಹೋಗೂರೊಳಗ್ಯಾಗೇ ಲಿರಬೇಕೇ?
ಕದ್ದಾ ಕಳವಲ್ಲಾ ಮಾಡೀದ್ ಹಾದರವಲ್ಲಾ ॥ ೨೦೭ ॥

ಸುಳ್ಳಾಗಾತಾಕಾತನಾ ವಲ್ಲಾ
ಸುಳ್ಳಾ ಗಾತಾಕಾತನವಲ್ಲಾ ಲತ್ತೀಗೇ ॥ ೨೦೮ ॥

ಹೋಗ್ ನೀಮೂರೊಳಗೇ ಲಿರಬೌದು"
"ಕೇಳ್ ಕೇಳಣ್ಣಯ್ಯಾ, ನಾನೊಂದ್ ಮಾತ ಹೇಳೂತೇ ॥ ೨೦೯ ॥

ನಂದುಗಿ ಕಾಲಿನಾ ಕಿರಿತಮ್ಮಾ
ನಂದುಗಿ ಕಾಲಿನಾ ಕಿರಿತಮ್ಮಾ ನೋಡಿನ್ನೂ ॥ ೨೧೦ ॥

ನನ್ನಾ ಹಂಬಲವಾ ಮರಿರಪ್ಪಾ"
ಅಟ್ಟೊಂದು ಮಾತಾ ಅತುಮವ್ ಹೇಳೂತನಕೇ ॥ ೨೧೧ ॥

ದೊರಿರಾಯ ಬಂದಿನ್ಯೇನಾ ನುಡೀದಾನೇ
"ಪೆಟ್ಟುಗಿ ವಳಗೀನಾ ಪಟ್ಟೇಯಾ ಸೀರೀಯಾ ॥ ೨೧೨ ॥

ತೆಕ್ಕೊಡಿರೀ ನನ್ನಾ ಮಡುದೀಗೇ
ತೆಕ್ಕೊಡಿರೋ ನನ್ನ ಮಡುದೀಲುಟ್ಟೇಕಂಡೀ ॥ ೨೧೩ ॥

ತನ್ನವಡನಾರೂ ಬರಲ"ಂದಾ
"ಪೆಟ್ಟುಗ್ಯೊಳಗಿನ ಪಟ್ಟೇಯ ಸೀರೀಯಾ ॥ ೨೧೪ ॥

ತೆಕ್ಕೊಡೋ ನಿನ್ನಾ ಗವಡ್ಯರೀಗೇ
ತೆಕ್ಕೊಡೋ ನಿನ್ನಾ ಗೌಡೀ ರುಟ್ಟು ಕಂಡೀ ॥ ೨೧೫ ॥

ನಿನ್ನ ವಡುನಾರೂ ಇರು"ಲಂತು
"ಜುಟ್ಟುಗ್ಯೊಳಗಿನ ಪುತ್ತು ಸರವಾನೇ ॥ ೨೧೬ ॥

ತೆಕ್ಕೊಡಿರೋ ನನ್ನಾ ಮಡುದೀಗೇ
ತೆಕ್ಕೊಡಿರೋ ನನ ಮಡದೀ ಮೋವದ ಬೊಂಬೆ ॥ ೨೧೭ ॥

ಇಟ್ಟೀ ನನ್ ವಡನೇ ಬರಲ"ಂದಾ
"ಪೆಟ್ಟುಗ್ಯೊಳಗೀನ ಪುತ್ತುಳಿ ಸರವನೇ ॥ ೨೧೮ ॥

ತೆಕ್ಕೊಡೋ ನಿನ್ನ ಗವಡ್ಯರಿಗೇ
ತೆಕ್ಕೊಡೋ ನಿನ್ನ ಗೌಡೀರಿಟ್ಟಿಕಂಡೀ ॥ ೨೧೯ ॥

ನಿನ್ನ ವಡನಾರೂ ಇರುಲ"ಂತು
"ತೆರಿಯಳುಕ್ ಹೋದ್ ಮಡದೀ ತಿರಗೇ ಬಂದ್ದಾದ್ರೇ ॥ ೨೨೦ ॥

ಮುಕ್ ಚೂರೀಲಿ ಕೊರಳ ಕೊರುದೇಕಂಬೇ"
"ನಿತ್ತರು ದೇವರು ನಿತ್ತಾಗಿರು"ಲಂತು ॥ ೨೨೧ ॥

"ಮಾಯಿನ ಮರುವಾಗೀ ಬೆಳೀ"ಲಂತು । ಲತುಮವ್ವೀ
ತೋರಣಕ್ಕೈದು ತೆರುಳ ಮುರುದೇತರಲಿ ॥ ೨೨೨ ॥

ತೋರಣಕ್ಕೈದು ತರುಳಾ ಮುರುತರುಲಿ" ಲಂದ್ ಹೇಳ್ತು
ಹೋಗ್ ಹೋಗ್ಯೊರ್ ಯೆಡೆಡ್ ಬಡತಿಗೀ ಹೊಡುದೇ ಹೋಗ್ಲಿ ॥ ೨೨೩ ॥

ಮತ್ ಮುಂದ್ರುಸ ಹೋಗದೇ ಮತ್ ಹಿಂತಿರ್ಗಿ ನಿತ್ತಾದೇ
ಆಗ ವಂದಾ ಮನುಸಾ ಯೆಣುಸೂದೇ ॥ ೨೨೪ ॥

ಮತ್ ತಿರ್‌ಗತ್ತಾರೂ ಇನ್ನೇನ ಹೇಳದ್ಯೇ
"ನಾನಂತೂ ಈಗಾಕೋಗೀ ನನ್ ಪುರ್ಸಾನ ಇಂತಾ ಕಟ್ಟಲ್ಲಿಟ್ಟೀ ॥ ೨೨೫ ॥

ನಾ ಈಗಾಕೋದಾ ಫಲವೇನು?
ನಿತ್ತ ದ್ಯಾವರೂ ನಿತ್ತಾಗಿರಲಂ"ತು ॥ ೨೨೬ ॥

"ಅಸ್ವತ್ತಮರನಾಗೀ ಬೆಳೀಲಂ"ತೂ ಲತುಮವ್ವೀ
"ಹಾರಹೈಗರ ಪೂಜೇ ನೆಡೀಲಂ"ತೂ || ೨೨೭ ||

"ನಿಂಬೀ ಹಣ್ಣಂತಾ ರಂಬ್ಯೋರ್ ಹೆಣುಮಕ್ಕಳು
ಜೋಡಿಂದೀ ಹಾಡಾ ಹೇಳಬೇಕು || ೨೨೮ ||

ಈ ಹಾಡ್ ಹೇಳ್ದರಿಗೇ ಶರುದೆನಿ ಕೊಟ್ಟೋರೀಗೂ
ಆದೀಗೋಕನುದಾ ಶಿವಗಂಗೇ (ಗೀ) ತೀರಿತವಾ
ಹೋಗ್ ಮಿಂದ್ ಬಂದಟ್ಟು ಫಲವುಂಟು || ೨೨೯ ||

● **ಕೆಲವು ಪದಗಳ ವಿವರಣೆ**

| | | |
|---|---|---|
| ಪತುರತಿ, ಪತುವರತಿ | = | ಪತಿವ್ರತೆ |
| ನಲ್ಲ | = | ಗಂಡ, ಪುರುಸ |
| ವದಿಗಾದೆ | = | ಬಂದಳು |
| ವಗದಿ | = | ಎಳೆದು |
| ಹೊಯುದಾದೆ | = | ಸುರಿದಳು |
| ತಡುದಾ | = | ಹಿಡಿದ |
| ಆಂತ್ರಟಕಿ | = | ಮಾಡಗುಳಿ |
| ನಾಗೂರಾ | = | ನಾಗರ, ಸರ್ಪ |
| ಚವಳ | = | ಚೇಳು |
| ಮನುಸಾ | = | ಮನುಷ್ಯ |
| ಯೆಣ್ಣು | = | ವಿಚಾರ ಮಾಡು, ಎಣಿಸು |
| ಲಾಯರ | = | ಆಹಾರ |
| ತಳ | = | ಸ್ಥಳ |
| ಪರತಾ | = | ಶಪಥ |
| ಗಂಟಿಗೋಲು | = | ಹಸುಗಳು |
| ಹೇರೂ | = | ಹತ್ತುವ |
| ತಡ್ಡೀ | = | ಹಿಡಿದುಕೊಂಡು |
| ತೆಳ್ಯ | = | ಏನೂ ತಿಳಿಯುವದಿಲ್ಲ |
| ಪನ್ನಿ | = | ಕ್ಷೌರ |
| ಸರುಬರಣಾ | = | ಎಲ್ಲಾ ಆಭರಣಗಳು |
| ಬಾಯರುಕೆ | = | ಬಾಯಾಡುವದಕ್ಕೆ |
| ಮೋವ | = | ಮೇಣ |
| ತರುಳು | = | ರೆಂಬೆ, ಕೊಂಬೆ |
| ಹಾರ ಹೈಗರು | = | ಬ್ರಾಹ್ಮಣರು |
| ಶರುದೆನಿ | = | ಜೊತೆಯಲ್ಲಿ ಹಾಡುವರು |
| ಆದಿಗೋಕನು | = | ಆದಿ ಗೋಕರ್ಣ |

■ ಹೇಳಿದವರು: **ಬೆಳಿಯಮ್ಮ ಪುಟ್ಟ ನಾಯ್ಕ.**

# ೧೩. ಬಕ್ಕನ ಬಾರಿ

ವಂದಲ್ಲ ವಂದು ದಿವ್ಸೆ ತಂದೆ ನಾನಾ
ಕುಂತೀಯು ದೇವಿಯು
ಐದು ಜನ ಹುಡುಗರುಟ್ಟು
"ವಳ್ಳೆ ನಾಮಕರ್ಣ ಮಾಡಿ" ಅಂತು ॥ ೧ ॥

"ಚಂದದಿಂದ ನಾಮಕರಣ ಮಾಡಿ" ಅಂತು
"ಯಾವಾವ ಹುಡುಗರಿಗೆ
ಯಾವ ಹೆಸ್ರ ಇಡಬೇಕು?"
"ಹೆರ್ಯವರಿಗೆ ಸ್ವಾಮೀ ॥ ೨ ॥

ಧರ್ಮ ಎಂದು ಹೆಸರಿಡಿ
ಯರ್‌ಡನೆ ಹುಡುಗಗೆ
ಭೀಮನೆಂದು ಹೆಸರಿಡಿ
ಮೂರನೆಯವನಿಗೆ ॥ ೩ ॥

ಅರ್ಜುನೆಂದು ಹೆಸರಿಸಿ
ನಾಕನೆಯವನಿಗೆ
ನಕಲನೆಂದೂ ಹೆಸರಿಡಿ
ಐದನೆ ಹುಡುಗಗೆ ॥ ೪ ॥

ಸಾ ದೇವನೆಂದು ಹೆಸರಿಡಿ"
ಹೆರ್ಯವನ ಕರೆದಳು

"ನೀ ಯಾವ ಕೆಲ್ಸ ಮಾಡುತೀಯೋ"
"ನಾ ದೇವ್ರ ಪೂಜಿಗಿರುತೇನೇ" ॥ ೫ ॥

ಬೀಮನ ಕೇಳಿತು
"ನಾ ಬಕ್ನ ಬಾರಿಗೋಗುತೇನೆ"
ಅರ್ಜುನ್ನಾರು ಕೇಳಿತು
"ನಾ ಕೆಂದಳಿ ಹೂಗೀಗ್ ಹೋಗುತೇನೇ" ॥ ೬ ॥

ನಕ್ಲಾ ಸಾದೇವರ್ ಕೇಳ್ತು
"ನಾವು ಹೂವು ತೊಳಶಿ ಕೊಯ್ಯುತೇವೆ"
"ವಳ್ಳ ಕೆಂದಾಳಿ ಹೂಗಿಗೆ
ಹೋಗಲು ಬರುತೀರೋ" ॥ ೭ ॥

ಭೀಮನಾ ಕೇಳಿದರೂ
"ತಾನೂ ಹೋಗಿ ಬರ್ತೇ"ನಂದಾ
ಅರ್ಜುನ್ನ ಕೇಳಿದರು
"ತಾನೂ ಹೋಗಿ ಬರ್ತೇ"ನಂದಾ ॥ ೮ ॥

ಒಳ್ಳ ರೊಟ್ಟಿ ಬುತ್ತಿ ಕಟ್ಟಿತು
ಮಕ್ಕಳಿಗೆ ಬಡಿಸಿ ಕೊಟ್ಟಿತು
ಊರನ ನಾರಿಯೋರು
ಕೆಂದಾಳಿ ಹೂಗಿಗ್ ಹೋಗು ಮುನ್ನ ॥ ೯ ॥

ಮರ್ಕುತಾರೆ ತೀಡುತಾರೆ
ನೆಡ್ದಾಲು ಬುಟ್ಟರು
ಅರ್ಜುನ್ನಾರು ನಡೆದನೆಯೇ
ಆದೀಯ ಶೇಷನಲ್ಲಿ ॥ ೧೦ ॥

ಭೀಮನಾರು ಇಟ್ಟವ್ನೆ
ತಾನಾರೂ ಮುಂದೆ ಹೋದ
ಅಲ್ಲಿ ಗಿಡಕ್ಕೊಂದು ವೀಶ್ಯದ ಪ್ರಾಣಿ
ತನ್ನ್ ಕೈಲಿ ಆಗ ಎಂದು ॥ ೧೧ ॥

ಅಣ್ಣನ ಕರ್ಯಬಿಟ್ಟನ್ಯೊ
ಭೀಮನು ನೆಡೆದನೆಯೇ
ದಾಟಿ ದಾಟಿ ಮುಂದೆ ಹೋದ
ಮರವನಾರೂ ನೋಡಿದ ॥ ೧೨ ॥

ವಂದು ಸಾರೆ ಅಲುಗ್ಸೀದ
ಈಸದ ಹಾವಿಗ್ ಕೆಡುಗಿದ್ದ
"ಹೂಗನಾರೂ ಕೋಯ್ಯ"ಂದ
ಹಿಂತಿರುಗಿ ಬಂದರೆಯೋ ॥ ೧೩ ॥

ಅಲ್ಲಿ ಮಾವ್ನ ಮನೆಯಿತ್ತು
ಕರದಲು ಕಂಡರು
"ನೀವ್ ಯಾವೂರ್ ಹುಡುಗರು?
ಯಾವವ್ರಿಗ್ ಹುಟ್ಟಿದ್ದೀರಿ?" ॥ ೧೪ ॥

"ಕೆಂದಾಳಿ ಹೂವಿಗೆ
ಹೋಗಿ ಯಾರು ಬಂದರು?"
"ನನ್ನ ಹೆಸ್ರು ಭೀಮ" ಎಂದ
"ತಾನು ಅರ್ಜುನ ಸ್ವಾಮಿ ॥ ೧೫ ॥

ಧರ್ಮನೆಂಬ ಅಣ್ಣನು
ಮನೆಯಲ್ಲಿ ಇದ್ದಾನೆ
ನಕುಲ ಸಾದೇವರೆಲ್ಲ
ನನ್ನ ತಮ್ಮದಿಕ್ಕಳು ॥ ೧೬ ॥

ಹೂಗೂ ತೊಳ್ಕಿ ಕೊಯ್ಯುತಾರೆ
ವಳ್ಳೆ  ದೇವ್ರ ಪೂಜೆ ಮಾಡುತಾರೆ"
"ಊಟಕ್ಕಾರು ಇರಬೇಕು"
ಎಂದೇಳಿ ಹೇಳಿದರು ॥ ೧೭ ॥

"ಭೀಮಗೆ ಅಡಗಿಯನ್ನು
ಹತ್ತು ಕಂಡ್ಲ ಅಕ್ಕಿ ಬೇಕು
ಹತ್ತು ಚೂಳಿ ಕಾಯಿಬೇಕು

ಇರುವಲ್ಲಿ ಅಡ್ಡಿಲ್ಲ"
"ಎಲ್ಲ ನಾವು ಮಾಡುತಾರೆ ॥ ೧೮ ॥

ಊಟ ಮಾಡಿ ಹೋಗಬೇಕು"
ಮೀವುಕಾರು ಕರೆದರು
"ಮೂರು ಹಂಡಿ ನೀರಯೆತ್ತಿ
ವಂದು ಹಾಡು ಯೆಣ್ಣೆ ತನ್ನಿ" ॥ ೧೯ ॥

ಮೀವುಕಾರು ಹೋಗುತಾನೆ
ಅಷ್ಟೆಲ್ಲ ಮಾಡಿದರು ಬಚ್ಲಗಾರು ನಡೆದರು
ವಂದು ಹಂಡಿ ಹೆಗ್ಲಿಗಾಯ್ತು
ಮತ್ತೊಂದು ಹಂಡಿ ಹಿಡಿದನೆಯೆ ॥ ೨೦ ॥

ಮತ್ತೊಂದು ಹೆಗ್ಲಗ್ ಹೊಯ್ದನೆಯೆ
ತಲ್ಯಲ್ಲಿ ವಂದ್ ಅರವಿ
ಮಿಂದಾರು ಮುಗುದೀತು
ದೇವ ಪೂಜಿಗ್ ಬಂದುನೆ ॥ ೨೧ ॥

ಏಳ ಮನ್ಯ ಮಾಡಿಗ್ ಕಯ್ ಹಾಕದೆ
ವಂದು ಸಾರೆ ವಗೆದಿದ
ಮಲ್ಗಿ ಹೂಗ್ನ ರಾಶಿ ಬಿತ್ತು
ಊಟಕಾರು ನಡೆದರೆಯೊ ॥ ೨೨ ॥

ತಮ್ಮನೊಡನೆ ಕೂತಿದ್ದ
ಹಾಕಿದನ್ನ ಕರ್ಚು ಆಯ್ತು
ಇನ್ನೂ ಅದ್ರು ತೇಗು ಇಲ್ಲ
ತಾಯಿ ಕಟ್ಟಿದ ಬುತ್ತಿ ॥ ೨೩ ॥

ಶಣ್ಣ ಚೂರು ಇದ್ದಿತು
ತಮ್ಮ ವಗೆದಿ ಬಿಟ್ಟನು
ತೇಗು ಹೊಡ್ಡಿ ಯೆದ್ದಿ ಬಂದಾ
ಬಂದಾರು ಕೂತರೆ ॥ ೨೪ ॥

“ಮನೆಗಾರು ಹೋಗಬೇಕು”
“ಹಾಗೇ ಮನೇಗ್ ಹೋಗುದಲ್ಲ
ವಂದ ಹುಡ್ಗಿ ಕೊಡುತೇನೆ”
“ತನಗೇನು ಬೇಡ” ಅಂದ ॥ ೨೫ ॥

“ತಮ್ಮ ಮದುವ್ಯಾಗು” ಅಂದ
ವಳ್ಳ  ಮದ್ವಿಗಿದ್ವಿ ಲಾಗಿತು
ಮನೆಗಾರು ಬರುವಾಗ ॥ ೨೬ ॥

ಕುದ್ರಿ ಟಾಂಗ ಕೊಟ್ಟರೆ
ಗಾಡಿಗೀಡಿ ಮಾಡ್ಯಾರೆ
“ಅದೊಂದೂ ತನ್ಗೆ ಬೇಡ”
“ತಮ್ಮನ ಕೈಲಿ ಕುಳ್ಳು”ವೆಂದ ॥ ೨೭ ॥

“ನಾ ನೆಡ್ದೇಯ ಹೋಗುತೇನೆ”
ಅಂದ್ಯಾದ್ರು ಹೇಳಿದ
ಅವ್ರು ಕೇಳದಿದ್ದೆ ಈಗೆ ಮಂಚಾಲಾರು ಮಡ್ಸವ್ರೆ
ವಂದು ಕಾಲು ಇಟ್ಟಿದ ॥ ೨೮ ॥

ಮೂರು ಭಾಗ ಆಗಿತು
ದಾರಿ ಹಿಡದಿ ಮನಿಗೆ ಬಂದ
ತಮ್ಮನ್ ನೆಂಟರೆಲ್ಲ ಬಂದ್ರು
ಮನ್ಯ ಸಮೀಪಕೆ ಬಂದನ್ಯೆ ॥ ೨೯ ॥

“ತಾಯೆ” ಹೇಳಿ ಕರೆದಿದ್ದ
ಕೆಂದಳಿ ಹೂಂಗ ನಾವು ತಂದ್ರು
ಯೇನೇನ ಮಾಡಿದ್ದೀಯೇ?”
ಧರ್ಮನ ಕರೆದರು ॥ ೩೦ ॥

“ಯಾರ್ಗ್ ಕೊಡು ಹೂಗಿದು?”
ಅಂದಾರು ಕೇಳಿದ
“ಪುರೊಯ್ಸ ಬಟ್ರಿಗ್ ಕೊಟ್ಟಿಕಂಡಿ
ಯಾರ್ಯಾರಿಗ್ ಕೊಡಬೇಕು?” ॥ ೩೧ ॥

ಧರ್ಮನ್ಗ್ ಕೈಲಿ ಹೇಳಿದರು
"ದೇವ ಪೂಜೆಗ್ ಇಡೋ ಅದು"
ವಂದಲ್ಲ ವಂದುದಿವ್ಸೆ
ಬಟ್ರಮನಿಗ್ ಹೋಗಿತು || ೩೨ ||

ಬಟ್ಟರು ಕರೆದೀತು
"ಯೆಲ್ಲೆಲ್ಲಿಗೋಗಿದ್ರು?
ಕೇಳು ಕೇಳು ಕುಂತಿದೇವಿ,
ನಾಳೆಗೊಂದು ಬಕ್ಕನ ಬಾರಿ || ೩೩ ||

ಮನ್ಯಲ್ ಮಗನಾ ಮದ್ವೆಯೇಳ್ಸಿ
ನಾನು ಯೇನ್ ಮಾಡಬೇಕೇ?"
"ಅದ್ಕೆಲ್ಲ ಹೆದ್ರಬೇಡಿ
ನನ್ಗೆ ಐದ ಜನ ಮಕ್ಕಳವ್ರೆ || ೩೪ ||

ಭೀಮನ ಕಳುಗೂವೆ
ನೀವ್ ಬಕ್ಕನ ಬಾರಿಗ್ ತಯ್ಯಾರ್ ಮಾಡಿ"
ಕುಂತಿ ದೇವಿ ಮನಿಗ ಬಂತು
ಭೀಮನಾರು ಕರದಿತು || ೩೫ ||

"ನೀ ಹೊಟ್ಟೆ ತುಂಬು ಉಳ್ಳಕ್ಕು
ಬಟ್ರ ಮನಿಗ್ ನೀನು ಹೋಗು
ಹತ್ತು ಖಂಡ್ಲ ಅಕ್ಕಿ ಅನ್ನ
ಕುಂಬ್ಳಕಾಯ ಕಡಿತವಯ್ರೋ || ೩೬ ||

ಗಾಡೀ ಹೊಡ್ಕಂಡ್ ಹೋಗಬೇಕು
ಬಕ್ಕಾನ ಸೋಲ್ಸಬೇಕು"
"ಅಗೋದ ತಾಯಿ" ಅಂದಾನೆ
ಓಡೋಡಿ ನಡೆದನೆಯೇ || ೩೭ ||

ಬಟ್ರ ಮನಿಗೆ ಹೋಗಿ ಮುಟ್ದ
ಯೆಲ್ಲಾವ ಬಂಡಿ ತುಂಬ್‌ದ್ರು

ಬಂಡಿ ಮೇಲೆ ಕೂತಿಕಂಡ
ಬಕ್ನ ಕರೆಯುತ್ತ ಬಂಡಿ ತಂದ ॥ ೩೮ ॥

"ಬಾರೋ ಬಕ್ಕಾ" ಯೆನುತಾನೆ
ಎಂದು ತುತ್ತಾ ತಿಂತಾನೇ
ಬಕ್ಕಾ ಬಂದಿ ಎಳೆದಾಡ್ತ
ಇಬ್ಬರೂನೂ ಗುದ್ದಾಡ್ತ್ರು ॥ ೩೯ ॥

ಬಕ್ಕ ಬಂಡಿ ಮೇನೆ ಬಿದ್ದ
ಭೀಮ ಸಿಗ್ದಿ ಒಳಗೆ ಇಟ್ಟ
ಬಟ್ರ ಮನಿಗೆ ಹೊಡೆದನೆಯೆ
ಬಟ್ಟರೊಳ್ಳ "ಸಾಬಾಸ"ಂದ್ರು ॥ ೪೦ ॥

**● ಕೆಲವು ಪದಗಳ ವಿವರಣೆ**

| | | |
|---|---|---|
| ಒಳ್ಳ | = | ಒಳ್ಳೆಯ |
| ವಿಶ್ಯ, ಈಸ | = | ವಿಷ |
| ಹೂಂಗ | = | ಹೂವು |
| ಉಳ್ಳಕ್ಕು | = | ಊಟ ಮಾಡಬಹುದು |
| ಕರೆಯುತ್ತೈದನೇ | = | ಕರೆಯುತ್ತ ಹೋದನು |

■ ಹೇಳಿದವರು : **ದಿ. ಬೆಳಿಯಮ್ಮ, ವೆಂಕಟ್ರಮಣ ಮಡಿವಾಳ,** ೨೩-೧೦-೧೯೭೨

# ೧೪. ಉತ್ತರ ದೇವಿ

"ನೀರಿಗೋಗುತೆ ಲತ್ತೇಽ ನಿಜವಳ ಗುಽಡ್ಡಿಗೇಽ
ತಡ್ವಾದರೇ ನೀನೂ ಬಯುಬೇಡಾಽಽ ಸುವ್ವೇ ॥ ೧ ॥

ನೀರ ಕಳಕುದೂಽ ಗಿಳಿಯಾ ನೆರಿಽ ಹಯ್ದುದು ಗಿಳಿಯು
ಇಟ್ಟಽ ಸಿರಿಮುಡಿಯಾ ಲಳೂಗುದೋ ಸುವ್ವೇ ॥ ೨ ॥

ಇಟ್ಟಽ ಸಿರಿಮುಡಿಯಾ ಅಳುಗೂಽ ದತ್ತೇಯಮ್ಮ
ಹಣಿಬೇಕಾಽ ನೀಽರಾ ಮೊಗಿಬೇಕೇ ಸುವ್ವೇ ॥ ೩ ॥

"ನೀರೀಗೋದಾ ಸೊಸಿಯೆಽ ಇಟ್ಟೊತೇಽಕಾಽಗಿತೇ?
ಯಾರು ಬಂದೀ ನಿನ್ನಾ ತಽಡುದಽರೇ?" ಸುವ್ವೇ ॥ ೪ ॥

ನೀರ್ಽ ತಽಕ್ಕಂಡೀ ತಾನಾರು ಬಽರುವಾಽಗೇ
ಮದ ಸೊಕ್ಕಿದಾಽ ನೀ ಯದುರಾಗಿ ಸುವ್ವೇ ॥ ೫ ॥

ಮದ ಸೊಕ್ಕಿದಾಽ ನೀ ಯದುರಾಗತ್ತಿಽಯಮ್ಮಾ
ಬಾಳೀಽ ಮುಳ್ಳಲ್ಲೀಽ ಅಽಡೂಗೀನೆ" ಸುವ್ವೇ ॥ ೬ ॥

"ಬಾಳೀಗೆ ಮುಳ್ಳುಂಟೆ? ಬಸುಳೀಗೆ ಕೆಂಚುಂಟೆ?
ನಾರೀ ನಿನ್ನಽ ಮಾತು ನಿಜವುಂಟೇ?" ಸುವ್ವೇ ॥ ೭ ॥

"ನನ್ನಂಗಿರವಗೆ ಅತ್ತೇಽ ನೀ ನೀರಿಗೋಗ್ವಾಗೇ
ನಿನ್ಯಾರೂ ಬಂಽದೀಽ ತಽಡುದರೇ?" ಸುವ್ವೇ ॥ ೮ ॥

ಅತ್ತಿ ಸೊಸಿಯೂ ಕೂಡಿ ಸ್ಯೇಲೇಮಂಚಾಽ ಹೂಡೀ
ನಿತ್ತೀಽಕಾಽದರೆಯೇ ಕಽತುಽನಽವಽ ಸುವ್ವೇ || ೯ ||

ಅಟ್ಟಾರೂ ಲಿನ್ನೂ ಹೇಳೂ ಕೇಳು ತನಕಾ
ಕೇಳೂತೆ ಬಂದಾ ಅದ್ರಽ ಮಽಗಽ ಸುವ್ವೇ || ೧೦ ||

“ಕೇಳ್ ಕೇಳೊ ಮಗನೇಽ ಕೇಳಲೊ ಮಗುನೇ
ನನ್ಗೆಲ್ಲುಽತ್ತಿಽ ರವಾ ಕೊಡುವಽದೊ ಸುವ್ವೇ || ೧೧ ||

ನನ್ಗೆಲ್ಲುಽತ್ತಿಽರವಾ ಕೊಡೂದು ಮಗನೆ ಕೇಳೂಽ
ಬಿಟ್ಟೀ ಬೀಡದರಾ ತೌಽರಿಗೆ” ಸುವ್ವೇ || ೧೨ ||

“ಬಿಟ್ಟು ಬಿಡೂವಾಕೇ ಯತ್ತು ಕಽತ್ತಿಯಲ್ಲಾ
ಇಪ್ಪತ್ತೊಽಂದ್ ವರನಾ ತಿರ ಮಡದೀ ಸುವ್ವೇ || ೧೩ ||

ಇಪ್ಪತ್ತೊಽಂದ್ ವರವಾ ತಿರ ಕೊಟ್ಟಿ ತಂದಾ ಮಡದೀ
ಬಿಟ್ಟು ಬಿಡುಽವದೂ ತರುಽವಲ್ಲ” ಸುವ್ವೇ || ೧೪ ||

ಅಟ್ಟಾರೂ ಲಿನ್ನೂ ಕೇಳು ಕೇಳುವಾಽಗೆ
ಕೇಳುತೆ ಬಂದಾ ಅಽದುರಣ್ಣಽ ಸುವ್ವೇ || ೧೫ ||

ಬಳ್ಳಿಗೇ ಕಾಯೀಽ ಹೊರ್‌ಯಲ್ಲ ನಽನು ಬಾವಾ,
ನನ್ ತಂಗಿಽನಽ ಸುಽಮನಿಗೆ ಕಽಳುಗಿಽಸೋ” ಸುವ್ವೇ || ೧೬ ||

ಮಾಳೂಗೀ ವಳಗೆ ನೆಡ್ಡಽ ದುತ್ರದೇವಿ
ಬೆಳ್ಳಿ ಕೊಽಡಽ ಕರಗೀ ತೆಡೀದ್‌ಽದೆ ಸುವ್ವೇ || ೧೭ ||

ಬೆಳ್ಳಿ ಕೊಽಡಽ ಕರಗೀ ತಡ್ಡಽ ದುತ್ರದೇವೀ
ಸಿಂಗಾರಾಽ ಬನಕೂ ನೆಽಡೂದದೇ ಸುವ್ವೇ || ೧೮ ||

ಅಲ್ಲೊಂದ್ ಕೊಽಡ ನೀರಾ ಯರ್ದ ದುತ್ರದೇವೀ
ಅಲ್ಲೊಂದ್ ಕೊನಿ ಹುಂಗಾ ಕೊಯ್ದಿರಿಸದೆ ಸುವ್ವೇ || ೧೯ ||

“ಕೇಳ್ ಕೇಳೇ ಹಿಂಗಾರ್ ಮರವೇ, ಕೇಳು ನೀನು
ನಾ ಹೋತೇ ನನ್ನ ತೌರೀಗೇ” ಸುವ್ವೇ || ೨೦ ||

“ನೀನು ಹೋದಽರಮ್ಮಾ ನೀರ್ಯಾರ್ಯೆಽರಿವಽರೇ?
ಹೂಂಗಾಽದಽರೆ ಯಾರೂ ಮುಡಿವಽರೆ? ಸುವ್ವೇ ॥ ೨೧ ॥

ನೀರಽ ಯರುವಽಕೇ ಅತ್ಯಮ್ಲೈದಽದೇ
ಹೂಂಗಾಽ ದಽರೆಽಲಽಽದೂ ಮುಡಿವಽದು” ಸುವ್ವೇ ॥ ೨೨ ॥

ಅಲ್ಲೇಯ ಬೇಲಿಽ ಜಡ್ಡಽದ್ದ್ ಉತ್ರದೇವೀ
ಕ್ಯಾದುಗೀ ಬನಕೂ ನೆಽಡಿಽದದೆ ಸುವ್ವೇ ॥ ೨೩ ॥

ಮಾಳೂಗೀ ಹೆರಗೇ ಬರ್ವದ್ ಉತ್ರದೇವೀ
ಗೆದ್ದಿಯಾಽ ಗಿನ್ನೂ ನೆಽಡುಽದದೆ ಸುವ್ವೇ ॥ ೨೪ ॥

“ಉದ್ನ ಗೆಽದ್ದಿಲ ತಿದ್ದ್ ಹೂಡೂ ಬಾಽಮ್ನೋರೇ
ನನ್ ಯೆತ್ನ ಜಽತ್ತುಗಿಯಾಽ ಸೊಗುದೆಬ್ಬಿ ಸುವ್ವೇ ॥ ೨೫ ॥

ಯೆತ್ನ ಜೊತ್ತುಗಿಯಾ ಸೊಗುದ್ಯೆಬ್ಬಿ ಬಾಽವ್ನೋರೆ
ನಾ ಹೋಽಗ್ತೇ ನನ್ನಾ ತೌಽರೀಗೆ” ಸುವ್ವೇ ॥ ೨೬ ॥

“ಇಂದ್ ಹೋದಾ ಮೈದ್ನೀ, ಯೆಂದಿಗೆ ಬರವಿಯೇ?”
“ಕತ್ತೆ ಹೂಡೀ ಬತ್ತಾ ಬೆಳುವಾಗೆ” ಸುವ್ವೇ ॥ ೨೭ ॥

“ಕತ್ತೆ ಹೂಡೂಕಿಲ್ಲಾ ಬತ್ತಾ ಬೆಳ್ವಾಽಕಿಲ್ಲಾಽ
ಇಂದ್ ಹೋದ್ ಮೈದುನೀ ಬರೂಕಿಲ್ಲಾ” ಸುವ್ವೇ ॥ ೨೮ ॥

ಮುಂದಿನ ಗೆಽದ್ದಿಲಿ ಮುಂದೆ ಹೂಡು ಮಾಽವ್ನೋರೆ,
ನನ್ ಯೆತ್ತನ ಜೊಽತ್ತುಗಿಯಾ ಸೊಗುದ್ಯೆಬ್ಬಿ ಸುವ್ವೇ ॥ ೨೯ ॥

ನನ್ ಯೆತ್ನ ಜೊಽತ್ತುಗಿಯಾ ಸೊಗ್ದೆಬ್ಬಿ ಮಾಽವ್ನೋರೇ
ನಾ ಹೋಽಗ್ತೇ ನನ್ನ ತೌರೀಗೆ” ಸುವ್ವೇ ॥ ೩೦ ॥

“ಇಂದ್ ಹೋದಾ ಸೊಸ್ಯೇ, ಯೆಂದಿಗೆ ಬರುವೀಯೇ?”
“ಕತ್ತೆ ಹೂಡೀ ಬತ್ತಾ ಬೆಽಳುವಾಗೆ” ಸುವ್ವೇ ॥ ೩೧ ॥

“ಕತ್ತೆ ಹೂಡೂಕಿಲ್ಲಾ ಬತ್ತಾಽ ಬೆಽಳೂಕಿಲ್ಲಾ
ಇಂದ್ಽಲ ಹೋದಾ ಸೊಸ್ಯೇ ಬಽರುಕಿಲ್ಲ” ಸುವ್ವೇ ॥ ೩೨ ॥

"ಮೂಲಿऽ ಗೆऽದ್ದೀಲಿ ಮುಂದ್ ಹೂಡೂ ಮೈऽದಿನಾ
ನನ್ ಯೆತ್ನ ಜೋऽತ್ತುಗಿಯಾ ಸೊಗುದ್ಯೆಬ್ಬು ಸುವ್ವೇ ॥ ೩೩ ॥

ನನ್ ಯೆತ್ನ ಜೋऽತ್ತುಗಿಯಾ ಸೊಗ್ದೆಬ್ಬು ಮೈऽದಿನಾ,
ನಾ ಹೋಗ್ತೇ ನನ್ನಾ ತೌऽರೀಗೆ ಸುವ್ವೇ ॥ ೩೪ ॥

"ಇಂದ ಹೋದ ಅತ್ತೀ ಯೆಂದೀಗ್ ಬऽರುವಿऽಯೇ?"
"ಕತ್ತೆ ಹೂಡೀ ಬತ್ತಾ ಬೆಳುವಾಗೆ" ಸುವ್ವೇ ॥ ೩೫ ॥

"ಕತ್ತೆ ಹೂಡುಕಿಲ್ಲಾ ಬತ್ತಾ ಬೆऽಳೂಕಿಲ್ಲಾ
ಇಂದ್ ಹೋದ ಅऽತ್ತುಗಿ ಬರುऽಕಿಲ್ಲಾ" ಸುವ್ವೇ ॥ ೩೬ ॥

"ದ್ಯಾವರ್ಗೆದ್ದೀಲಿ, ಮುಂದ್ ಹೂಡೂ ದ್ಯೇವರೇ
ನಾ ಹೋಗ್ತೇ ನನ್ನ ತೌऽರಿಗೆ" ಸುವ್ವೇ ॥ ೩೭ ॥

ಹಂಡऽ ಹುಂಡೀನ್ಯೆತ್ತು ಗೊಂಡಿ ಬಾಲऽದೆತ್ತು
ಜೋಡಿಲ್ಯೆರುಡೆತ್ತಾ ಬಿಟ್ ಹೋಗ್ತೆ ಸುವ್ವೇ ॥ ೩೮ ॥

ಜೋಡಿಲ್ಯೆರುಡೆತ್ತಾ ಬಿಟ್ ಹೋಗ್ತೆ ದ್ಯೇऽವರೇ
ಅದರೊಳಗೇ ನೀವೂ ತೆರುದುऽಣ್ಣಿ" ಸುವ್ವೇ ॥ ೩೯ ॥

ಅಟ್ಟಾರೂ ಲಿನ್ನೂ ನುಡ್ಡದದುತ್ರದೇವೀ
ತನ್ನಾऽಲऽ ರಮನಿಗೂ ನೆಡುऽವऽದೆ ಸುವ್ವೇ ॥ ೪೦ ॥

ತನ್ನಾऽಲऽ ರಮನಿಗೂ ನೆಡುದದುತ್ರದೇವೀ
ಮೆಟ್ಟಿ ಮೆऽಟ್ಟದ್ಯೆ ಮೆಟ್ಟುದಂऽಡ ಸುವ್ವೇ ॥ ೪೧ ॥

ಮೆಟ್ಟಿ ಮೆऽಟ್ಟದ್ಯೆ ಮೆಟ್ಟುದಂಡೆ ಉತ್ರದೇವೀ
ಮಾಳುಗೀ ವಳಗೆऽ ನೆऽಡಿದದೆ ಸುವ್ವೇ ॥ ೪೨ ॥

ಮಾಳುಗೀ ವಳಗೇ ನೆಡ್ಡऽ ದುತ್ರऽದೇವೀ
ನೆತ್ತಿ ತುಂಬ್ ಯೇಣ್ಣೀ ಯೆರುऽ ಕಂಡ್ತು ಸುವ್ವೇ ॥ ೪೩ ॥

ನೆತ್ತಿ ತುಂऽಬ್ ಯೇಣ್ಣೀ ಯೆರ್ದದುತ್ರದೇವೀ
ಬಳ್ಳಾಳ ನಂಬೂऽ ಬಗುऽತಲೆ ಸುವ್ವೇ ॥ ೪೪ ॥

ಬಳ್ಳಾಳ ನಂಬೂ ಬಗ್ತಲಿ ತೆಗುದಿನ್ನು
ಬಾಚಿ ಕಽಟ್ಟದ್ಯೇ ಸಿರಿಽ ಮುಡಿಽ ಸುವ್ವೇ || ೪೫ ||

ಬಾಚಿ ಕಽಟ್ಟದ್ಯೇ ಸಿರಿಽಮುದ್ಯುತ್ರದೇವೀ
ಹೂಗಂಬೂಽ ಹೂಂಗಾಽ ಮುಽಡಽದಽದೆ ಸುವ್ವೇ || ೪೬ ||

ಹೂಂಗಂಬೂಽ ಹೂಂಗಾಽ ಮುಡ್ದಾಽದುತ್ರದೇವೀ
ರಾಜಂಽಗಽಳ, ಮೆಟ್ಟಾ ಇಽಳಿಽದಽದೆ, ಸುವ್ವೇ || ೪೭ ||

ರಾಜಂಽಗಽಳ ಮೆಟ್ಟಾ ಇಳೀದದುತ್ರದೇವೀ
ಅತ್ತೆ ಲಂಽಬಽದೂ ಯೇನೂ ಹೇಽಳದ್ಯೆ? ಸುವ್ವೇ || ೪೮ ||

“ಶಿಕ್ದ ಮೇನೀನಾ ಕಂಚೇಲುಪ್ಪಿನಕಾಯಾ
ನೀನುಣ್ಣೆ ಬಾರೇ ಸೊಽಸೆಮುದ್ದೆಽ” ಸುವ್ವೇ || ೪೯ ||

ಶಿಕ್ಕದ ಮೇನೀನಾ ಕಂಚೇಲುಪ್ಪಿನಕಾಯಾ
ನೀನುಣ್ಣೇ ನಿನ್ನಾ ಮಽಗಽಗಿಕ್ಕ್ಯಽಽ ಸುವ್ವೇ || ೫೦ ||

ಶಿಕ್ಕದ ಮೇನೀನಾ ನಿಂಬೀಲುಪ್ಪಿನಕಾಯಾ
ನೀನುಣ್ಣೆ ಬಾರೇ ಸೊಽಸೆಮುದ್ದೆಽ” ಸುವ್ವೆ || ೫೧ ||

ಶಿಕ್ಕದ ಮೇನೀನಾ ನಿಂಬೀಲುಪ್ಪಿನಕಾಯಾ
ನೀನುಣ್ಣೇ ನಿನ್ನಾ ಮಽಗಽಗಿಕ್ಕು ಸುವ್ವೆ || ೫೨ ||

ಹರ್ವಿಲ್ ಬಳ್ಸುಲತ್ತೇಽ ಮಣ್ ಹರ್ ವಿಲ್ ಬಳ್ಸೀಲತ್ತೇಽ
ನಾನ್ ಹೋತ್ತೇ ನನ್ನಾ ತೌಽರೀಗೆ ಸುವ್ವೇ || ೫೩ ||

ಕೊಡ್ ಪಾನ್ದಲ್ ಬಳ್ಸುಲತ್ತೇ ಮಣ್ ಕೊಡ್ನಲ್ ಬಳ್ಸೀಲತ್ತೇ
ನಾನ್ ಹೋಗ್ತೇ ನನ್ನಾ ತೌಽರೀಗೆ ಸುವ್ವೇ || ೫೪ ||

ಚಂಬಲ್ ಬಳ್ಸುಲತ್ತೇಽ ಮಣ್ ಮೊಗಿಲ್ ಬಳ್ಸೀಲತ್ತೇ
ನಾನ್ ಹೋಗ್ತೇ ನನ್ನ ತೌಽರೀಗೆ ಸುವ್ವೇ || ೫೫ ||

ತುಪ್ಪನ್ನ ಉಂಬುಲತ್ತೇ, ಉಪ್ಪನ್ನ ಉಽಣ್ಣತ್ತೇ
ನಾನ್ ಹೋಗ್ತೇ ನನ್ನಾ ತೌಽರೀಗೆ ಸುವ್ವೇ || ೫೬ ||

ಮೊಸ್ರನ್ನುಂಬು ಅತ್ತೇ, ಕೆಸ್ರನ್ನ ಉಣ್ಣತ್ತೇ
ನಾನ್ ಹೋಗ್ತೇ ನನ್ನಾ ತೌರೀಗೆ ಸುವ್ವೇ || ೫೭ ||

ಹಾಲನ್ನ ಉಂಬತ್ತೇ, ಹೇಲನ್ನ ಉಣ್ಣತ್ತೇ,
ನಾನ್ ಹೋಗ್ತೇ ನನ್ನಾ ತೌರೀಗೆ ಸುವ್ವೇ || ೫೮ ||

ಅಟ್ಟಾರೂ ಇನ್ನೇ ಹೇಳದುತ್ರದೇವೀ
ಬಿದ್ದ ಮಾರಿಗಾವಾ ಹಿಡಿದದೆ ಸುವ್ವೇ || ೫೯ ||

ಉತ್ರದೇವೀ ಬಳೂವಳಿ ಕಿತ್ತೆದ್ ಬರುವಾಗೇ
ಗುತ್ತೀನಾಡರಸೂ ತಡಿದನೇ ಸುವ್ವೇ || ೬೦ ||

"ಗುತ್ತೀನಾಡರಸೂ ನನ್ನೆಂತ ತಡೀತೀಯೋ?
ನನ್ ಅಪ್ಪಮಲ್ಲಿ ಕೊಟ್ಟಾ ಬಳುವಳಿ ಸುವ್ವೇ || ೬೧ ||

ನನ್ ಅಪ್ಪಮಲ್ಲಿ ಕೊಟ್ಟಾ ಬಳುವಳಿ ಬರೂವಾಗೇ
ಕತ್ತಿ ಮಗ ನೀನೂ ತೊಲುಗಾಚೆ" ಸುವ್ವೇ || ೬೨ ||

ಉತ್ರದೇವಿ ಬಳುವಳಿ ಕಿತ್ತೆದ್ ಬರುವಾಗೇ
ಗೋವಿನಾಡರಸೂ ತಡಿದನೆ ಸುವ್ವೇ || ೬೩ ||

ಗೋವಿನಾಡರಸೂ ನನ್ಯಂತಾ ತಡೀತೀಯೋ?
ನನ್ ಅಪ್ಪಮಲ್ಲಿ ಕೊಟ್ಟಾ ಬಳುವಳಿ ಸುವ್ವೇ || ೬೪ ||

ನನ್ ಅಪ್ಪಮಲ್ಲಿ ಕೊಟ್ಟಾ ಬಳ್ವಳಿ ಬರುವಾಗೇ
ಕತ್ತಿಯ ಮಗ್ನೇ ತೋಲುಗಾಚೆ" ಸುವ್ವೇ || ೬೫ ||

ಮಗ್ಳು ಬರು ಬರವಾ ತಾಯರೂ ನೋಡುವಾದೆ
ತಂಬೂಗಿಲಿ ನೀರಾ ತರುವದೆ ಸುವ್ವೇ || ೬೬ ||

ತಂಬ್ಗೀಲ್ ಉದ್ಕಾತಂತೂ ತಾಯ್ ಮುತ್ತಿನಾರುತಿ ತಂತೂ
ತಾಯ್ ಕೊಟ್ಟಾ ನೀರಾ ಬಲುಗೈಲ್ಲಿ ಸುವ್ವೇ || ೬೭ ||

ತಾಯ್ ಕೊಟ್ಟಾ ಉದ್ಕಾ ಬಲುಗೈಲ್ಲಿ ತಡುಕಂಡಿ
ಕಾಲೂ ಸಿರಿ ಮೊಕವಾ ತೊಳಿವದೆ ಸುವ್ವೇ || ೬೮ ||

ಕಾಲು ಸಿಽರಿ ಮೊಕವಾ ತೊಳ್ದಽ ದುತ್ರಽದೇವೀ
ಮಂಚ್ದ ಮೇನ್ ಹೋಽಗಿ ಕುಳುವಽದೆ ಸುವ್ವೇ || ೧೯ ||

ಮಡ್ಡಿ ಇನ್ನು ಹೋಽಗೀ ನಾಕೆಂಟು ದಿನುದಲ್ಲೀ
ಪುರಿಸ ಹೋಽಡಿಗೊಳಿಗಾರೆ ನೆಽಡೂದನೆ ಸುವ್ವೇ || ೨೦ ||

“ಹೋಽಡಿಗೋಽಳಿಽಯಲ್ಲೀ ಹೊಡ್ಯಾಡು ಬಾಽವಯ್ಯಾ
ನನ್ನ ಮಡುದಿ ನಿನ್ನಾ ಮಽನಿಯಲ್ಲಿ ಸುವ್ವೇ || ೨೧ ||

ಪಟ್ಟೀ ಉಟ್ಟಾಳೆ ಬಾವಾಽ ಸಾಜನ್ ಬಟ್ಟು ಇಟ್ಟದ್ಯೋ
ಕೊನ್ಯಾ ಹಿಂಽಗರವಾ ಮುಽಡಽದಾಳೊ ಸುವ್ವೇ || ೨೨ ||

ಕೊನ್ಯಾ ಹಿಂಽಗರವಾ ಮುಽಡಽದಾಳೋ ಬಾಽವಯ್ಯಾ
ಪರುರಽ ತೋಽಳೀನಲ್ಲೀಽಽ ವಽರುಗದೆ” ಸುವ್ವೇ || ೨೩ ||

ಅಟ್ಟಾರೂ ಲಿನ್ನೂ ಹೇಳ ಕೇಳಿ ಕಂಡು
ಮಾವಽನಽರ ಮನೆಗೆ ನೆಽಡಿಽದನೆ, ಸುವ್ವೇ || ೨೪ ||

ಪುರಿಸ ಬಽರುಽವಽದಾ, ಅಟ್ ದೂರೆ ನೋಽಡಽದೆ
ತಡದ ತಂಽಬುಗಿಲಿ ಉದಿಽಕಽವ ಸುವ್ವೇ || ೨೫ ||

ತಂಬ್ಗಿಲಿ ಉದ್ಕ್ ತಂತೂ ಮುತ್ತೀನಾರತಿ ತಂತೂ
ಮಡ್ಡ ಕೊಟ್ಟಾ ಉದಿಕಾ ಬಽಲುಗ್ಯೆಲಿಽ ಸುವ್ವೇ || ೨೬ ||

ಮಡ್ಡ ಕೂಟ್ಟಾ ಉದಿಕಾ ಬಲಗ್ಯೆಲಿ ತಽಡಽಕಂಡು
ಕಾಲೂ ಸೀಽರಿಽ ಮೊಕವಾ ತೊಽಳಿದನೆ ಸುವ್ವೇ || ೨೭ ||

ಕಾಲೂ ಸಿರಿ ಮೊಕ್ವಾ ತೊಳ್ದನೆ ಪುಽರಿಽಸಾಽನೂ
ಮಂಚ್ದ ಮೇನ್ ಹೋಽಗೀ ಕುಳುಽವಽನೆ ಸುವ್ವೇ || ೨೮ ||

ಹಾಲೂ ಹಣ್ಣು ಕೊಟ್ಟೂಽ ಅಸ್ರುಕ್ ಹಾಽಲಽ ಕೊಟ್ಟೂ
ಆಗೊಂದ್ ಮಾತಾ ನುಽಡಿಽದಽದೆ ಸುವ್ವೇ || ೨೯ ||

“ಹಂಡ ಹುಂಡಿನ್ಯೆತ್ತು ಗೊಂಡೆಽ ಬಾಽಲಽದೆತ್ತು
ಜೋಽಡೀಲ್ಯೇಽರೂಡೆತ್ತಾ ಬಿಽಟ್ ಬಂದೆ ಸುವ್ವೇ || ೩೦ ||

ಜೋಡೀಲ್ಯೇಽರೂಡೆತ್ತಾ ಬಿಟ್ ಬಂದೆ ದ್ಯೇವರೇ
ಅದ್ರೊಳ್ಗೇ ನೀವೂ ತೆರ್ದೆ ಉಣ್ಣಿ ಸುವ್ವೇ || ೮೧ ||

ಅದ್ರೊಳ್ಗೇ ನೀವೂ ತೆರ್ದುಣ್ಣಿ ದ್ಯೇಽವರೇ
ಇಲ್ಲಿಗೇ ನೀವೂ ಬಽರುಽವವರೇ" ಸುವ್ವೇ || ೮೨ ||

● **ಕೆಲವು ಪದಗಳ ವಿವರಣೆ**

| | | |
|---|---|---|
| ವರನಾ, ವರವಾ | = | ವರಹ, ಹಣ |
| ಕತುನ | = | ಜಗಳ |
| ಜಡ್ಡದೆ | = | ಜಡಿಯಿತು, ಇಟ್ಟಿತು |
| ತರುವಲ್ಲ | = | ಸರಿಯಲ್ಲ |
| ಜತ್ತುಗಿ | = | ಜೋಡಿ |
| ಕರಗಿ | = | ಚಂಬು |
| ದ್ಯೇವರೆ | = | ಗಂಡನಿಗೆ ಸಂಬೋಧನೆ |
| ಮೆಟ್ಟೆ, ಮೆಟ್ಟು | = | (ಹೂವಿನ ದಂಡೆ) ಕಟ್ಟಿದಳು |
| ಮಣ್ | = | ಮಣ್ಣು |
| ಇಕ್ಕು | = | ಕೊಡು |
| ತಡಕಂಡು | = | ಹಿಡಿದುಕೊಂಡು |
| ಶಿಕ್ಕ | = | ಪಾತ್ರೆಗಳನ್ನು ತೂಗುಹಾಕುವ ತೂಗುಹಗ್ಗ |
| ಹೊಡಿಗೋಳಿ | = | ಹೊಡೆದಾಡುವ ರಂಗ; ಕವಣೆ ಕಲ್ಲುಗಳು ಮೂಲಕ ದೀಪಾವಳಿಯಲ್ಲಿ ಹೊಡೆದಾಡುವ ಕ್ರಮ ಆ ರಂಗ. |

**Note:** ಉತ್ತರದೇವಿ ಸಿಂಗಾರ ಮತ್ತು ಕೇದಿಗೆ ಬನದಂತೆ ಮಲ್ಲಿಗೆ, ಜಾಜಿ, ಸಂಪಿಗೆ ಬನಗಳಿಗೆ ಹೋಗಿ ಅವುಗಳಿಗೆ ನೀರೆರೆದು, ಅದೇ ರೀತಿ ಸಂಭಾಷಣೆ ಮಾಡಿ (ಇಲ್ಲಿ ಹೂಗಳ ಬದಲಿಗೆ ಕಾಯಿ-ಹಣ್ಣುಗಳ ಉಲ್ಲೇಖ ಬಂದಿದೆ.) ಕೊಟ್ಟಿಗೆಗೆ ಹೋಗುತ್ತಾಳೆ. ಅಲ್ಲಿ ಕರೆವ ದನಗಳು ನೂರು, ಕರೆಯದಿದ್ದ ದನಗಳು ನೂರು, ಕರೆದು ಮುಗಿದವು ಐನೂರು ಇದ್ದವು. ಅದರಂತೆಯೇ ಎಮ್ಮೆಗಳೂ ಇದ್ದವು. ಅದರಂತೆ ಬಳಸಿದೆ ಹರಿವೆ, ಚರಿಗೆ, ಚಂಬು, ಕೊಡಗಳು ಅದೇ ರೀತಿಯಲ್ಲಿದ್ದವು ("ನೀವಟ್ಟೂ ಸವುನೇಳಿ ತೌರಿಗೆ..." ಎಂದು ಹೇಳಿ, ಅವುಗಳೊಡನೆಗೆ ತೊರಿಗೆ ಹೋಗುತ್ತಾಳೆ.).

■ ಹೇಳಿದವರು : **ಗೌರಿ ಮಂಜು ಜೋಗಿ,** ಹೆರೂರು

# ೧೫. ಕುಸುಮಾಲಿ

ಸುಕವಂತ ಲರುಸು ಕಾಲೇರಿಲಿನ್ನೇ ಕರುದನೆಯೋ ಕರುದೀಲೇನಂಬೂವಾ ?
ಚದುರಂಗಿದ್ದಲ್ಲಿ ಹೋಗಿ ಬಾರೋ ತಾನಾ ॥ ೧ ॥

"ಸಣ್ಣಾಕಿರುವಾಗೇ ಚಿಕ್ಕೊಕ್ಕಳು ಮಡುದ್ಯಂದಿ
ಅಡವೀಲೊಂದರುಮನಿಯಾ ಕಟ್ಟಿದುರೋ ತಾನಾ ॥ ೨ ॥

ನಾನೂ ಅವ್ರ ಕೂಡೆ ಬರುದಿಲವೋ
ಅವ್ ಕೂಡೆನೇ ಬರುಕೇಳಿ" ತಾನಾ ॥ ೩ ॥

ಅಟ್ಟಂಬೂ ಮಾತಾ ಕೇಳಿದನು ಕಾಲೇರಿ
ಹಿಂತಿರುಗಿ ಮನಿಗೆಯ ಬರುತಾನೆಯೋ ತಾನಾ ॥ ೪ ॥

"ಯೇನಂತೋ ಕಾಲೇರೀ ಯೆಂತಂತೋ ಕಾಲೇರೀ
ಅಂದ ಕಾರಣವಾ ತನಗೆ ಹೇಳೂ" ತಾನಾ ॥ ೫ ॥

"ಸಣ್ಣಾಕಿರಬೇಕಾದ್ರೆ ಚಿಕ್ಕೊಕ್ಕಳ ಮಡದ್ಯೆಂದು
ಅಡವೀ ಲೊಂದರು ಮನಿಯಾ ಕಟ್ಟಿದ್ರೂ ಲಂದೇಳೀ
ನಿಮು ಕೂಡೆ ಲವ್ರು ಬರುಕ್ ಹೇಳಾರೇ" ತಾನಾ ॥ ೬ ॥

ಅಟ್ಟಂಬು ಮಾತಾ ಕೇಳರೆಯೋ ಲರ್ಸ್‌ಗೋಳೂ
ಮೀವುಕೆ ಲಾಗಿನ್ನೇ ನೆಡದರೆಯೋ ತಾನಾ ॥ ೭ ॥

ಮಿಂದೀ ಮಾಳೂಗಿ ವಳೂಗೇ ನೆಡದಾರೆ ಲರ್ಸಗೋಳು
ತಮ್ಮ(ಲು) ದುಸ್ತೊಂವಾ ದರುಸರೆಯೋ ತಾನಾ ॥ ೮ ॥

ದುಸ್ತವ ದರುಸಿದ್ದ ನೋಡೀತು ನಾಗ್ವೇಣಿ
ದರಸೀದ ದುಸ್ತ ಹರಿದೀತು ತಾನಾ ॥ ೯ ॥

"ತನ್ನ ತನು ಬಾಲನ ಪರದೇಸೀ ಮಾಡೀ
ಚದರಂಗಿ ಲಿದ್ದಲ್ಲಿ ಹೋಗುವರೇ" ಲಂದೇಳಿ
ಪಾಲುಕೀ ಕಂಬ್ ವಂದಾ ಮುರುದೀತೂ ತಾನಾ ॥ ೧೦ ॥

ಅಟ್ಟಂಬೂ ಮಾತಾ ಕೇಳೀದ್ರು ಲರ್ಸ್‌ಗೋಳು
ಹಿಂತಿರುಗಿ ಕಾಲೇರೀ ಕರುದರೆಯೋ ತಾನಾ ॥ ೧೧ ॥

"ಬರವಕೇ ಬಂದೀದ್ರೂ ವಸ್ತ್ರಾವ ದರುಸಿದ್ರೂ
ನಾಗವೇಣಿ ವಸ್ತ್ರೆಲ್ಲಾ ಹರದೀತೂ
ನಾನೂ ಅವಳ ಕೂಡೇನೇ ಬರುಕ್ ಹೇಳೀ" ತಾನಾ ॥ ೧೨ ॥

ಅಟ್ಟೊಂದು ಮಾತಾ ಕೇಳೀದ ಕಾಲೇರಿ
ಚದರಂಗಿ ಮನೀಗೇ ನೆಡ್ಡನೆಯೋ ತಾನಾ ॥ ೧೩ ॥

"ಯೇನಂದ್ರೋ ಕಾಲೇರೀ ಯಂತಂದ್ರೊ ಕಾಲೇರಿ
ಅಂದ ಕಾರಣವಾ ನನಗೆ ಹೇಳೂ" ತಾನಾ ॥ ೧೪ ॥

"ಅಂದ ಕಾರಣವಲ್ಲಾ ಬೆಳದಾ ಬೇಸಕವಲ್ಲಾ
ನಾಗವೇಣಿ ಅವ್ರೀಗೆ ಯದರಾಯ್ತು ಹರಿದೀತು ಚದರಂಗಿ
ಹಾಕಿದ್ದ ದುಸ್ತೀಗೆ ಹರಿದೀತೂ" ತಾನಾ ॥ ೧೫ ॥

ಅಟ್ಟಂಬೂ ಮಾತಾ ಕೇಳೀತು ಚದುರಂಗಿ
ಕೊಟ್ಟೂಗಿಗಿನ್ನೇ ನೆಡದದ್ಯೋ
ಹಾಲನ್ನ ಇನ್ನೇ ಕರದೀತೂ ತಾನಾ ॥ ೧೬ ॥

ವಳ್ಳ ಮಾಳೂಗೀ ವಳೂಗೇ ಬರ್ವದು ಚದುರಂಗಿ
ಶಣ್ಣಕ್ಕೀ ಲಿನ್ನೇ ತೊಳುದದಿಯೋ
ಕಾಲೇರಿಗೇ ಅಡಗೀಯೋ ತಾನಾ ॥ ೧೭ ॥

"ಕೇಳಲ್ಲು ಕೇಳೋ ಕಾಲೇರಿ, ನೀ ಕೇಳೂ
ಕಾಲೂ ಮೊಕವನ್ನೇ ತೊಳೆ ಬಾರೋ" ತಾನಾ ॥ ೧೮ ॥

ಕಾಲೇರಿ ಲಿನ್ನೇ ಕೈಕಾಲ ಮೊಕತೊಳದಿ
ಊಟಕೆಲಿನ್ನೇ ಬರವನೋ ತಾನಾ ॥ ೧೯ ॥

ಕಾಲೇರಿ ಲಿನ್ನೇ ಊಟವ ಮಾಡ್ಯಾನೆ
ಕೈಮೊಕವನ್ನೇ ತೊಳುದಾನೆಯೋ ತಾನಾ ॥ ೨೦ ॥

ಚದುರಂಗಿ ತಾನೂ ಊಟಾವ ಮಾಡಿತೆ
ಕೈ ಮೊಕವಿನ್ನೇ ತೊಳುದದಿಯೋ
ಚದರಂಗಿ ಬಾಚೀ ಸಿರಿ ಮುಡಿಯಾ ಕಟ್ಟಿತೂ ತಾನಾ ॥ ೨೧ ॥

ತಾನೀಡೂ ದುಸ್ತಾ ಲಿಟ್ಟಾದೆ ಚದುರಂಗಿ
ಬಾಗಿಲಿಗೆ ಬೀಗಾ ಜಡದದ್ಯೋ ತಾನಾ ॥ ೨೨ ॥

ಕಾಲೇರಿ ಹಿಂದಾಗಿ ಚದುರಂಗಿ ಮುಂದಾಗಿ
ಗಂಡನ ಮನಿಗೇ ಬರ್ವದೋ ತಾನಾ ॥ ೨೩ ॥

"ಕಳ್ಳರ ಹಾವಳಿಯಲ್ಲಿ ಪುಂಡಗಾರರ ನೆರಿಯಲ್ಲಿ
ತಾನಲ್ಲಿರವದೂ ತರವಲ್ಲಾ" ಲಂದೇಳೀ
ಚಂಬಾಗೂ ನೀರೂ ಇಲ್ಲವೇ ತಾನಾ ॥ ೨೪ ॥

ಚದರಂಗಿ ಬಂದಾ ಬರವಾ ನೋಡೀತು ನಾಗವೇಣಿ
ಕೋಳ್ವತ್ತಿ ವಳುಗೇ ಬರವದೂ ನಾಗವೇಣಿ
ಚದರಂಗಿಗೆ ತನ್ನಿಸುವಾ ಯೆರದದಿದೋ ತಾನಾ ॥೨೫ ॥

"ಬೆಳ್ಳ ಮೂಡೀತೂ ಬೆಳಗೆಲ್ಲ ಆಗಿತು
ಅಲ್ಸಗೇಡೀಗೆಂತಾ ಹಗಲ್ ನಿದ್ರೆಯೋ ತಾನಾ ॥ ೨೬ ॥

ಈ ಊರಾ ನಾರ್ಯವ್ರು ಕೈಕಾಲ ಮೊಕ ತೊಳದಿ
ಗೋವ್ ಬಿಟ್ಟು ಗೋಲೀ ಹೊಡದಾಯ್ತು ತಾನಾ ॥ ೨೭ ॥

ಗೋವ್ ಬಿಟ್ಟು ಗೋಲೀಗೆ ಹೊಡದಾಯ್ತು
ನಿಮ್ಮ ಅಲ್ಸ್‌ಗೇಡಿಗ್ಯೆಂತಾ ಹಗಲ್ ನಿದ್ರೆಯೋ?" ತಾನಾ ॥ ೨೮ ॥

ಅಟ್ಟೊಂಬೂ ಮಾತಾ ಹೇಳುತೆಲಿರವಾಗೆ
ಚದುರಂಗಿ ಮುಸುಕಾ ತೆಗುದನೆಯೋ ಅರ್ಸ್‌ಗೋಳೂ
ಬಾಳೊಂದು ದುಕ್ಕಾ ಬಂದೀತೂ ತಾನಾ ॥ ೨೯ ॥

“ಕೇಳಲ್ಲೋ ಕೇಳೋ ಕಾಲೇರೀ, ನೀ ಕೇಳೂ
ಕುಸುಮಾಲಿದ್ದಲ್ಲೀ ಹೋಗಿಬಾರೋ” ತಾನಾ || ೩೦ ||

ಅಟ್ಟಂಬೂ ಮಾತಾ ಕೇಳಿದ ಕಾಲೇರೀ
ಕುಸುಮಾಲಿದ್ದಲ್ಲೀ ನಡಿದನೆಯೋ ತಾನಾ || ೩೧ ||

“ಏನು ಬಂದ್ಯೋ ಕಾಲೇರೀ ಯೆಂತ ಬಂದ್ಯೋ ಕಾಲೇರೀ
ನೀನು ಬಂದ ಕಾರಣವಾ ತನಗ್ ಹೇಳೂ” ತಾನಾ || ೩೨ ||

ಬಂದಾ ಕಾರಣವಲ್ಲಾ ಬೆಳದಾ ಬೇಸಕವಲ್ಲ
ಅರ್ಸ್‌ಗೋಳು ನಿನ ಕೂಡೆ ಬರುಕ್ ಹೇಳೀರು” ತಾನಾ || ೩೩ ||

ಅಟ್ಟಂಬು ಮಾತಾ ಕೇಳೀತು ಕುಸುಮಾಲಿ
ಕಾಲೇರಿಕಿಂತು ಮುಂದೆ ಬರವದೋ ತಾನಾ || ೩೪ ||

ಕುಸುಮಾಲಿ ಬರುಬರವಾ ಅಟದೂರಿಂದ್ ನೋಡೀದ
ಚಂಬಲ್ಲಿ ನೀರಾ ಕೊಟ್ಟಾನೋ ತಾನಾ || ೩೫ ||

“ನನ್ನಲು ಕರೀಸ್ದಾ ಕಾರಣ್ಯೇನು” ಲಂದ್ ಹೇಳಿ
ಕುಸುಮಾಲಿ ಲೀಗಿನ್ನೆ ಕೇಳೀತು ತಾನಾ || ೩೬ ||

“ಕರದ ಕಾರಣವಲ್ಲ ಬೆಳದಾ ಬೇಸಕವಲ್ಲ
ಚದರಂಗೀಗ್ ಗೆರ್ದ ಇಸುವ ತೆಗಿಬೇಕು” ತಾನಾ || ೩೭ ||

ಅಟ್ಟಂಬು ಮಾತಾ ಕೇಳೀತು ಕುಸುಮಾಲಿ
ನಾಗವೇಣೀಲಿನ್ನೇ ಕರದೀತೂ ತಾನಾ || ೩೮ ||

“ಕೇಳಲ್ಲೇ ಕೇಳೇ ನಾಗವೇಣೀ, ನೀ ಕೇಳೇ
ಚದರಂಗಿ ಗೆರ್ದ ಇಸುವಾ ತೆಗೀ ಬಾರೇ” ತಾನಾ || ೩೯ ||

“ನನ್ನ, ನನ್ನ ಬಾಲನೆ ಪರದೇಸಿ ಮಾಡಿನ್ನೆ
ಚದುರಂಗೀ ಗೀಗ ಕರಿಬವದೋ ತಾನಾ? || ೪೦ ||

ಚದರಂಗೀ ಕರ್‌ದರೆ ನಿನಗೇನಲಾಗಬೇಕೆ?
ಚದರಂಗಿಗೆರ್ದ ಇಸವಾ ತೆಗಿಬಾರೇ” ತಾನಾ || ೪೧ ||

ಅಟ್ಟಂಬು ಮಾತಾ ಕೇಳೀತು ನಾಗವೇಣಿ
ಚದರಂಗೀಗೆರ್ದ ಇಸುವಾ ತೆಗ್ದ್ ಬಂತೂ ತಾನಾ || ೪೨ ||

ಚದರಂಗಿ ಯೆದ್ದು ಕೈಕಾಲು ಮೊಕುವಾ ತೊಳ್ದದ್ಯೋ
ದೇವರಿಗೂಂಗಾ ಕೊಯ್ದೀತೂ ತಾನಾ || ೪೩ ||

ದೇವರ ಪೂಜೆಯಾ ಮಾಡಿತು ಚದುರಂಗಿ
ಗಂಡಗ್ ನಮ್‌ಸ್ಕಾರವಾ ಮಾಡದ್ಯೋ ತಾನಾ || ೪೪ ||

ಗಂಡಗೆ ನಮಸ್ಕಾರವಾ ಮಾಡೀತು ಚದುರಂಗೀ
ಕುಸುಮಾಲಿಗ್ ನಮಸ್ಕಾರವಾ ಮಾಡಿತೂ ತಾನಾ || ೪೫ ||

ಕುಸುಮಾಲಿಗೆ ವಂದು ಮಾತಾ ಲಿಟ್ಟದ್ಯೋ ಚದರಂಗಿ
"ಲಡಗಿ ಮಾಡು ಕುಸುಮಾಲಿ ವಳಗ್ಬುಳಿ" ತಾನಾ || ೪೬ ||

ತನ್ನ ಬಾಲನ ಕರೆದುಕೊಂಡಿ ಮನೆ ಹೆರಗೆ ಬಿದ್ದು
ನಾಗವೇಣಿ ಬೇಲಿ ಬಳಿಗೇ ಹರ್‌ದ್ ಹೋಯ್ತು ತಾನಾ || ೪೭ ||

● **ಕೆಲವು ಪದಗಳ ವಿವರಣೆ**

| | | |
|---|---|---|
| ಸಸುನವೆ | = | |
| ವಳ್ಳ | = | ಒಳಗಿನ |
| ನಾಗವೇಣಿ | = | ನಾಗರಹಾವು, ಸರ್ಪ (ಈ ಹಾಡಿನಲ್ಲಿ) |
| ಅಳ್ಗೇಡಿ | = | ಆಲಸಿ |
| ತನ್ನಿಸುವಾ | = | ತನ್ನ ವಿಷ (ಹಾಕಿತು) |
| ಸಾಯವಾ | = | ಸಹಾಯ |
| ಗೋಲೀ | = | (ಹಸುವಿನ) ಗೋಲೆ |
| ಇಸವ | = | ವಿಷವನ್ನು |
| ದುಸ್ತು | = | ಡ್ರೆಸ್ಸು |
| ಜಡಿ | = | ಹಾಕು |
| ಗೆರ್ದ | = | ಹಾಕಿದ |

■ ಹೇಳಿದವರು : **ಸೌ. ಬೆಳಿಯಮ್ಮ ನಾಯ್ಕ**

# ೧೬. ಪ್ರತ್ಯುಪಕಾರ

"ಕೇಳಲ್ ಕೇಳಲೇ ಲಜ್ಜೀ ಮೊಮ್ಮಗನೇ
ಹಳಿಯಾರ ಗಂಟೂ ಯಾತರಲ್ಲೂಂಟೂ? ॥ ೧ ॥

"ಹಳಿಯಾರ ಗಂಟೂ ಗೋವಿನಲ್ಲುಂಟೂ
ಕೇಳಲೋ ಕೇಳಲೋ ಮೊಮ್ಮಗನೇ ನೀನೂ" ॥ ೨ ॥

ಲಟ್ಟಂಬೂ ಮಾತಾ ಕೇಳಿದ ಮೊಮ್ಮಗಾ
"ಕಣಬೀ ಕಾಯ್ನಂತಾ ರೊಟ್ಟೀ ಬುತ್ತೀ ಕಟ್ಟೊ ॥ ೩ ॥

ನೆಂಬೀ ಕಾಯ್ನಂತಾ ಲೊನಬುತ್ತೀ ಕಟ್ಟೊ"
ಅಜ್ಜೀನಾದರೂ ಕಟ್ಟೀ ಕೊಟ್ಟೀತೂ ॥ ೪ ॥

ಕೊಟ್ಟಿಗೀಗ್ ಹೋಗೀ ಗೋವಾ ಬಿಟ್ಟಿದ್ದಾ
ಮಾವನಾಡ್ ಹೊಲಕೇ ಹೊಡಕಂಡ್ ಹೋತಿದ್ದಾ ॥ ೫ ॥

ಅಲ್ಲಿ ಆದಾರೂ ಲೇನು ಲಾಗಿತ್ತೂ?
ನೆಡುಗೆಲಾದರೂ ವಂದು ಹಳ್ಳ ಇತ್ತು ॥ ೬ ॥

ಇಟ್ಟೆಲ್ಲೆರಗುಲಾದರೂ ಈಚೇಲೀ ಇತ್ತೂ
"ತನ್ಗೆಲಾದರೂ ವಂದ್ ಸಂಕಲಾಕೀ ಕೊಡೂ ॥ ೭ ॥

ನಿನ ಕಟ್ಟಕಾಲಕ್ಕೂ ನಾ ಬರುತಿದ್ದೇ"
ಅದ್ಕೆಲಾದರೂ ವಂದು ಕೋಲು ಕಡ್ಡಿ ಹಾಕಿದ್ದಾ ॥ ೮ ॥

ಮತ್ತೂ ಬಗಿಲೀ ಮುಂದೆ ಲೋಗಿದ್ದಾ
ಅಲ್ಲೂ ಇನ್ನೇನೂಲಾಗಿತ್ತು ನೋಡೂ ॥ ೯ ॥

ಕೆಪ್ಪೀಲಾದರೂ ನೀರಿಲ್ದೆ ಲಿತ್ತೂ
"ನನ್ನ ತಕ್ಕಂಡೀಗೇ ನೀರಿದ್ದಲ್ ಬಿಡೂ ॥ ೧೦ ॥

ನಿನ ಕಟ್ಟಕಾಲಕ್ಕೂ ನಾ ಬರುತೀದ್ದೇ"
ಅದ್ರ ತಕಂಡೋಗೀ ಕೆರಿಯಲ್ ಬಿಟ್ಟಿದ್ದಾ ॥ ೧೧ ॥

ಮತ್ತೇ ಬಗೀಲೀ ಮುಂದೆ ಹೋಗಿದ್ದಾ
ತುಂಬೀಲಾದರೂ ಬೆದ್ರಹಿಂಡ್ಗ್ ಸಿಕ್ಕಿತ್ತೂ ॥ ೧೨ ॥

"ನನ್ನಲಾದರೂ ತಪ್ಪೀಸ್ ಹಾಕಿದ್ರೇ
ನಿನ್ನ ಕಟ್ಟಕಾಲಕ್ಕೂ ನಾ ಬರೂತಿದ್ದೇ" ॥ ೧೩ ॥

ಲದ್ರಲಾದರೂ ತಪ್ಪೀಸ್ ಹಾಕಿದ್ದಾ
ಮಾವನಾಡ್ ಹೊಲಕೆ ಗೋವಾ ಹೊಡುದೀ ಯೆಬ್ಬಿದ್ದಾ ॥ ೧೪ ॥

ಲಚ್ಚಕನ್ನೀರೂ ಲೇಳೂ ಮಂದೀಯೋ
ಕೆರ್‌ಯಲ್ಲಾದರೂ ಮೀವ್ಕೆ ಬಂದೀರೂ ॥ ೧೫ ॥

ಹೊನ್ನ ಕಾಂಕೀಯಾ ಕಾವ್ಕೆ ಲಿಟ್ಟಿದ್ರೂ
ಲಾವರು ವೆಲ್ಲವಾ ಬಿಚ್ಚಿಲಿಟ್ಟಿದ್ರೂ ॥ ೧೬ ॥

ಮೀವುಕಾದರೂ ಲೋಗೀ ಬಿಟ್ಟೀರೂ
"ಅಕ್ಕಮ್ಮ ನೀನೂ ಹೆರಿಕನ್ನೇ ಕೇಳೂ ॥ ೧೭ ॥

ಮಾನವ್ನ ಗೋವಾ ಮಾಯ ಮಾಡುತ್ತೇ"
"ಕೇಳಲ್ ಕೇಳಲೇ ಕಿರಿಕನ್ನೆ ನೀನೂ ॥ ೧೮ ॥

ಮಾನವ್ನಾ ಸಂಗಾ ನಮುಗೇ ಬೇಡ"ಂತೂ
ಯೇನೇನೂ ಹೇಳಿದ್ರೂ ಕೇಳಲುಲಿಲ್ಲಾ ॥ ೧೯ ॥

ಮಾನವ್ನಾ ಗೋವಾ ಮಾಯ ಮಾಡಿತ್ತೂ
ಕೆಂಪಂಬೂ ಗೋವೂ ಕೆಮ್ಮಣ್ಣಿ ಗಟುಗೀ ॥ ೨೦ ॥

ಕರಿಯಂಬೂ ಗೋವೂ ಕರಿಮಣ್ಣಿ ಗಟುಗೀ
ಬೆಳ್ಳಂಬೂ ಗೋವೂ ಬೆಳಿಮಣ್ಣಿ ಗಟುಗೀ ॥ ೨೧ ॥

ಮಾನವ್ನಾ ಗೋವಾ ಮಾಯ ಮಾಡಿತ್ತೂ
ಯೇಳೂ ಜನರಿನ್ನೇ ಮೀಯೂಕ್ ಹೋಗಿದ್ರೂ ॥ ೨೨ ॥

ಮೊಮ್ಮಗ ಲೇನಾ ಮಾಡಿಬಿಟ್ಟಿದ್ದಾ?
ರೊಟ್ಟಿ ಬುತ್ತೀಯಾ ಬಿಚ್ಚಿಬಿಟ್ಟಿದ್ದಾ ॥ ೨೩ ॥

ಕಾಂಕಿಗೊಂದಿನ್ನೇ ಕೊಟ್ಟೇಬಿಟ್ಟಿದ್ದಾ
ಕಾಂಕಿಲಾದಾರೂ ಕಚ್ಕಂಡಿ ದೂರ ಹೋಯ್ತೂ ॥ ೨೪ ॥

ಅವ್ನು ಇನ್ನೇನಾ ಮಾಡಿಬಿಟ್ಟಿದ್ದಾ?
ಕಿರಿಕನ್ನಿ ಆಬರಣಾ ತೆಗದಿ ಇಟ್ಟಿದ್ದಾ ॥ ೨೫ ॥

ಯೇಳು ಜನರಿನ್ನೇ ಮಿಂದ್ಕಂಡಿ ಬಂದ್ರೂ
ಆರು ಜನರಾದಾ ಲಾಬರಣಲಿತ್ತೋ ॥ ೨೬ ॥

"ಕೇಳಲ್ ಕೇಳಲೇ ಕಿರಿಕನ್ನೇ ನೀನೂ
ನಿನ್ನಾ ಲಾಬರಣಾ ಇಲ್ಲೆಲ್ಲೂ ಇಲ್ಲಾ ॥ ೨೭ ॥

ಮಾನವ್ನಾ ಸಂಗಾ ನಮುಗೇ ಬೇಡಂದೇ
ಲಾದರೂ ನೀನೂ ಕೇಳಲೂ ಇಲ್ಲಾ" ॥ ೨೮ ॥

ಲವ್ನೂ ಇನ್ನೇನಾ ಮಾಡಿಬಿಟ್ಟಿದ್ದಾ
ಮರಹತ್ಕಂಡೀ ಕೂತಿಬಿಟ್ಟಿದ್ದಾ ॥ ೨೯ ॥

"ಕೇಳಲ್ ಕೇಳಲೇ ಲಜ್ಜೀ ಮೊಮ್ಮಗ್ನೇ
ಕಿರಿಕನ್ನಿ ಆಬರಣಾ ನೀ ಕೊಡಬೇಕೋ" ॥ ೩೦ ॥

"ಕಿರಿಕನ್ನಿ ಆಬರಣಾ ನಾ ಕೊಡೂದಾರೇ
ನನಗೋವು ಗೋವೆಲ್ಲಾ ತಂದ ಕೊಡಬೇಕೂ" ॥ ೩೧ ॥

ಅದು ಇನ್ನೇಲೇನಾ ಮಾಡಿಬಿಟ್ಟಿತ್ತೂ?
ಗೋವು ಗೋವೆಲ್ಲಾ ಮಾಡಿಕೊಟ್ಟಿತ್ತೂ ॥ ೩೨ ॥

"ನೀ ಯೆಲ್ಲದೂ ಇನ್ನೇ ಹೊಡುಕಂಡಿ ಬಾರೇ"
ಯೆಲ್ಲವಾದರೂ ಹೊಡುಕಂಡಿ ಬಂದಿತ್ತೂ ॥ ೩೩ ॥

ಮನಿಗೇ ಲಾದಾರೂ ಬಂದಿಬಿಟ್ಟಿದ್ದಾ
"ಕೇಳಲ್ ಕೇಳಲೇ ಲಜ್ಜವ್ವಾ ನೀನೂ || ೩೪ ||

ನೀಲೂಡೂ ಕಪ್ಡಾ ಕನಿಗೊಂದೂ ಕೊಡೂ"
ಕನ್ನುಡೂ ಆಬರಣಾ ಅವ್ವಲತ್ತಿದ್ದಾ || ೩೫ ||

ಅಟ್ಟದ ಮೇನೇ ಕಟ್ಟೀಲಿಟ್ಟಿದ್ದಾ
ಲೂಟ ಮಾಡಿನ್ನೇ ಮನಗಿರು ನೋಡೂ || ೩೬ ||

ಬೆಳುಗಾಗೆ ಲೆದ್ದೀ ಗೋವ ಬಿಟ್ಟೆ ಹೊಡುದಾ
ಕನ್ನೀಲಾದಾರೂ ಲೇನ ಮಾಡಿತ್ತೂ? || ೩೭ ||

ತನ್ನ ಲಾಬರಣಾ ತಾ ಉಟ್ಟಕಂತೂ
ಅಚ ಕನ್ನೀರ್ದಲ್ಲೀ ನೆಡದಿತ್ತೂ ನೋಡೂ || ೩೮ ||

"ಕೇಳಲ್ ಕೇಳಾಲೇ ಅಚಕನ್ ದೇವಕನ್ನೀರಾ
ಕನ್ನೀರ್ ವಳುಗೇ ಲ್ಯಾವ ಪದ್ಧತೀ?" || ೩೯ ||

"ನಮ್ಮ್ ಮನಿಯಲ್ಲಿ ಲುಂಡದೇ ನೋಡೂ
ಕೇಳಲ್ ಕೇಳಲೋ ಮೊಮ್ಮಗನೇ ನೀನೂ" || ೪೦ ||

ತಂದು ಮೂರು ಮಾತಿನ್ನೇ ಲುಂಟೂ ನೋಡೂ
ಮೂರ ಚೇಲಿನ್ನೇ ಯೆಳ್ಳಾ ಬಿತ್ತುತ್ತೇ || ೪೧ ||

"ವಂದ ಬಿಡದೀರೇ ತುಂಬ ಕೊಡಬೇಕೂ"
ಅಂದ್ ಹೇಳಾದರೂ ಹೇಳೀ ಬಿಟ್ಟೀತೂ || ೪೨ ||

ಮೂರ ಚೇಲಿನ್ನೇ ಯೆಳ್ಳಾ ಬಿತ್ತಿತ್ತೂ
"ಹರಹರ" ನಂದಾ, "ಸಿವಸಿವ"ನಂದಾ || ೪೩ ||

"ನಾ ಬರ್ವಾಗಿನ್ನೇನಾ ಮಾಡಿ ಬಂದಿದ್ದೇ?
ಯೆರ್ಗಿಗಾದಾರೂ ಸಂಕಾಲಾಕಿದ್ದೇ || ೪೪ ||

ನನ ಕಟ್ಟ ಕಾಲಕ್ಕೇ ಬಂದೀರಾಗ್ತಿತ್ತೂ"
ಅಂದ್ ಹೇಳಾದರೂ ಕಣ್ಣೀರ ಬಿಟ್ಟಿದ್ದಾ || ೪೫ ||

ಯೆರ್ಗೂಲಾದರೂ ಬಂದೀ ಮುಟ್ಟಿತ್ತೂ
ವಂದೂ ಬಿಡ್ಡೀದೇ ಲೆಕ್ಕಿ ತುಂಬಿತ್ತೂ ॥ ೪೬ ॥

"ಮತ್ತೆ ಇನ್ನೊಂದೂ ಮಾತಿನ್ನೇ ಉಂಟೂ
ಕಯ್ಯ ನುಂಗಿಲವಾ ಕೆರಿಯಲ್ಲಿ ಬಿಡುತೇನೇ ॥ ೪೭ ॥

ಆದ್ರಾ ಇನ್ನಾದ್ರಾ ಹೆಕ್ಕೀ ಕೊಡಬೇಕೋ"
"ಹರಹರ" ನಂದಾ, "ಸಿವಸಿವ"ನಂದಾ ॥ ೪೮ ॥

"ನಾನ್ ಹಿಂದೇ ಬರ್ವಾಗೇ ಲೇನಾ ಮಾಡಿದ್ದೇ?
ಕಪ್ಪ್ಯಾನಾದಾರೂ ಕೆರಿಯಲ್ ಬಿಟ್ಟಿದ್ದೇ ॥ ೪೯ ॥

ನನ ಕಟ್ಟ ಕಾಲಕ್ಕೇ ಬಂದೀರಾಗ್ತಿತ್ತೂ"
ಅಂದ್ ಹೇಳಾದರೂ ಹೇಳಿದ್ದ ನೋಡೂ ॥ ೫೦ ॥

ಕಪ್ಪೀಲಾದರೂ ಬಂದೀಬಿಟ್ಟಿತ್ತೂ
ವಂದ ಮುಳುಕಿನ್ನೇ ಹೊಡುದಿತ್ತೂ ನೋಡೂ ॥ ೫೧ ॥

ಮತ್ತೊಂದ್ ಮುಳಕೀಗೂ ಹೆಕ್ಕಂಡಿ ಬಂತೂ
ಕನ್ನೀಗಾದಾರೂ ಕೊಟ್ಟೇ ಬಿಟ್ಟಿದ್ದಾ ॥ ೫೨ ॥

"ಕೇಳಲ್ ಕೇಳಲೋ ಮೊಮ್ಮಗ್ನೇ ನೀನೂ
ನಾವೇ ಯೇಳೂ ಮಂದೀಯಾ ಕೊಣ್ದಾಲಾಡತ್ರೂ ॥ ೫೩ ॥

ನಿಮ್ಮನೀಗ್ ಹೋದದ್ದೂ ಯಾವ್ದೂ ಕನ್ನಂದೀ
ಅದ್ರಾ ಕೈತಟ್ಟೀ ಯೆಳ್ಳಲೂ ಬೇಕೂ ॥ ೫೪ ॥

ಮತ್ ಯಾರರು ಕಿಟ್ದ್ರೇ ನಿನ್ ಬಸ್ಮಾ ಮಾಡುವೇ"
"ಹರಹರ" ನಂದಾ, "ಸಿವಸಿವ"ನಂದಾ ॥ ೫೫ ॥

"ನಾ ಹಿಂದೇ ಬರ್ವಾಗೇ ಲೇನಾ ಮಾಡಿದ್ದೇ?
ವಂದ ತೊಂಬೀಲಾದಾರೂ ಬಿಡಸೀಲಾಕಿದ್ದೇ ॥ ೫೬ ॥

ನನ್ಗ ಈಗಿನ ಕಟ್ಟಕ್ಕೇ ಬಂದೀರಾಗ್ತಿತ್ತೂ"
ತುಂಬೀಲಾದರೂ ಬಂದಿಲಿಬಿಟ್ಟಿತ್ತೂ ॥ ೫೭ ॥

ಕಿರ್ಯ ಕನ್ನೀಯಾ ತಲಿಮೇನೆ ಕುಂತಿತ್ತೂ
ಅದ್ರ ಕೈಯಿನ್ನೇ ಲೆಳುದಿಬಿಟ್ಟಿದ್ದಾ ॥ ೫೮ ॥

"ಕೇಳಲ್ ಕೇಳಾಲೇ ಕಿರಿಕನ್ನೆ, ನೀನೂ
ಅವ್ನ ಸಂತಿಗಿನ್ನೂ ಹೋಗಲು ಬೇಕೂ ॥ ೫೯ ॥

"ಕೇಳಲೆ ಕೇಳಾಲೆ ಕಿರಿಕನ್ನೆ, ನೀನೂ
ಮಾನವ್ನಾ ಸಂಗಾ ನಮುಗೆ ಬೇಡ"ಂದ್ರೂ ॥ ೬೦ ॥

"ನೀನೂಲಾದರೂ ಲಿನ್ನೇ ಹೋಗೂ"
"ಕೇಳಲೇ ಕೇಳಲೇ ಹೆರಿಕನ್ನೆ, ನೀನೂ ॥ ೬೧ ॥

ನಿಮ್ ಆರು ಜನರಿನ್ನೇ ನಾ ಬಿಟ್ ಹೇಂಗ ಹೋಗ್ಲೀ?
ನನ ಜಾಜಿಯ ವನುವೇ ಜಾಜಿಯ ವನುವೇ
ಯೆಲ್ಲಾ ಬಿಟ್ಟಿನ್ನೇ ಹ್ಯಾಂಗೇ ಹೋಗಬೇಕೂ?" ॥ ೬೨ ॥

● **ಕೆಲವು ಪದಗಳ ವಿವರಣೆ**

| | | |
|---|---|---|
| ಸಂಕಲಾಕಿ | = | ಸಂಕ ಹಾಕಿ, ಹಳ್ಳ-ನದಿಗಳನ್ನು ದಾಟಲು ಮೂರು ನಾಲ್ಕು ಎಳೆ ಮರದ ತುಂಡು, ಕೋಲುಗಳನ್ನು ಜೋಡಿಸಿ ಹಾಕಿರುತ್ತಾರೆ. |
| ಹಳಿಯಾರ | = | ಹಳೆಯವರ, ಹಿಂದಿನವರ |
| ಕಟ್ಟಕಾಲ | = | ಕಷ್ಟಕಾಲ |
| ಕೆಪ್ಪಿ | = | ಕಪ್ಪೆ, Frog |
| ಹಳ್ಳ | = | ಹರಿಯುವ ನೀರಿನ ತೊರೆ |
| ಕಾಂಕೀ | = | ಕಾಗೆ |
| ಕಪ್ಡಾ | = | ವಸ್ತ್ರ |
| ಅವ್ವಲತ್ತಿದಾ | = | ಅಡಗಿಸಿಟ್ಟಿದ್ದಾ |
| ತೊಂಬಿ | = | ದುಂಬಿ |

■ ಹೇಳಿದವರು: **ತಿಪ್ಪು ನಾಯ್ಕ ಬಗ್ಗೋಣ**

# ೧೭. ಶ್ರವಣ (ಶರವಣ) ಕುಮಾರನ ವಧೆ

(ರಾಮಾಯಣದಲ್ಲಿನ ಕಥೆ)

ನಂದಕ ಮುನಿ ಸ್ವಾಮೀꣻꣻ ಎಂಬೋನು
ಎಪ್ಪತ್ತೇಳ್ ವರಶೀನ ಮನಶಾನೂ
ಎಪ್ಪತ್ತೇಳು ವರಶಿನ ಮನಶಾನೇ ꣻꣻ
ಕಣ್ಣು ಎರಡೂ ಕಾಣೂꣻꣻದಿಲ್ಲವೋ ॥
ಅವನಿಗೆ ಕೆಮಿಯು ಯೆರಡು ಕೇಳುವುದಿಲ್ಲವೋ
"ಕೇಳು ಮಗನೆ ಶರಾꣻꣻವಾಣನೇ
ಇದುವೆಲೇ ಪಾಪಾꣻದ ಜಾಗೇವೋ
ಕಾಶಿಕವಡಿ ಮುಟ್ಟೂಕೆꣻꣻಬೇಕೆಲೋ"
ಅಟ್ಟ ಮಾತ ಹೇಳುವಾꣻꣻ ಶಮಿದಲ್ಲಿ
ಮಗನೆಲಾꣻꣻದ ಶರೂꣻꣻವಾಣಾꣻꣻನು
ಕಾಶಿಕವಡಿಗೈವೂꣻꣻತ್ಯದಾನೂ
ಕಾಶಿಕವಡಿಗೈದಿಕಂಡೇಲೋ
ತಾಯಿತಂದೆ ಕುಳ್ಳಿರಿಸಿ ಕಂಡಾನೋ
ನೊರೆ ಹಾಲ ಕರದ ಬುರಡೇꣻꣻ ತಡದಾನೋ
ಕಾಶಿಕವಡಿಯ ತಾಯಿ ತಂದೆ ಕುಳ್ಳೀꣻꣻಸಿ ಕಂಡಾನೋ
ಹೆಗಲಮ್ಯಾನೆ ಹೆರೀಶಿ ಕಂಡಾನೋ
ಕಾಶಿ ದಾರಿ ಹಿಡದಿꣻꣻ ನಡೆದಾನೋ
ವಂದಿ ಯರಡು ಗಾವೀದ ನಡೆದಾನೋ
ವಂದು ಯರಡು ಗಾವೀದꣻ ನಡೆದೇಲೇ

ಐವೋದಾ ಪಟ್ಣಾsಕss ನಡೆದಾನೋ
ಐವೋದಾ ಪಟ್ಟಾಣಕೆss ಹೋದ ಮೇಲೆ
"ಕೇಳೋ ಮಗನೆ ಶೇರಾssವಣಾssನೇ ರ್‍ರ
ನನ ಜೀಮಕಾದರೆ ಬಾಳಾss ದಣವೇಲೋ
ನನಗೆ ಇಟ್ಟು ನೀsರಾss ಕೊಡಬೇಕೋ" ॥
ಅಟ್ಟ ಮಾತಾ ಹೇಳವಾ ಶಮ್ಯದಲ್ಲೀ
ನುಗ್ಗಿ ಮರಕೆ ಕಾವಾsಡಿ ಹೇರ್ಯಾನೋ
ಹಾಲಕರದ ಬುರಡೇss ತಡದಾsನೋ
ಹಾಲ ಕರದ ಬುರಡೇss ತಡಕಂಡಿ
ನೀರಗೋಳ ಹೊಡಕೋssತ ನಡದಾನೋ
ಮುರು ಲೋಕಯಲ್ಲ ತಿರುಗೀss ನೋಡಿದರೆ
ಅವನಿಗೆ ನೀರು ಯಲ್ಲು ಕಾಣಾssಲಿಲ್ಲಾವೋs
ನೀರು ಯಲ್ಲೂ ಕಾಣಾsಲಿಲ್ಲೆಂದೇss
ದೊಡ್ಡ ವಂದು ಗುಡ್ಡಗೇss ನಡದಾನೋ
ಮರನ ಹತ್ತಿ ನೋಡೂ ತೈದಾನೋ
ಮರನ ಹತ್ತಿ ನೋಡ್ದಾ ಶಮ್ಯದಲ್ಲೀ
ಅವನಿಗೆ ನೀರು ಯೆಲ್ಲೂ ಕಾಣಾssಲಿಲ್ಲಾವೋ
ಅಡವೀಯಾರಾssಣದೊಳssಗೇ
ದಶರತರಾಯನ ಕೆರೆಯಾss ಕಂಡಾssನೋ
ದಶರತರಾಯ್ನಾs ಕೆರೆಯಾ ಕಂಡೀssಲೇ
ಆ ಮಾರಗ ಹಿಡದೆ ಬರವೂss ತೈದಾನೋ
ದಶರತರಾಯನ ಕೆರಿಯಾss ವssಳsಗೇs
ಅಲಿ ದಶರತನೇsಯೇssನ ಮಾಡಾನೋ?
ಊರ ಜನರ ತಿಂಬಾ ನೀರಾನೇ
ದೇವಲೋಕದ ಮದ್ದಾssನೆ ಬಂದೇಲೇ
ನೀರಗೋಳ ಗರಡೂss ತೈದಾವೋ
ದಶರತಲೇ ಯೇನಾss ಮಾಡ್ಯಾನೋs?
ಬಿಲ್ಲು ಬಾಣ ಹಿಡದೀss ಕಂಡೇಲೇs

ವೋಳಿ ಕಟ್ಗೆಕುಳ್ಳೂಽಽ ತೈದಾನೋಽ
ವೋಳಿ ಕಟ್ಟೆ ಕುಳ್ಳೂಽಽ ಶಮ್ಯದಲ್ಲೀ
ಶೇರವಾಣನ್ನುಡಗಾಽಽ ಲಂಬಾನೋಽ
ಹಾಲ ಕರದ ಬುರುಡೇಽಽ ವಾಳಾಽಽಗೇಽ
ನೀರಗೋಳೆ ಮೊಗವೂಽಽ ತೈದಾನೋ
ನೀರಗೋಳ ಮೊಗೆವಾಽಽ ಶಮ್ಯದಲ್ಲೀ
ನೀರವಳಗೆ ಬುಡಬೂಽಽಡಂದಾವೋ
ನೀರವಳಗೆ ಬುಡಬುಡನವಾಽಽಗೇಽ
ದಶರತನೇ ಯೇನಾಽಽ ಮಾಡ್ಯಾನೋ?
ಮದ್ದಾನೆ ಬಂತೇಽಽ ಲಂದ್ಹೇಳೀ
ಬಿಲ್ಲ ಏರ್ಸಿ ಬಾಣಾಽಽ ಹೊಡೆದಾನೋ
ಶೆರವಣಗೆ ಬಾಣಾಽಽ ತಗದಲಿದವೋ
ಶೆರವಾಣನಂಬಾ ಹುಡುಗಾಽಽನು
ಆ ಕೆರಿಯ ವಳಗೆ ಬೀಳೂಽಽತೈದಾನೋ
ಕೆರಿಯ ವಳಗೆ ಬಿಳವಾಽಽ ಶಮಯದಲ್ಲೀ
ನಂದಕ ಮುನಿ ಸ್ವಾಮೀಽಽ ಯಂಬೋನೂ
ತನ್ನ ಮಗನ ಹುಡುಕೂತ ನಡದಾನೋ
ಮೂರು ಲೋಕಯಲ್ಲ ತಿರಗೀಽಽ ನೋಡ್ಯಾನೋ
ಮೂರು ಲೋಕಯಲ್ಲ ತಿರಗೀಽಽ ನೋಡಿದರೇ
ಯಲ್ಲು ಯಲ್ಲು ಕಾಣಾಽಽ ಲಿಲ್ಲಂದೀ
ದಶರತರಾಯನ ಕೆರೆಗೆಽಽ ನಡದಾನೋ
ದಶರತರಾಯ್ನ ಕೆರೆಗೇಽಽ ಹೋಗೇಲೆ
ತನ್ನ ಮಗನ ನೋಡಽಽ ತೈದಾನೋ
ತನ್ನ ಮಗನ ನೋಡೀಽಽ ಕಂಡೀಲೇ
"ಹರಹರಾ, ಶಿವನೇಽಽ" ಲಂದಾನೋ
"ನನ್ನು ಮ್ಯಾನೆ ಯಾರೇಽಽ ವೈರೇಯೋಽ?
ನನ ಮಗನ ಮೇನೆ ಯಾರೇಽಽ ವೈರೇಯೋ?"

ಅಟ್ಟ ಮಾತ ಹೇಳವಾss ಶಮಯದಲ್ಲೀ
ದಶರತನೇ ಯೇನುss ಹೇಳ್ಯಾನೋ?
"ನಿನ ಮಗನಂದೇ ನಾನೇss ಹೊಡೆಲಿಲ್ಲ
ಮದ್ದಾನೆಗೆ ನಾನೇss ಹೊಡದಿದನೋ"
ಅಟ್ಟವಂದ ಮಾತಾss ಹೇಳೇಲೇ
ನಂದಕ ಮುನಿ ಸ್ವಾಮೀss ಪಾದಾಕೇ
ಅವನ ಪಾದಕಾಲೆ ವಂದಾssನೆ ಮಾಡ್ಯಾನೋ
ಹೊಡದರೆಂದ ಶೇರೂss ತಪ್ಪಂದೀ
ಅವನ ಪಾದಕೆ ವಂದssನೆ ಮಾಡ್ಯಾನೋ
ನಂದಕ ಮುನಿ ಸ್ವಾಮೀss ಯೇನ ಹೇಳಾನೆ?
ಕಣ್ಣೀರ ಶೆಡಿಯುತ್ತ, ಎದೆಯ ಮೇಲ್ ಬಡಿಯುತ್ತ
"ನಿನ್ನ ಮುಪ್ಪಿನ ಕಾಲಾssದಲ್ಲೀ ನನ್ನಾ ಗೇ
ನಿನ್ನಾ ಮಗನೂss ದೂರಾಗಲಿ
ನಿನ್ನಾ ಮಗನೂ ದೂರ ಹೋಗಾಲಿ"
ಲಂದ್ಹೇಳಿ ಶಾಪಾss ಕೊಟ್ಟಾನೋ
ಅಲ್ಲಿಯೇ ಬಿದ್ದು ಪಾರಾಣss ಕೊಟ್ಟಾನೋ
ತಾಯವ್ವಿ ಈ ಮಾತಾss ಕೇಳಿಕಂಡೀ
ತನ್ನ ಪಾರಾಣಾನೂss ಬಿಟ್ಟಾsಳೆ.

● **ಕೆಲವು ಪದಗಳ ವಿವರಣೆ**

| | | |
|---|---|---|
| ಕಾಶಿಕವಡಿ | = | ಕಾವಡಿ |
| ಗೈವೂತೈದಾನೋ | = | ತಯಾರು ಮಾಡಿಕೊಂಡನು |
| ಬುರುಡೆ | = | ಪಾತ್ರೆ |
| ಐವೋದಾ | = | ಅಯೋಧ್ಯಾ |
| ತಡಕಂಡಿ | = | ಹಿಡಿದುಕೊಂಡು |
| ಶಮದಲ್ಲಿ | = | ಸಮಯದಲ್ಲಿ |
| ಅಡಿವಿಯಾರಾಣ | = | ಅಡವಿ ಅರಣ್ಯ |
| ಬರವೂತೈದಾನೋ | = | ಹೋಗಹತ್ತಿದನು |
| ಮೊಗವೊತೈದಾನೋ | = | ಮೊಗೆದನು, ತುಂಬಿದನು |
| ಶೀರು | = | ಬಹಳ, ಸರ್ವ |

■

# ೧೮. ಶಿವ-ಗೌರಿ

ಗಾಳೀ ಬೆಳದಿಂಗಳ ಭೂಮೀ ಬಾರಾದಲ್ಲಿ
ಬಾಲಯ್ಯರದಿಕಾರ ಬಲ್ಲವರುಂಟೇ?
ಬಾಲಿಸೀ ಮದಿಲೂ ನುಡಿದಾಳೋ
"ಗಾಳಿಗೆಲೆಯುಂಟೆ? ಯೆಲಿಗೆ ಬೀಜಗಳುಂಟೇ? ॥ ೧ ॥

ಕೀಲುಂಟೇ ಹರಿವಾ ಜಲುದೀಗೇ?
ಕೀಲುಂಟೇ ಹರಿವಾ ಜಲುದೀಗೇ? ಮಾದೇವೀ
ನನ್ನ ನಿನ್ನೊಳಗೂ ಯರಡುವುಂಟೇ? ॥ ೨ ॥

ಕಾವೀಗೇ ಕಬ್ಬುಂಟೇ ಬೇವೀಗೆ ಬಿಲ್ಲುಂಟೆ?
ಕೂಡುವ ನೀರಿಗೂ ಸುಳಿವುಂಟೆ ಮಾದೇವೀ? ॥ ೩ ॥

ನನ್ನ ನಿನ್ನೊಳಗೂ ಯರ್ಡುವುಂಟೇ?
ಹೆಂಗಸ್ರ ಮಾಯಗಳ ಕಂಡವರ್ಯಾರುಂಟೇ? ॥ ೪ ॥

ಗುಂಡೀಯ ವಳುಗಿರುವ ಕಿರುಮೀನ್ನ ಹೆಜ್ಜೆಯ
ಕಂಡವರುಂಟೇ ಮಾದೇವೀ? ॥ ೫ ॥

ಇಂದ್ರಲೋಕಕ್ಕೋಗಿ ಚೆಂದೊಳ್ಳ ಪಟ್ಟಿಯ ತಂದೀ
ರಂಬೆ, ನೀನಿದುರ ವಳೂಗಿಡೂ" ಲಂದೇಳಿ ॥ ೬ ॥

ಈಶ್ವರ್ರು ನೆಗಿಯಾ ನೆಗುದಾರೇ
ದೇವಲೋಕ್ಕೋಗಿ ದೇವರೂ ಪಟ್ಟಿಯ ತಂದೀ ॥ ೭ ॥

"ರಂಬೆ, ನೀನಿದುರ ವಳಗೀಡು" ಯೆನುತಾಳೆ
ಈಸ್ವರ್ರು ಲಿನ್ನೂ ನುಡಿದಾರು ॥ ೮ ॥

"ಕೇಳು ಕೇಳೇ ಮಾದೇವಿ, ನನ್ಹೋಗುತೆ ಕಾಸಿಗೆ
ನಿನ ಕೋಮೀಲಿ ನಿನ್ನಾ ಕೊಮಾರನ ಸಲುಗಿಟ್ಕೋ ॥ ೯ ॥

ನಾ ಬಪ್ಪೇ ಯೆಂಟೂ ದಿವಸಕ್ಕೇ
ಕೇಳು ಕೇಳೇ ಮಾದೇವಿ ನಾನ್ಹೋಗುತೆ ಗಂಗೀಗೆ ॥ ೧೦ ॥

ನಿನ ಕೋಮೀಲಿ ನಿನ್ನಾ ಕೊಮಾರನ ಸಲುಗಿಟ್ಕೋ
ನಾ ಬತ್ನೇ ಯೇಳೂ ದಿವಸಕ್ಕೆ" ॥ ೧೧ ॥

ಅಟ್ಟಾರು ಲಿಽನ್ನೂ ನುಡಿದಾರು ಪರಮಾತ್ಮ
ಮಾಳುಗಿ ವಳುಗೇ ನೆಡಿದಾರೆ ॥ ೧೨ ॥

ಪಟ್ಟಿಯು ಲಿನ್ನೇ ಕೊಟ್ಟಾರೇ
ಪಟ್ಟಿಗಳಿನ್ನು ಕೊಟ್ಟಿನ್ನು ಪರಮಾತ್ಮ ॥ ೧೩ ॥

ಮಾಳುಗಿ ಹೆರುಗೇ ಬರುವರೇ
ಮಾಳುಗೆ ಹೆರುಗೇ ಬರುವರು ಪರಮಾತ್ಮ ॥ ೧೪ ॥

ಮಾಯದಿಂದಿನ್ನು ನೆಡಿದಾರು
ತಟ್ಟೇಲಿ ನೊರೆಹಾಲು ಬಟ್ಲಲ್ಲಿ ಯೆರೆತುಪ್ಪಾ ॥ ೧೫ ॥

ಬಾಳೀಯ ಹಣ್ಣು ಸಕ್ಕರೆ ತೊಟ್ಟಾಗೇ
"ಪಟ್ಟೀ ಕೊಽಡಂ"ದೀ ನಲಿವಿನಲಿ ॥ ೧೬ ॥

ಯೆಟ್ಟು ಹೇಳಿದ್ರೂ ಕೇಳುದಿಲ್ಲಂದೇಳೀ
ಪಟ್ಟಿ ಪೆಟ್ಟುಗಿಯ ಬಿಡುಸಾಳೆ ॥ ಮಾದೇವೀ ॥ ೧೭ ॥

ಮುತ್ತ ಕಟ್ಟದುಕೂ ತರುಳಿಲ್ಲಾ
ಬಣ್ಣದ ಪೆಟ್ಟುಗಿಯ ಬಿಡಿಸಾದೆ ಮಾದೇವಿ ॥ ೧೮ ॥

ಬಣ್ಣನೆ ತಂದು ಹೆರಗಿಕ್ಕಿ ನೋಡಿದರೂ
ಯೆಳ್ಳು ಕಟ್ಟುಕೂ ತೆರುಳಿಲ್ಲಾ ॥ ೧೯ ॥

ಹರಕನೆ ಹೋಲುವುತೇ ಹಲುಬಾಶಿಗೊಳ ಹೇಳುತೆ
ಬಂದನೆ ಮಾದೇವೀ ಬಳಿಗನ್ನು ॥ ೨೦ ॥

"ಹೋಲುವಾಕೆ ವಸ್ತ್ರುಂಟೆ ಹೋಲುವಾಕೆ ಪಟ್ಟುಂಟೇ?
ಹೋಲುವಾಕೆ ಬಣ್ಣುಂಟೆ?" ಅಂದೀ ಕೇಳಾನೇ ಮನ್ಯಲ್ಲೀ ॥ ೨೧ ॥

"ಬಾಲರ ಪಟ್ಟಿಯ ಯಲಿಗೋಳು ಕಡಿದಾವೆ
ಹೊಲ್ಲೊತೀಯೇನೋ ಹೊಲುಗ್ಗಾರಾ? ॥ ೨೨ ॥

ಆದೀ ತಂದನೆ ಆಯದಿಂದ ಕುಂತನೆ
ಚೆನ್ನದ ಚೂಜಿಲಿ ಬಣ್ಣನೆ ಹೊಲಿದಾನೆ ॥ ೨೩ ॥

ಉತ್ತಮ ಕುಲುದಾ ಮೊಕದವ್ವ ಮಾದೇವಿ
ಬಣ್ಣನೆ ಕಂಡೀ ನೆಗುಮಾಡೀ ॥ ೨೪ ॥

ಬೆಳ್ಳಿ ಚೂಜೀಲಿ ಪಟ್ಟೀಯ ಹೊದ್ದನೆ
ಚೆನ್ನಕ್ಕೆ ಕುಲುದಾ ಪಾರ್ವತಿ ॥ ೨೫ ॥

ಪಟ್ಟಿಯ ಕಂಡೇ ನೆಗುಮಾಡೀ
"ಆದೀತೇನ್ ಹೊಲುಗ್ಗಾರಾ? ಹೆಳಪ್ಪಾ ಕೂಲಿಯಾ ॥ ೨೬ ॥

ಈಗಳೆ ಕೊಟ್ಟೇ ಕಳಗೂವೆ"
ಚಂದ್ರಶೇಕರ ದೇವಾರು ಗಂಗೀಗೇ ಹೋಗಿದ್ದಾರೆ ॥ ೨೭ ॥

"ಇಂದೆ ಮಜ್ಜನಕ ಬರುವೋರು । ಹೊಲುಗ್ಗಾರಾ,
ಈಗಳೆ ನೀನೂ ಮನೆಗೋಗು" ॥ ೨೮ ॥

ಬೆಳ್ಳೀ ತಟ್ಟೀಲಿ ದುಡ್ಡು ಕಾಸನೆ ತುಂಬೀ
ಉತ್ತಮ ಕುಲುದಾ ಮೊಕುದೋಳು ಮಾದೇವಿ ॥ ೨೯ ॥

"ಇಕಳ್ಳೋ ಹೊಲುಗ್ಗಾರಾ" ಅಂದ್ ಹೇಳ್ತೂ
ಚಂದ್ರಶೇಕರ ದೇವಾರು ಕಾಸೀಗೋಗಿದ್ದವ್ರೇ ॥ ೩೦ ॥

"ಇಂದೇ ಮಜ್ಜನಕೂ ಬರುವೋರು ಹೊಲುಗ್ಗಾರಾ,
ಈಗಳೆ ನೀನೂ ಮನಿಗೋಗು " ॥ ೩೧ ॥

ಬಣ್ಣದ ಮುಟ್ಟಿಲಿ ಶಣ್ಣಕ್ಕಿ ಹೊಯ್ಕಂಡೀ
ಬಣ್ಣದ ಕುಲುದಾ ಮೊಕುದೋರು ಕೊಟ್ಟಾಗೆ || ೩೨ ||

"ಆಕ್ಯಾಕೆ?" ಲಂದಾ ಹೊಲುಗ್ಗಾರಾ
"ಚಂದ್ರಶೇಕರ ದೇವರು ಗಂಗಿಗೋಗಿದ್ದಾರೆ || ೩೩ ||

ಇಂದೇ ಮಜ್ಜನಕೂ ಬರುವೋರು || ಹೋಲುಗ್ಗಾರಾ,
ಈಗಳೇ ನೀನೂ ಮನಿಗೋಗು" || ೩೪ ||

"ಚಂದ್ರಶೇಕರ ದೇವರು ಇಂದೆಲ್ಲೀ ಬರುತಾರೆ?
ಯಾಕೆ ನನ್ ವೊಡುವೇ ಬಲು ಸುಳ್ಳ ಹೇಳುವೇ? || ೩೫ ||

ನೀ ಬಾರೆ ವಂದಾ ನಿಮುಶಕ್ಕೇ"
"ಕೊಟ್ಟರೆ ಕೊಡು"ವಂತು "ಕೊಡದಿದ್ರೆ ಇಲ್ಲಂ"ತು || ೩೬ ||

ಕಡುವಾರು ಅನ್ನು ಇಕ್ಕೀತು || ಮಾದೇವೀ
ಮಾಳುಗಿ ವಳುಗೇ ನೆಡಿದಾಳೆ || ೩೭ ||

ದೊಡ್ಡ ಮಂಚಕೆ ತಕ್ಕ ದೊಡ್ಡ ಮಲ್ಲುಗಿ ಹಾಸೀ
ಸುತ್ತೇ ದೀವುಗಿಯಾ ಹಸುದಿಟ್ಟು ಮಾದೇವೀ || ೩೮ ||

ಪುತ್ರರ ವಡುಗೊಂಡೇ ಕುಳುವದೇ
ಶಣ್ಣ ಮಂಚಕೆ ತಕ್ಕ ಶಣ್ಣ ಮಲ್ಲುಗೆಲ್ಹಾಸೀ || ೩೯ ||

ತಾಣಾದೀವಿಗಿಯಾ ಹಸುದಿಟ್ಟೀ ಮಾದೇವೀ
ಬಾಲರ್ವಡಗೊಂಡು ಕುಳುವಾದೇ || ೪೦ ||

ಮಾಯದಿಂದ ಕದುವಾ ಶಡುಲಿಸಿ ಪರುಮಾತ್ಮ
ಮಂಚಕ್ಕೋಗಿ ರಟ್ಟೀ ಹಿಡುದನ್ಯೇ || ೪೧ ||

"ಪಟ್ಯೇಕೆ ಹರದೀತೆ? ಪಟ್ಯಾಕೆ ಹೊಲುಸೀನೆ?
ಕೆಟ್ಟಿತಲೋ ತನ್ನ ಅವಮಾನ"ವೆನುತಾಲೇ || ೪೨ ||

ಅಲ್ಲೇ ಲೀಸ್ವರರಾ ನೆನಿದಾಳೆ
ಬಣ್ಣಾಕೆ ಹರುದೀತೆ ಬಣ್ಯಾಕೆ ಹೊಲುಸೀನೆ? || ೪೩ ||

ಕೆಟ್ಟಿತಲೂ ತನ್ನಾ ಅವಮಾನ"ವೆನುತಾಲೆ
ಅಲ್ಲೇ ಪರುಮಾತ್ಮರಾ ನೆನಿದಾಳೆ || ೪೪ ||

ಗಡಗಡನೆ ನಡುಗದೆ ಮುರ್ಚಗೊಂಡಿ ಬಿದ್ದಾದೆ
ಅಲ್ಲೇ ಲೀಸ್ವರರಾ ನೆನಿದಾಳೆ || ೪೫ ||

ಅರುಸಿಯೇ ನಾನಾದೆ ಕಿರುಸೀಯೇ ನೀನಾದೆ
ಕಿರುಸೀಯೇ ನಿನ್ನಾ ಗುಣವ ಸೋದಿಸಿ ಬಂದೇ || ೪೬ ||

"ಅಂಜಬೇಡ ದೇವೀ, ಬಲುಗೊಂಬೀ" || ಯೆನುತಾಲೀ
ನೆಗ್ಗಿ ತೊಡಿಮೇನೆ ಕುರ್ಸಕಂಡಿ || ಪರಮಾತ್ಮ || ೪೭ ||

"ಹಾಲು ಗಂಜಿಯು ಅನುಮಾಡೇ" ಯೆನುತಾಲಿ
ಸಾನಕೆ ಪರಮಾತ್ಮರೂ ನೆಡುದಾರೂ || ೪೮ ||

ಪಟ್ಟ ಸೆರ್ಯನೆ ತೆಗೆದು ಸೊಪ್ಪಿನ ಸೆರ್ಯನೆ ಉಟ್ಟು
'ನೋಡುವೆ ಶಿವನಾ ಗುಣವನು' ಯೆನುತಾಲಿ || ೪೯ ||

ಕೊರುಗೂತಿ ಲಾಗೇ ನೆಡಿದಾಳೇ
ಕಟ್ಟಿದ ಮಂಡಿಯು ಬಿಚ್ಚಿ ಬೀರೆ ಹೈಡದೇ || ೫೦ ||

"ನೋಡುವೆ ಶಿವನಾ ಗುಣವನು" ಯೆನುತಾಲಿ
ಕೊರುಗೂತಿ ಲಾಗೇ ನೆಡಿದಾಳೇ || ೫೧ ||

ಕಟ್ಟಿದ ಕರಿಮಣಿ ತೆಗೆದು ಬಿಚ್ಚಾರು ಇಟ್ಟಾಳೆ
ಕಾಕಿಯು ದಂಡೇ ಕರಿಮಣಿ ಸರವಿಟ್ಟು || ೫೨ ||

"ನೋಡುವೆ ಶಿವನಾ ಗುಣವನು" ಯೆನುತಾಲಿ
ಕೊರುಗೂತಿ ಲಾಗೇ ನೆಡಿದಾಳೇ || ೫೩ ||

ಚಿನ್ನದ ಬಳಿಯನೆ ತೆಗದಿ ಮಣ್ಣಿನ ಬಳಿಯನೆ ಲಿಟ್ಟಿ
"ನೋಡುವೆ ಶಿವನಾ ಗುಣವನು" ಯೆನುತಾಲಿ || ೫೪ ||

ಕೊರುಗೂತಿ ಲಾಗೇ ನೆಡಿದಾಳೇ
ಚಂದ್ರಶೇಕರ ದೇವರು ಮಿಂದ್ ಬರು ಯೇಳಿದಲ್ಲಿ || ೫೫ ||

ಸೊಪ್ಪಿನ ಗುಡಿಯಾ ಕಟ್ಟುವ ಸಮ್ಮ್ಯದಲ್ಲಿ
ನಿತ್ತಿ ಜಾನಿಸಿದಾ ಪರಮಾತ್ಮ || ೫೬ ||

ನಾನು ಹೊಗ್ವಾಗೆ ಬಂದವರ್ಯಾರಿಲ್ಲಾಗಿರು
ಬಂದವರ್ಯಾರು ಯೆನುತಾಲಿ || ೫೭ ||

ನಿತ್ತಿ ಜಾನಿಸಿದಾ ಪರಮಾತ್ಮ
ವಂದ ಅಡ್ಕೇ ವಡದಿ ವಂಬತ್ತು ತುಂಡನೆ ಮಾಡಿ || ೫೮ ||

ಬಟ್ಟಿಯ ನೀರು ಹನಿಗೀಸಿ ಮಾದೇವಿ
ಇಕ್ಕಯ್ಯಾ ಹಿಡುದಾ ಪರಮಾತ್ಮ || ೫೯ ||

"ಇಕ್ಕಯ್ಯಾ ಹಿಡುವಕೆ ಹರದಾಡು ಮಕ್ಕಳಲ್ಲ
ಊರಿಗತ್ತುಮನಾ ಮಗಳಲ್ಲ ಸೊಸಿಯಲ್ಲ || ೬೦ ||

ದೇವ್ರ ಕೊರುಳಾನಾ ಪದಕವ ಕೊಟ್ಟರೆ
ನಾ ಬಪ್ಪೇ ವಂದೇ ನಿಮುಸಕ್ಕೇ || ೬೧ ||

ಬೇಡುಗ್ತಿ ಆದರೂ ಪದ್ಕ ಬೇಡ್ಲಿಕ್ಕಿಲ್ಲ
ಪಾರ್ವತಿ ಹೊರತು ಪರರಲ್ಲ || ೬೨ ||

"ನಾನು ಅತ್ತೇ ಹೋದೆ ನೀನು ಲಿತ್ತೇ ಹೋದೆ
ಬಾಲರಿನ್ಯೆಲ್ಲೀ ಇರುವೋರೇ? || ೬೩ ||

ಯಲ್ಲರ ಮನಿಯಲ್ಲಿ ಬೆಲ್ಲ ಬಾಳಿಯ ಹಣ್ಣು
ಯಲ್ಲವ್ರು ಪೂಜ್ಯಾ ಮಾಡೂರು ಗಣಪಂಗೆ || ೬೪ ||

ಉಂಡಾಡೀ ಬತ್ತಾ ಬಯ್ಲಲ್ಲೀ
ಉಂಡಾಡೀ ಬಪ್ಪಾಗೆ ಹರ್ಕಂಡಿ ಬಿದ್ದಾನೆ || ೬೫ ||

ಚಂದ್ರನ ಕಂಡೀ ನಗುಮಾಡೀ
ತನ್ನ ಹಬ್ಬಕ್ಕೂ ನೆಗ್ಗಿಲಾಡ್ಡವರಿಲ್ಲ || ೬೬ ||

ಕಳ್ಳನಾಗು ಸುಳ್ಳನಾಗು" (ಅಂದ್ ಹೇಳಿ ಗಣಪತನು)
ಚಂದ್ರಂಗು ಸಾಪಾ ಲಿಡವಾಗೇ || ೬೭ ||

ತನ್ ಹಾಡೆ ಹೇಳ್ವಕೂ ಯಾವರ ಶಿವಮೂರ್ತ
ಆದಿತ್ತವಾರಾ ಅಮವಾಸೇ ಹೇಳಿದ್ರೂ ॥ ೬೮ ॥

ಕೇಳ್ ಕೇಳ್ದವರೆ ಪಾಪಾ ಪರಿಯಕ್ಕೂ
ಮುತ್ತೈದೇರೆ ಹೇಳಿದ್ರು ಪುತ್ರ ಸಂತನವಕ್ಕು ॥ ೬೯ ॥

ಮುತ್ತೈದೆರಲ್ಲಾ ವಿದಯವ್ರು ಹೇಳಿದ್ರು
ಕೃಷ್ಣಪುರದಲ್ಲೀ ಇರುವೋರು ॥ ೭೦ ॥

- **ಕೆಲವು ಪದಗಳ ವಿವರಣೆ**

| | | |
|---|---|---|
| ಗುಂಡಿ | = | ಆಳವಾದ ನೀರಿನ ಭಾಗ |
| ಕೊಮಿ | = | ಎಚ್ಚರಿಕೆ! |
| ಯೆರೆತುಪ್ಪ | = | ಹೆರೆತುಪ್ಪ, ಗಟ್ಟಿಯಾದ ತುಪ್ಪ |
| ತೆರುಳಿಲ್ಲ | = | ಅವಕಾಶವಿಲ್ಲ |
| ಅಕ್ಯಾಕೆ | = | ಅಕ್ಕಿ ಯಾಕೆ? |
| ನಿಮುಶಕ್ಕೆ | = | ನಿಮಿಷಕ್ಕೆ |
| ಮೂರ್ಚಗೊಂಡಿ | = | ಮೂರ್ಛೆ ಹೊಂದಿ |
| ಕೊರುಗೂತಿ | = | ಕೊರವಿ, ಕೊರವಂಜಿ |
| ಹೈಡದೆ | = | ಹರಡಿದಳು |
| ಇಕ್ಕಯ್ಯಾ | = | ಈ ಕೈಯನ್ನು, ಎರಡೂ ಕೈಗಳನ್ನು |
| ವಿದಿ | = | ವಿಧವೆ |

■ ಹೇಳಿದವರು: ಬೆಳಿಯಮ್ಮ ಪುಟ್ಟುನಾಯ್ಕ, ಹೊಸಾಕುಳಿ.

# ೧೯. ಮಾನಾಡ ಗೋವಿನ ಕಥೆ...

| | |
|---|---|
| ಒಬ್ಬಳ ತಾಯೀಗೇ | ಸುವ್ವಿಲಾಽಲಿಽ |
| ವಬ್ಬನೇ ಮಗುನಂತೇ । | ಸುವ್ವಿಲಾಽಲಿಽ |
| ವಬ್ಬನೇ ಮಗನಿರುತ್ತಿದ್ದಽ | ಸುವ್ವಿಲಾಽಲಿಽಲಾಲೀಽ |

ಮದ್ವಿಮಂಗಽಲಾಗಿದುವೇಽ
ಗಿಲ ಲಾಽಗೀದು ॥

ಹಿಂದ್ತಿರುತವೇಽ ಲಾಗಿದವೇಽ
ಹಿಂದ್ತಿರುತವೇಽ ಲಾಗಿದವೇಽಲಿ ಗೀಳುಽ
ಹಿಂದ್ತಿ ಬಸರಾಽಲ್ಹೊಽತ್ತಿದಾಳೇಽ
ಹಿಂದ್ತಿ ಬಸರಾಲಹೋತ್ತಾಳೇ
ಬಯ್ಕೆ ಬಣ್ಣಾಽಲಾಽ ಕೂಸಾಽನೇ
ಬಯ್ಕೆ ಬಣ್ಣಾಽಲಾಽ ಕೂಸಾಽನೇ
ಮಡ್ಡಿಯಾರೂಽ ಹಡಿದಾಳೊಽ
ಹೆಣ್ಣ ಶಿಸುವ ಹಡಿದಾಳೊಽ
ಚಂದದಿಂದಽ ಸಲಗಾನೇಽ
ತಣ್ಣನೀರಾಽ ಬಿಸುನೀರೇ
ಯೆಣ್ಣಿಲ ಬೆಣ್ಣಿಲ ಸಲುಗಾನೇ

ಎರಡತಿಂಗಳಾ ಮಗುವ ಕಂಡೇ
ಮೂರು ವರುಶಿನ ಮಗಿನ (ಕ)ಂಡೇ

ಮೂರು ವರುಶಿನ ಮಗಿನ (ಕ)ಂಡೇ
ಐದ ವರ್ಸಾವಾಗಿದವೇ ।
ಐದವರ್ಸಾಽವಾಗುರಾಗೇ
ಗೋವಿ ನಾಡಾಳಿ ಅರಸೂ ಬಂದಾಽ
ಹೆಣ್ಣ ಕೇಳುಕೆ ಬಂದಾನೇಽ
"ಕೇಳಿ ಕೇಳಿ ನನ್ನ ಬಾಯಾರಿ [ಬಾವಾರೇ]
ನಿಮ್ಮ ಮಗಳಾ ನನ್ನ ಮಗ್ಗೇ
ಲೀಗಾರು ಕೊಡುಬೇಕೇಽಽ
ಅಂದ್ಹೇಳಿ ಮಾತುಕಽತೇ"
ಯಿಬ್ರರೂ ॥ ಆಡಿದರೇ
ಲಗ್ಗನಕೇಽ ತಯರಾದೋಽ

"ಬೆಸ್ಸಾರ್ ಲಗ್ನಗೆ ಬರ್ತೆವಾಗಾಽ"
ಎಂದ್ಹೇಳಿ ಅಯ್ಯ ನುಡಿದಾನೆಽ
ತನ್ನ ಮನಿಗೇ ನೆಡಿದಾನೇಽ
ಮನಿಗೊಮ್ಮೇ ವೋಗನೇ
ಮದುವಿಗೆಽ ತಯ್ಯರ ಮಾಡೀಽ
ದಿಬ್ಣ ತಕ್ಕಂಡಿ ಬಂಽದನೇ
ಮದುವಿಯೇ ಮುಗುದ್ಹೋದೋಽ
ಮದುವಿಯೇ ಮುಗಿಸೂಕಂಡೇ
ದಿಬ್ಣ ಮನಿಗೀಽ ಮೋಗದೇಽ
ಮಗಿನ ಮದ್ವಿಯಾ ಮಾಡುವರಗಟ
ಅಬ್ಬೇಲ್ಯೆದು ತಿಂಗಳಗಳಾಗಿರಬೇಕು
ಮಗಿನ ಮಧ್ಯಾ ಮಾಡು ಕೊಽಟ್ಟವಾಽ
ಮಽತ್ತೈಡ್ನೆ ಕರ್ಯಲಿಲ್ಲೇಽಽ
ಮಡದಿಯಾಽ ಕರುದಽನೇ ॥

"ಕೇಳತೇನೇಽ ನನ್ನ ಮಡದೀಽ
ಮಽಗೀಽನ ಮೆಯ್ಸಕಯೋಗಬೇಕೇಽ
ಬೇಗದಿಂದಲಿ ಅಡ್ಗಿ ಮಾಡೇ"
ಎಂದ್ಹೇಳೀಽ ನುಡಿದಾಗೇಽ
ಅಟ್ಟಂದ ಮಾತಾಕೇಳಲಾ ಮಡದೀಽ

ಬೇಗದಿಂದಲಿ ಅಡ್ಗಿ ಮಾಡದ್ಲೇ
ಗಂಡನ ಕೂಡೀ ಹೇಳತಾಳೇ
"ಊಟಕೇಗ ಆಗಿದೇಳಿ"
ಅಂದ್ಹಾಳೂಟಕೆ ಬಡೂಸಾಳೆ
ಉಂಡಿ ಕೈಬಾಯ ತೊಳ್ಽದಾನೇ
ಮಂಚದಮೇಗೆಽ ಬಂದುಕೂತಾಽ
ಯೆಲಿ ಎರಡಽ ತಂದಾನೇ
ಆಯುಷ್ಷದಡ್ಕಿ ವಡಿದಾನೇಽ
ಸೋಽಸಿದಾಽ ಬಿಳಿಯೆಲೆಽ
ಹಾಲಿನ ಗಾಳಿಸಿದ ಜೆನಿಸುಣ್ಣ
ಯಲಿ ತಿಂದಿರ 'ಹೋ ಹೋ' ಲೊಗೂರನೆ
ಮಾಳಿಗಿವಳಗೆ ನೆಡಿದಾನೇ

ಕರಿಯ ಕಂಬಳಿ ಹಿಡುದಾನೆ
ಚಿನ್ನದ ಕೊಳಲು ನೂರು ಹಿಡ್ದುಽ
ನೂರು ಚಿನ್ನದ ಕೊಳಲ ಹಿಡಕಂಡೀ
ಕರಿಯ ಕಂಬಳ್ಽ ಹೆಗುಲಾಗೆ
ಹಿಡುಕಂಡೀ ಹೊರುಗೆ ಬಂದಾ
"ಕೇಳು ಕೇಳೇ ನನ್ನ ಮಡದೀ
ಮನಿಯಲ್ಲೇ ಯಿರುತಿರೆಽ
ನಾಗೋವ್ನ ಮೇಯ್ಸುಕೇ ಹೋಗುವಾದಡೇ"
ಆಗ ಹೆಳಿಲ ನುಡಿದಾನೇ

ಕೊಟ್ಗೆ ಬಾಗಿಲ್ಲು ನಡಿದಾನೇ
ಕೊಟ್ಗೆ ಬಾಗ್ಲೂ ತಗುದಾನೇ
ಚಿನ್ನದ ಕೊಳಲ ನುಡಿಸಾನೆ
ನೂರೊಂದು ಗೋವುಗೊಳೊ
ಚಿನ್ನದ ಕೊಳಲಾಽ ನುಡಿಸೂದಾಗೇ
ನೂರೊಂದು ಗೋವ್ಗಳು ಹೊರೂಗ್ ಹೋದೋ

ಕಟ್ಟಿಸುತ್ತೇ ಮೆಯ್ಯತಾವೇ
ಕೊಳಲ ಊದೀನಿತ್ತು ಕಂಡಾಽ
ಗೋವಗೋಳುಽ ಮೆಯ್ಯತಾವಽ
ಯೇಳು ಹಗಲಾಽ ಯೇಳು ರಾತ್ರೀಽ
ಗೋವುಗೊಳು ಮೆಯ್ಯದವೇಽ
ವಂದಿಗೋವೂ ಹೊಡ್ಯಾಚ್ ಬರದಿಲ್ಲೇ
ಅಟ್ಟೇನೀ ಬರಲಿಲ್ಲೋಽಽ
ಯೇಳುಹಗ್ಲೂ ಯೇಳು ರಾತ್ರಿ
ಮೇದಾವ್ ಕಲ್ಲಾಗೆ ನಿಽತ್ತಾಽನೆಽಽ
ಗೋವುಗೊಳೂ ಮೇದಾವೆಽಽ
ನೂರೊಂದು ಗೋವುಗಳೂಽ
ಕಲ್ಲಾಗೀಽ ನೀಽತ್ತಾವೂಽಽ
ಅರಸಿನಮಽಗಽ ನಿತ್ತಲ್ಲೇ
ಹುತ್ತಾಗೀಽ ಬೆಳುದಾವೇ
ಗೋವು ಎಲ್ಲಾ ಅಲ್ಲೇ ನಿತ್ತೋ
ಮನ್ಯಾ ಮಡುದೀಗೇ ಗೊತ್ತಾದಽ
ಮನಿಯಲ್ಲಿ ತೀಡುತಾಳೆಽ
"ಯೆಲ್ಲೆಲ್ಲೂ ಗಂಡ ಇಲ್ಲೆ"
ಅಂದ್ಹೇಳಿ ತೀಡತೆಽ ಬಿದ್ದಾಳೆಽ

ಆರೂಮೂರಾ಼ ತಿಂಗ್ಯಾಳು ತುಂಬಿ಼
ಆರೂಮುರಾ಼ ತಿಂಗ್ಯಾಳು ತುಂಬಿ಼
ಅವಳಾರೂ಼ ಹಡಿದಾಳೇ

ಗಂಡ ಶಿಸುವಾಗಿ ಹಡಿದಾಳೆ಼

ಹಸುನೀರಾ಼ ಬಿಸುನೀರಾ಼
ಗಂಡಶಿಸವಾಗಿ ಸಲು಼ಗಾಳೆ
ವಂದ ದಿವ್ಸನಾಗಿ ಹುಡ್ಗುನ ಕಂಡ್ರೇ
ವಂದ ತಿಂಗಳ಼ ಹುಡುಗ್ನಂತೇ

ಹುಡುಗ಼ನೇ ಹೆಚ್ಚಿದನೇ
ವಂದ ತಿಂಗಳ ಹುಡ್ಗನ ಕಂಡ್ರೇ಼
ಲೈದ ವರ್ಸಿನಾ಼ ಹುಡುಗ್ನಾ ಲೇ಼
"ಕೇಳು ಕೇಳೇ಼ ನನ್ನಾ ತಾಯೀ಼
ನಾ ಬರ್ವ ಸರ್ವಾ ಕಲಿಯಲ್ ಬೇಕೇ಼

ಪಾಟಿ ಪುಸ್ತಕ ತಗಿದಿಕೊಡೇ
ನೂರೊಂದು ಮಕ್ಳ಼ ಸಂಗ಼ಡೆ಼
ನಾ ಬರ್ವ ಕಲುಕೇ ಹೋಗ್ತೇ ತಾಯೀ
ನಂಗ ಪಾಟಿಪುಸ್ತಕ ತಗದಿಕೊಡೇ"

ಅಷ್ಟಂದ್ ಹೇಳೀ ಹೇಳ್ತಾ ಹುಡುಗಾ
"ಕೇಳಿ ಕೇಳೋ ನನ್ನ ಮಗನೇ
ನೀ ಬರ್ವಸರ್‌ಕ್ಕೆ ಹೋಗಬೇಡಾ"

ಹಾ಼ಲ್ಹಲ್ಲೊ ಹೂತಿಲ್ಲವೊ
ನೆತ್ತಿ ಸುಳಿಯೆ ಮುಚ್ಚಲಿಲ್ಲೊ
ನೀ । ನೀಗೇ಼ ಹೋಗಬೇಡಾ಼"

“(ನೀ)ನ್ ಹೇಳದೂ ಕೇಳುದಿಲ್ಲೆ
ನನ್ಗ್ ಪಾಟಿಪುಸ್ತಕನಾ ತಗಿಸಿಕೊಡೇ”
ಅಟ್ಟಂಬೂ ಮಾತಽ ಕೇಳಾಳೇ
ಪಾಟಿಪುಸ್ತಕಽ ತಂದೇಕೊಟ್ಲೊ
ನೂರೊಂದ ಮಕ್ಕಳ ಸಂಗಽಡ ಹೋಗಾನೇ
ವಂದೆ ದಿವ್ಸೆ ಬರುಕಲುತಾನೇಽ
ಮನಿಗಾರೂಽ ಬಂಽದಾನೇ
“ಕೇಳು ಕೇಳೇ ನನ್ನಾ ತಾಯೇ
ನಾಽ ಬರ್ವಸರವಾ ಕಲ್ತಿಬಂದೇ [ಕಲ್ತು ಬರುವೇ?]
ನಾಽ ಜೋಡಿಗಳಾಟಕೆ ಹೋಗಬೇಕ್ ತಾಯೇ
ಲಂದ್ ಹೇಳೀಽ ನುಡೀತಾನೆ
“ನೂರೊಂದೂಽ ಬಣ್ಣದ ಚೆಂಡೇ

ನನ್ಗೆ ಮಾಡಿಸೀಽಽ ಕೊಡು ತಾಯೇ
ನೂರೊಂದು ಬಣ್ಣದ ಚೆಂಡೂಽ”
ಅಟ್ಟಂದ ಮಾತಾಽ ಕೇಳಾಳೇ
ನೂಽರೊಂದೇ ಬಣ್ಣದ ಚೆಂಡೇ
ಮಾಡಿಸಿಕೊಟ್ಟಾಳೇಽ
ನೂರೊಂದ ಚಂಡಽ ಹಿಡಽಕಂಡಾ
ಮಾನಾಡ ಬಯ್ಲಿಗೇ ನಡುದಾನೆ.

ನೂಽರೊಂದುಽ ಮಕ್ಕಳ ಸಂಗಡೇಽ
ನೂರೊಂದ್ ಚಂಡೂಽ ಹಿಽಡುಕಂಡೀ
ಮಕ್ಳಪಂಗ್ತಿಗೆ ಆಟಕೆ ನೀತ್ತಾನೆ
ಆಟಾಡಿದ ಆಽಟಽ ಯೆಲ್ಲ ಗೆಲೂತಾನೇ
ನೂರೊಂದು ಮಕ್ಳ ಜರೀತಾರೇ
“ಅಪ್ನ ತಿಂದಽ ಬೋಳೀ ಮಗನಽ

ಅಪ್ನ ತಿಂದ ಸೂಳಿರಮಗನೇ
ನಾವ್ ನೂರೊಂದು ಮಕ್ಕಳದೇ
ನೂರೊಂದ್ ಚಂಡೂ ಪೂರಾ ಗೆಽದ್ದನೇ"
ಅಂದ್ ಹೇಳೀ ಜರಿಽತಾರೆಽ
ಅಟ್ಟಂದ ಮಾತಾ ಕೇಳನೆ ಹುಡುಗಽ

ಚಂಽಡೊಂದಽ ವಗಿದಾನೆಽ
ಮಽನೀಗಾರೇಽ ವೋಡಿಬಂದಽ
"ಕೇಳು ಕೇಳೇ ನನ್ನ ತಾಯೇಽ
ನೂಽರೊಂದು ಚೆಣಿಕಪ್ಪು
ನೂರೊಂದು ಚೆಣಿಗೆಂಡೇಽ
ನಂಗ್ ಮಾಡಿಸಿಕೊಂಡು ತಾಯೇ"
ಅಟ್ಟೊಂದ್ ಮಾತಽ ಕೇಳಾಳೇ
ನೂರೊಂದ ಕಪ್ಪು ನೂರೊಂದ್ ಗೆಂಡೇಽ
ಮಾಡಿಸೀಽ ಕೊಽಟ್ಟಾಳೆ
ಅದನ್ನೆಲ್ಲಾಽ ಹಿಽಡುಕಂಡೇಽ
ಮಾಽನಾಡ ಬಯ್ಲಿಗೇ ನೆಡದಾನೆ
ನೂರೊಂಡ ಮಕ್ಕಳ ಸಂಗಡಽ ಆಡತಾನೇಽ
ಆಡಾಡಿದ ಆಟಽ ಗೆಲುತಾನೇಽ
ನೂಽರೊಂದ ಮಕ್ಳ ಜರೀತಾರೆ
"ನಮಗೊಂದು ಆಟಾ ಬಿಡಲಿಲ್ಲೇ
ಪೂರಾ ತಾನೇಽ ಗೆದ್ದುಬಿಟ್ಟಾ"
ಅಂಽದ್ ಹೇಳೀಽ ಜಽರೀತಾರೇಽ
ಆಟ್ಟೊಂದ್ ಮಾತಾಽ ಕೇಳನ ಹುಡುಗಾ
"ಅಪ್ಪನ ತಿಂದಾಽ ಬೋಽಳಿ ಮಗನಾಽ
ಅಪ್ಪನ ತಿಂದಾಽ ಸೂಳೆರ ಮಗನೇ
ಆಡಾಡಿದ ಆಟಽ ಗೆದ್ದು ಕಂಡಾಽ"

ಅಂಽದ ಹೇಳೀಽ ಜರದಾರೇಽ
ಆಽಟ್ಟೊಂದಽ ಶೆಂಡಾನೇ
ಕಪ್ಪು ಗೆಂಡೀ । ನಗುದಾನೇ
ಮನಿಗಾರೂಽ ವೋಡೇ ಬಂದಾಽ
"ಕೇಳು ಕೇಳೇಽ ನನ್ನ ತಾಯೀ
ನನ್ನ ಅಪ್ ಯೆಲ್ಲೀಗ್ ಹೋಗಿದ ತಾಯೇ?
ನನ್ ಅಕ್ಕೈಲ್ಲೀಗ್ ಹೋಗದೆ ತಾಯೇ?"
ಅಂದ್ಹೇಳಿ ಕೇಳಾನೇ
"ಕೇಳು ಕೇಳೋ ನನ್ನ ಮಗನೇ
ನಿನ್ನಪ್ಪ ಸಂಗ್ತೀ ಹೇಳ್ತೆ ಮಗನೇ
ನಿನ್ನಪ್ಪ ಸಂಗ್ತೀ ಹೇಳುತೇನೆಽ"
ಅಪ್ಪನ ಸಂಗ್ತೀ ಹೇಳದೆ ತಯೇ
"ನಿನ್ನ ಆರೂ ಬಸುರಿದ್ದಾಂಗೆಽ
ಅಕ್ಕ ಮದಿಯಾ । ಮಾಡಿಕೊಟ್ಟರೊ
ನೀ ಐದ ತಿಂಗಳಽ ಗರುಬಾಲೇ
ಅಕ್ಕನ ಮದಿಯಾ ಮಾಡಿಕೊಟ್ಟರೊ
ಐದ ವರುಸಿನ ಮಗುವಾಲೇ

ಮಡದಿಯ ಮಾಡಿಽ ಕೊಟ್ಟ ಮೇಲೇ
ಮತ್ ಯೆಯ್ದ್ವಂಗೆ ಕರ್ಯಲಲ್ಲೇ
ನಿನ್ನಪ್ಪ ಲಂಬವನು
ಗೋವ ಮೇಸುಕೆ ಹೋಗಿರು ಮಗನೇ
ನೂರೊಂದು ಗೋವುಗಳೇ
ಬಿಟ್ಟುಕಂಡೀಽಽ ಹೋಗೀರೂಽಽ
ಮಾನಾಡ ಬಯ್ಲಿಗೆ ಹೋಗಿರಂಬೂ
ಬಯ್ಲುಸುತ್ತೆ ಗೋವುಗಳೂಽ
ಮೆಯ್ತಿರಂದ್ರೂ ಮಗನೇ ಕೇಳು

ನಿನ್ನಪ್ಪಾ ಅಲ್ಲಾರೂಳ್ಳದಽ
ನಿತ್ತಲ್ ಹುತ್ತೇ ಬೆಳ್ದರಂಬ್ರೂಽ
ನೂರೊಂದ್ ಗೋವ್ಗಳೂ ಕಲ್ಲಾಗೀ
ನಿತ್ತವ್ಯಂಬ್ರೂಽ ಮಾನಾಡ ಬೈಲಲೀ"
ಅಟ್ಟೊಂದ್ ಮಾತಾ ಕೇಳಿದ ಮಗನೇ
"ನಾಽವಾರೂ ಹೊಲಿಲ ಮಗುನೇಽ"
ಅಟ್ಟೊಂದಾರೂಽ ಕೇಳಾನೇ
ಮಾಳುಗೀಽ ವಳುಗೆಽ ಹೋದಾ
ಬಿಸಲಿಗೆ ಸತ್ತಗೀ ಹಿಡುದಾನೇ
ಕಾಲಿಗೆ ಚಮ್ಮದ ಕಿರುಮೆಟ್ಟೀ
ಬಿಗ್ದಿ ಸತ್ತಗಿ ಹಿಡುಽದಾನೇಽ
ಬಿದ್ದ ದಾರಿಯ ಹಿಽಡಿದಾನೇ
ತಾಽಯವ್ವೀಽ ಹೇಳುತಾಳೇಽ
"ಕೇಳು ಕೇಳೋ ನನ್ನ ಮಗನೇಽ
ಆಸ್ರಿಗ್ ಹಾಲಾಽ ಕುಡಿಮಗನೇ
ಹಸ್ವಿಗ್ ಹಣ್ಣ ಮೆಲಿ ಮಗನೇ"

ಅಂದ್ಹೇಳಿಽ ತಾಯಿ ನುಡಿತಾಳೇ
ಯೇನೇನ್ಽ ಹೇಳ್ರು ಕೇಳಲಿಲ್ಲೆ
ಬಿದ್ದ ದಾರಿಯ ಹಿಡಿದಾನೇ
ಗೋವಿನಾಡಽ ಪಟ್ಟಕ್ಕೋದಾಽ
ಅಕ್ಕನ ಮನಿಗೇ ಹೋಗಾನೇಽ
ಅಲ್ಲೊಂದ್ ಮೂರ್ ಹಾದೀ ಕೂಡಿದಲ್ಲಿ
ಅಽಲ್ ಹೋಗಿ ನಿತ್ತು ಕಂಡಿಽ
ಯಾಽವ್ ಹಾದ್ಯಾ ಹೋಗಬೇಕೆಂದಽ

ಇವನಿಗೇ ಗೊತ್ತಿಲ್ಲ;
ನಿತ್ತಿ ಆಲಚ್ನೆ ಮಾಡಾನೇಽ

ಅಲ್ ಅಕ್ಕಾಲಂಬವ್ವೇ
ಅಲ್ಲೊಂದ್ ಬಾವಿಯಿರುತಾದೇ
ಕೋಡು ಕರಗೀಽ ಹಿಂಡುಕಂಡೀಽ
ನೀರಿಗೇಽ ಬಂಽದಾಳೇಽಽ
ಕೊಡಕರಗೀಽ ಹಿಡುಕಂಡೀ
ಹುಡುಗಾನೆಽ ಹೇಳುತಾಽನೇ
"ಕೇಳುಽ ಕೇಳೇಽ ಯೆಲೆ ಅಕ್ಕಾಽ
ನನ್ನಕ್ಕಮನೀ ಯಾವುದೆಂದೂಽ
ನನಗಾದ್ರೂ ಗೋತ್ತಿಲ್ಲೆ
ಆಯ್ದು ವರುಸಿನ ಮಽಗು ಮದ್ವೇ
ಮದಿಯ ಮಾಡಿ ಕೊಟ್ಟೆದಂಬ್ರೇ
ನಾಽನು ಅಕ್ನ ಮದಿಯಾ ಮಾಡುವೊಳಗೆ
ನನ್ ತಾಯಿ ಐದ ತಿಂಗ್ಳ ಗರುಬೆಣ್ಣೇ
ಅಕ್ಕನ ಮದ್ವಿ ಮಾಡಿಕೊಡುವಾಗೇ
ನನಗಾದ್ರೂ ಗೊತ್ತಿಲ್ಲೇ
ನನ್ನಕ್ನ ಮನಿಯಾ। ತೋರಿಸಿಕೊಡೇಽ
ಅಕ್ನ ಮದಿಯಾ ಮಾಡಿರೋದ"
ಅಂದ್ಹೇಳಿ ನುಡುದಾನೆಽ
ಅಟ್ಟಂದ ಮಾತಾಽ ಕೇಳಾಳವ್ಳೂ
ಕೋಡುಕರಗೀಽ ಜರುದಾಳೇ
"ಕೇಳು ಕೇಳೋ ನನ್ನ ತಮ್ಮ
ನನ್ನ ತಮ್ಮ ನೀ ಕೇಳೋ

ನಿನ್ನ ಅಕ್ನೇಽ ನಾನಾಲೋಽ ಸುವಿಲಾಲೇ"
ಅಂದೇ ಹೇಳ್ ವೋಡೀ ಬಂದಾಳೇಽ
ತಮ್ಮನ ಕರಕ್ಕಂಡ್ ಹೋಗಾಳೆ
ತನ್ನ ಮನಿಗೇ ಹೋಗಾಳೆಽ

ಮಂಚೆ ಹಸಿಯಾ। ಹರುಗಾಳೇೕ
ಕಾಲ ತೊಳುಕೇೕ ನೀರು ಕೊಟ್ಲು
ಮಂಚಕ್ವಾಸೀ ಹರುಗಾಳೇೕ
ಆಸ್ರಿಗ್ ಹಣ್ ಹಾಲ ಕೊಡುತಾಳೇ
ಕೊಟ್ಟ ಹಾಲಾೕ ಕುಡುದಾನೇ

ಹಣ್ಣಹಾಲು। ಮೆಲುದವ್ನೇ
"ಕೇಳು ಕೇಳೇ ನನ್ನಾಲಕ್ಕ
"ಬಾವ್ಯೆಲ್ಲೀಗ್ ಹೋಗರ್ಯೇ?"
ಅಂೕದ ಹೇಳೀಕೇಳಾನೇ
"ಕೇಳು ಕೇಳೋ ನನ್ನ ತಮ್ಮೃ
ನಿನ ಬಾೕವಾೕನೇ ಲಂಬವ್ರೋೕ
ದೊರುತನಕೇ ಹೋಗಾರೆ."
ಅಂದೇ ಹೇಳೀೕ ನುಡಿದಾಳೇೕ

ಮಂಚದ ಮೇಲೆ ಕೂತಾನೆ
ಇನ್ನಾರೂ ಅಲ್ಲೇ ವರುಗಾನೇೕ
ಇವಳ ಅಡುಗೀನೇೕ ಮಾಡುತಾಳೇ
ಹನ್ನೈಡ್ ಗಂಟೆ ಸಮ್ಯದಲ್ಲೀೕ
ಬಾವ ಮನಿಗೇೕ ಬಂದನೇೕ
ಇವ ಮಂಚದ ಮೇಗೆ ವರುಗಾನೆ
ಮಂಚ್ದ ಮೇಗೆ ವರ್ಗದ ಕಂಡಾನೇೕ
ಮಾಳಾಗಿ ವಳುಗೆ ಹೋಗಾನೇೕ
ಪಟದಕತ್ತೀ । ತಂೕದಾನೇ
"ಯಾವನ್। ಮಂಚ್ದ ಮೇಗೆ ವರ್ಗದಾನೆ?"
ಪಟದ ಕತ್ತೀೕ ತಂೕದಾನೆ
ಹೊಡುವಾಕೆ ಕತ್ತಿ ನೆಗುದಾನೇ

ಮಡದಿಯು ಕಂಡಾಳೇ
"ಕೇಳಿ ಕೇಳೀಽ ನನ್ನ ಸ್ವಾಮೀಽ
ಯಾರಂದೀಽ ಕಡಿತೀರೀಽ
ನನ ಬೆನ್ನಿಗಿದ್ದೂಽ ತಮ್ಮನಾಲೇಽ"
ಅಟ್ಟೊಂದ್ ಮಾತಾ ಕೇಳಾನೇ
ನೆಗ್ದ ಕತ್ತೀಽ ಇಳಿಸಾನೆಽ
ಮಂಚದ ಮೇಗೆ ಬಂದೀ ಕೂತಾ

"ಕೇಳಿ ಕೇಳೀ । ನನ್ನ ಬಾವಾ
ಈಗ ಬಂದ್ರಾ । ನನ್ನ ಬಾವಾ"
ಅಂದಿ ಮಾತಕತ್ಯಾ ಯಾಡಾರ್ಯೆಽ
ಊಟಕೆಽ ಆಽಗಿದವೊಽ
ಬಾವಾ ನೆಂಟಾಽ । ಮಿಂಽದಾರೇ
ಊಟಕೆ । ಹೋಽಗರೇಽಽ
ಊಟ ಉಪಚಾರ ಮುಗಿದಾದೆ
ಮಂಚ್ದ ಮೇಗೆ ಬಂದಿಕುಂತಾರೇಽ

"ಕೇಳಿ ಕೇಳೀ ನನ್ನ ಬಾವಾ
ಯೇನು ಬಂದ್ರೀ ಬಾವ ಕೇಳಿ?
ಬಂದ ಕಾರಣ ಹೇಳುಬೇಕೇಽ"
ಅಟ್ಟೊಂದ ಮಾತಾಽ ಕೇಳ ನುಡಿದಾಽ
"ಕೇಳಿ ಕೇಳಿ ನನ್ನ ಬಾವಾ
ಅಕ್ನ ಮದಿಯಾಽ ಮಾಡಿಕೊಟ್ಟ ಮೇಲೆ
ಮತ್ತ್ಯೆಯೇ ಕರ್ಯಲಿಲ್ಲೋಽ
ಮದಿಮಾಡೀಽ ಕೊಡುವಂಗೇಽ
ನಾನ್ಯೆದ ತಿಂಗ್ಳೂ ಗಽರುಬಂದ್ರೇ
ಅದ್ಕ ಕರುಕಂಡೀಽ ಹೋಽಗಬೇಕಂದೀ

ಇಲ್ಲಿವರಿಗೂ ಬಂದೆ ಬಾವಾ
ಗಂಡಹೆಣ್ತಿ ಯಿಬ್ರೂ ಸವ್ನೇಳೀ
ನಮ್ಮ ಮನಿಗೇಽ ಹೋಽಗುವನೇಽ"
ಅಂದ ಹೇಳೀ ನುಡೂದಾನೇಽ
"ಕೇಳು ಕೇಳೋ ನನ್ನ ಬಾವಾ
ನಾಽನಾಽದ್ರೂ ಬರ್ವದಿಲ್ಲೆ
ನಿಮ್ಮಕ್ನ ಕರ್ಕಂಡ್ ಹೋಗಿ"
ಲಂದ್ ಹೇಳಿ ನುಡುದಾನೇಽ ಬಾವಾ
ಅಟ್ಟೊಂದ್ಽ ಮಾತಾ ಕೇಳಾನ್ ಹುಡುಗಾಽ

ಅಕ್ಕನ ಕರ್ಕಂಡಿ ಸವು ನೈಡ್ದಾ
ತನ್ನ ಮನಿಗೇಽ ಬರುವನೇ
ತನ್ನ ಮನಿಗೇಽ ಬಂದಾನೇ
ಅಕ್ಕನ ಮನ್ಯಲ್ಲೇ ಬಿಟ್ವಾನೇ
ಮಾಳುಗಿ ವಳಗೇಽ ಲ್ಹೋಗಾನೇ
ಚಿನ್ನದ ಪಿಕಾಸು ತಗುದಾನೇ
ಚಿನ್ನದ ಪಿಕಾಸ ಹಿಡುಕಂಡಾ
ರನ್ನದ್ವಾರೀಽ ಹಿಽಡುಕಂಡಾಽ
ಮಾನಾಡ ಬಯ್ಲಿಗೇಽ ಹೋಽಗಾನೇಽ
ಮಾನಾಡ ಯೇಳಿ ಕಟ್ಟೇಽ ಸುತ್ತಮುತ್ತೇಽ
ನೂರೊಂದ ಗೋವೂಽ ಕಽಲ್ಲಾಗೀಽ
ಕಟ್ಟಿಸುತ್ತೇಽ ನಿಽತ್ತದೋಽ
ಅಪ್ಪ ಸತ್ತಲ್ಲೇ ಹುತ್ತವ ಬೆಳದದೇ
ಹುತ್ತಾದ್ರೂ ಕಂಽಡಿದರೇ
ದೊಡ್ ಪರ್ವತ ಗುಡ್ಡೀ ಕಂಡಂತೇ
ಹುತ್ತದೂಽ ಬೆಳುದದೇಽ
ಅಟ್ಟಂದಾ ಕಂಡಾನೇ

ಚಿನ್ನದ ಪಿಕಾಸೂ ಹಿಡಿದನೇ
ಹೊತ್ತಾರೂ ಅಗುದಾರೇ
ಹಾ಼ರೀಲಿ಼ ಬರುಗಾನೇ಼
ಅಂತಾ ಹುತ್ತಾ ಅ಼ಗುದಾನೇ
ಹುತ್ತ ಅಗುದು ಕಂ಼ಡಿದಾರೇ
ಯೆಡ್ಕನ ಕಾಲಾ಼ಕಿರಕಣ ಬಿರಳೂ಼
ಯೆಲ್ಗಿನ ಪುಡಿಯೇ಼ ಸಿ಼ಕ್ಕದೇ಼
ಯಡ್ಕನ ಕಯ್ಯಾ ಉಕ್ಕಿನ ಬೆರಳೂ
ಎಂದ ಯೆಲ್ಗಿನ ವಾಡಿಯೆ ಸಿಕ್ಯಾದೇ
ಯೆಲ್ಗಿನ ಚೂರು ಹಿಡುಕಂಡಾ಼
ಬಣ್ಣದೊಸ್ತ್ರಾ ಕಟ್ಟುಕಂಡಾ಼
ಗಂಗೀ ಜರುದೀಗೀ ವ್ಹೋಗನೇ಼
ಚಂದು ಮಾಡಿ಼ ತೊಳುದಾ಼ನೇ಼
ಹಿಡುಕಂಡೀ಼ ಬಂ಼ದನೇ಼
ಮಾನಾಡ ಬಯ್ಲಿಗೀ ಬಂದನೇ
ಕಟ್ಟೆ ಹತ್ರೀ಼ ಕೂತನೇ
ಬಣ್ಣದೆಲಿವಸ್ತ್ರ ತೆಗುದನೇ಼
ಹಾರುಮಾಡೀ಼ ಹಾಸುಗಿಂಡೀ಼
ಜಂಗ್ನ ಪಾಡಿಯಾ಼ ಕೂರ್ಸಾನೇ
ವಸ್ತ್ರದ ಮೇಲೇ಼ಲಿರುಸಾನೇ಼
ತೀಡಿತೇ಼ ಕೂತನೇ಼
ವಳ್ಳ಼ಮ಼ದ್ದಾತ್ರೀ಼ ಕಾಲದಲ್ಲೀ
ಪಾರ್ವತಮ್ಮ಼ ಪರಮೇಸ್ತ್ರ ದೇವ್ರು
ಮ಼ದ್ದಾತ್ರೀ ಕಾ಼ಲುದಲ್ಲೇ಼
ಊರ ಚಂಚರಣೀಗೆ ಹೋಗುತಾರೇ
ಇವ ಆರು ತೀಡುತಾ಼
ಹುಡ್ಗ ತೀಡುದು ಕೇ಼ಳರೇ಼

ಪಾರ್ವತಮ್ಮಽ ಅಂಽಬದೇವಿ
“ಕೇಳು ಕೇಳೀ ನನ್ನ ಸ್ವಾಮೀ
ಅಽನಂಬಾ ಅಡವಿಲೀಽ
ಮನ್ಸರ ಗೋಳೂ ಕೇಳುತಾವೇಽ
ನಾವಽಲ್ಲಾರೂಽ ಕಾಣಬೇಕೇಽ”
ಅಂದ್ಹೇಳಿ ನಡಿದಾಳೇಽ
“ಕೇಳು ಕೇಳೇ ನನ್ನ ಮಡದೀಽ

ನಾವಲ್ಲೀಗೇ ಹೋಗುದು ಬೇಡಽ
ನಾ ವೂರಸಂಚರಣಿಗೆ ಬಂಽದವೂ
ನಾವಲ್ಲೀಗೆ ಹೋಗುದು ಬೇಡಾಽ”
ಅಂದ್ಹೇಳಿ ಪರಮೇಸ್ರ ದೇವ್ರು
ಯೇನೆನ್ ಹೇಳಿದರೂಽ ಕೇಳುದಿಲ್ಲೇ
“ಕೇಳು ಕೇಳೀಽ ನನ್ನ ಸ್ವಾಮೀಽ
ಕಂಡುಕಂಡೇ ಹೋಗಲುಬೇಕೆ”
ಅಂತ್ಹೇಳೀ ನಡುದಾಳೇಽ
“ಕೇಳು ಕೇಳು ಮಳ್ಳ ರಂಡೇ
ಹೆಂಗ್ಸುರಂಡೇ ನಾಽ ಕರ್ಕಂಡ್ ಬಂದೇ
ನಾನೇ ಹೋಗುದಾರೀಲಿ ಹೋಗುಕೊಡುದಿಲ್ಲ”
ಅಂದ್ ಹೇಳಿಽ ನುಡಿತಾರೇಽ

ರತವಾಽ ತಿರ್ಗ್ಸ್ಕಂಡಿ ಬಂದಾಳೇ
ಕಟ್ಟಿ ಬುಡುಕೆ। ಬಂಽದಾರೇಽ
“ಕೇಳು ಕೇಳೋಽ ಯೆಽಲಽ ಹುಡುಗಾಽ
ನಿನ್ಗ್ ಯೇಽನಾಯ್ತೋ? ಹೇಳೂ ಮಗನೇಽ”
ಅಂಽದ್ ಹೇಳೀಽ ನುಡುದಾಳೇಽ
“ನಿನ ತಂದಿ ಪಾದಾಽ ಹಿಡ್ಕಮಗುನೇ

ನಿನ್ಗ ಬಂದ್ ಕಷ್ಟ ಪರಿಹರಮಾಡವ್ರೊ‌಼"
ಅಟ್ಟಂದ್ ಮಾತಾ ಕೇಳಾನೇ ಹುಡ್ಗಾ
"ಕೇಳು ಕೇಳೂ ನನ್ನ ತಂದೆ಼
ನನ್ನ ನೂ಼ರೊಂದೂ ಗೋವುಗಳೂ
ಕಲ್ಲಾಗೀ ನೀತ್ತಾವೇ಼
ಜೀವಮಾಡೀ ಕೊಡು ತಂದೇ಼"
ಅಂದ್ಹೇಳಿ ಪಾದ಼ ಹಿಡುದಾನೇ಼
"ನನ್ನಪ್ಪನೇ಼ ಲಂಬವ್ನೇ಼
ಹುತ್ತಾಗೀ಼ ಬೆಳುದಿದಾ಼
ಮೆಯ್ದ್ಹಾ ಯಲ್ಗಿನ ಪುಡಿಯಾ ಹೆಕ್ಕಂಡಿರುಸಾನೇ

ಜೀವಮಾಡೀಕೊಡು ತಂದೇ"
ಅಂದ್ಹೇಳಿ ಪಾದ ಹಿಡುದಾನೇ಼
ಅಟ್ಟೊಂದ ಮಾತಾ ಕೇಳಾವ್ರೇ
ಅಮೃತದಗಿಂಡೀ ನೀರು ಚೆಲ್ಲೀ಼
ನಾಗ ಬೆತ್ತಾ ಯೆಳಿದಾನೇ಼
ನೂರೊಂದು಼ ಗೋವುಗಳೊ
ಜೀವಾಗಿ ನಿ಼ತ್ತಾವೆ಼
ಅರಸಿನಾ ಮಗ ನಾಗಬೆತ್ತಾ಼ ಯೆಳುದಾನೇ
ಅಮೃತಗಿಂಡೀ ನೀರ ಚೆಲ್ಲಾನೇ಼
ಜೀಮಮಾಡಿ ನಿಲುಸಾನೇ಼
"ಕೇಳು ಕೇಳೋ಼ ನನ್ನ ಮಗನೇ
ನೀಗೋವುಗಳ್ಗೆ ಆಯ್ಸು ಬೇಡಿಕೊಳೋ"
ಅಂದ್ಹೇಳ್ ಪಾರ್ವತಮ್ಮ಼ ನುಡಿದಾಳೇ
ಅಟ್ಟೊಂದ್ ಮಾತಾ ಕೇಳಾನ್ ಹುಡುಗಾ಼
"ಕೇಳು ಕೇಳೂ಼ ನನ್ನ ತಂದೇ಼
ನನ್ ನೂರೊಂದು ಗೋವುಗೋಳ್ಗೇ಼

ನಿಜು ಆಯ್ಸು ಕೊಡು ತಂದೇऽ"
"ನಿನ್ನ ತಂದಿ ನಿಜು ಆಯ್ಸು ಬೇಡಿಕೊಳ್ಳೋ"
"ಕೇಳು ಕೇಳೂ ನನ್ನ ತಂದೆ
ತಂದಿನ್ ನಿಜವಾಯ್ಸು ಕೊಡಬೇಕೇऽ"
ಅಂऽದ್ ಹೇಳಿ ನುಡೂದಾನೇऽ
ಅಟ್ಟಂದ್ ಮಾತಾ ಹೇಳಾನೇ
ತಂದಿಗಾಯಿಸ ಕೊऽಟ್ಟಾನೇ
"ಕೇಳು ಕೇಳೇ ನನ್ನ ಮಡದಿ
ನಮಗಾದೇऽ ಹೊऽತ್ತಾದೋ
ನಾವೂರ ಸಂಚರ್ಣಿ ಹೋಗಬೇಕು"
ಅಂದಿ ರತದಾವಣಿ ಹಾಕುತಾನೇ
ಅऽವ್ರಾರೂ ಹೋऽಗಾರೇऽ
ಹುಡುಗ ಅಂऽಬವಾ
ನೂರೊಂದೂऽ ಗೋವುಗೋಳೇऽ
ಮನಿಗಾರೂऽ ಹೊಡುಕಂಡೀऽ
ತಂದಿಯಾ ಕರಕಂಡೀऽ
ತನ್ನ ಮನಿಗೇऽऽ ಬಂದನೇऽऽ
ತಂದಿಯಾऽ ಕರऽಕಂಡೀ
ಗೋವುಗೋಳऽ ಹೊಡಕಂಡೀ
ಮನಿಗಾದ್ರೂ ಬಂऽದಾನೇ
ಮನಿಯಲ್ಲಿ ತಾಯವ್ವೀ
ಅಕ್ಕಮ್ಮ ಇರುತಾರೇ
ಮನಿಗ್ ಬಂದೀ ಊಟೋಪಚಾರ
ಸಾಕು ಸಂತೋಷದಿಂದಲೇ

ಮಾಡುಕಂಡೀ ಇರುತಿರೆ
ಯೆಲ್ಲವ್ರೂ ಇರುತಿರೆऽ

ಅದು ವಂದು ದಿವಸಾꣳ ಕಳದದೇ
ಹೊತ್ತು ಮುಂಚೇ ಯೆꣳದ್ದಾನೇ
"ಕೇಳು ಕೇಳೇ ನನ್ನ ತಾಯಿ
ನಾꣳ ಗೋವ ಕಾವ್ಕೇ ಹೋಗಬೇಕೆꣳ"
ಅಂದ್ಹೇಳಿ ನುಡಿದಾನೇꣳ
"ಬೇಗದಿಂದೇ ಅಡ್ಗಿಮಾಡೇꣳ
ನಾ ಗೋವ ಮೇಯ್ಸುಕꣳ ಹೋಗಬೇಕೆ"
ಅಟ್ಟೊಂದ ಮಾತಾ ಕೇಳಾಳ ತಾಯೀ
ಬೇಗದಿಂದꣳ ಅಡ್ಗಿ ಮಾಡದ್ಯೇ
"ಕೇಳು ಕೇಳೋ। ನನ್ನ ಮಗನೇ
ಊಟಕೇꣳ ಲಾꣳಗಿದೋ
ಸಾನು ಜಪವಾꣳꣳ ಮಾಡಿಬಾರೋ"
ಅಟ್ಟಂದ ಮಾತಾ ಹೇಳಾಳ ತಾಯೀ
ಊಟಕ್ಕೇꣳ ಬಡುಸಾಳೇ
ಸಾನ ಜಪವಾ ಮಾಡಿಕಂಡಿ
ಊಟ ಉಪಚಾರಾ ಮಾಡಾನೆ
ಊಟ ಉಪಚಾರಾ ಮಾಡಕಂಡಿ
ಮಾಳಗಿ ವಳಗೇꣳ ಹೋಗನೇꣳ
ದುಕ್ಕದ ಕೊಳಲಾꣳ ತಗುದಾನೇꣳ

ಚಿನ್ನದ ಕೊಳಲಾꣳ ಹಿꣳಡುಕಂಡಿꣳ
ಯೆಯ್ಡೂ ಕೊಳಲಾꣳ ಹಿꣳಡುಕಂಡೀ
ವಂದ್ ಕರ್ಯಕಂಬಳೀ ಹಿಡುಕಂಡೀ
ಮಾಳುಗಿ ಹೊರಗೇꣳ ಬಂದಾನೇ
"ಕೇಳು ಕೇಳೇ ನನ್ನ ತಾಯೇꣳ
ಮತ್ ನೂꣳರೊಂದೇ ಗೋವುಗೊಳೇ
ಮೇಯ್ಸೇಕೇ ಹೋಗ್ತೆ ತಾಯೇꣳ"

ಅಂದ್ ಹೇಳಿ ನುಡಿದ್ ನಡುದಾನೆ
ಕೊಟ್ಲಿ ಬಾಗಿಲುಕ್ ಹೋsಗನೇ
ಬಾಗ್ಲಾs ತಗುದನೇs
ಚಿನ್ನದ ಕೊಳಲಾs ನುಡಿಸಾನೇ
ನೂರೊಂದೇs ಗೋವುಗೊಳೇs
ಸಾsಲಾಗೀs ಹೊರಟಾವೇss
ಆsಗುಡ್ಡೀs ಹತ್ತಾವೇs
ಮಾಗುಡ್ಡೀ ಮುರುಕ್ಲೀಗೀs
ಮಾನಾಡ ಬಯ್ಲಿಗೂ ನೆಡುದಾವೇs
ಕಟ್ಟೆಸುತ್ತೇs ಮೇಯತಾವೇ
ಕಟ್ಟೆಮೇಗೇs ಹತ್ತಾನೇs
ಕಟ್ಟೆಮೇಗೇs ಹತ್ತನ್ ಹುಡುಗಾs
ಕರಿಯಕಂಬಳೀs ಹಾಸಾನೇ
ಕಂಬ್ಳಿಮೇಗೇs ಕೂsತಾsನೇs
ಚಿನ್ನದ ಕೊಳಲಾ ನುಡಿಸೂತಾs
ಕಟ್ಟೆ ಮೇಲೆ ವರುಗಾನೇs
ಆ ವೂರಾ ಅರ್ಸಿನ ಮಗಳಾ
ಅರುಸೀಗೇ ವಬ್ಬಳೆ ಮಗಳೂ
ಹನ್ನೆರಡ್ ವರುಸಾsಲಾsಗಿದವೇs
ಅವ್ಳಿಗ್ ವಪ್ಪಾ ಗಂಡ ಬರುಲಿಲ್ಲೆ
ಅಂದ್ಹೇಳೀs ಕೂsತಾsಳೇs
ಯೇಳುಪ್ಪರಗೀ ಮೇಲಾಕೆs
ಕೂತುಕಂಡೀs ಕೇಳಾsಳೇs
ಕೊಳಲುಲಿಯಾs ಕೇಳಾಳೇ
"ಕೇಳು ಕೇಳೋ ನನ್ನ ತಂದೇs
ಕೇಳುವಾಲ್ಯೋs ನನ್ನ ಮಾತಾ
ನನಗೊಪ್ಪಿದ ಗಂಡ ಬಂದಾs"

ಅಂರದ್ ಹೇಳಿ ನುಡಿದಾಳೋ
"ಅವ್ನ ಕರ್ಕಂಡಿ ಬರುಬೇಕೋ"
ಅಂದಾಕೆ ಹೇಳಳೇ
ಅರಸರೂ ಲಂಬವಾ
ಅಯ್ದುಜನ ಪೊಲೀಸ್ರ ಕಳುಹಾನೇ
"ಕೇಳು ಕೇಳೀ ಪೋಲೀಸ್ರೇ
ಮಾನಾಡಾ ಬಯ್ಲಲ್ಲೀ
ವಬ್ಬರಸಿನ ಮಗಲವ್ನ್ಯಂಬ್ರೋ
ಕೊಳಲ ದನ್ಯಾ ಕೇಳಾದೇ
ನನ ಮಗಳಿಗೊಪ್ಪಿದ ಗಂಡನಂಬ್ರೋ
ಅವಗ ಕರ್ಕಂಡಿ ಬಂದು ಕೊಡೀ"
ಅಟ್ಟೊಂದ ಮಾತಾ ಕೇಳಾರೇ
ಅಯ್ದು ಜನಾ ಪೊಲೀಸರೂ
ಮಾನಾಡ ಬಯ್ಲಿಗೆ ಹೋದಾರೇ

ಕಟ್ಟಿ ಬುಡಕೇ ಹೋಗಾರೆ
"ಕೇಳು ಕೇಳೋ ಯೆಲ ಹುಡ್ಗಾ
ಅರ್ಸುಗೋಳೂ ನಿನ್ನ ಕೂಡ
ಬರುವಕೇ ಹೇಳರೇ"
ಅಂದ ಹೇಳೀ ನುಡಿದಾರೇ
ಅಟ್ಟೊಂದ ಮಾತಾ ಕೇಳಿದವೋ
ನೂರೊಂದೂ ಗೋವುಗಳೇ
ವೋಡುತಾ ಬಂದಾವೇ
ಪೊಲೀಸ್ರಾ ಬಿಳುಸಾವೇ
ಬಿದ್ದು ಕಂತೀ ಯೆದ್ದು ಕಂತೀ
ಪೊಲೀಸ್ರೇ ವೋಡಿಬಂದ್ರೇ
"ಕೇಳು ಕೇಳೀ ಅರ್ಸುಗೊಳೇ

ನಮ್ಮ ಕೈಲೇ ಕೂಡಸ್ವಾಮೀ
ಅವ್ನ ನೂರೊಂದು ಗೋವುಗೊಳೇ
ನಮ್ಮಾರು ಬೆರ್ಸಕಂಡ್ ಬಂದೋ
ನಮ್ಗೆ ಅವ್ನ ಕರ್ಕಂಡ್ ಬರುಕೇ ಕೂಡ"
ಅಂದ್ ಹೇಳೀ ನುಡಿದಾರೇ
ಅಟ್ಟೊಂದ ಮಾತಾಕೇಳಕೆ ಅರ್ಸನ ಮಗಳು
ವಂದ ಹರವಾಣದಲ್ಲಿ ಹಣ್ಣು ಹಿಡುಕಂಡ್ಲು
ತಟ್ಟಿಲ್ ಹಾಲಾ ಹಿಡುಕಂಡ್ಲೇ
ಹಿಡುಕಂಡು ಬಂದಳೇ
"ನನ್ಗೊಪ್ಪದ ಗಂಡ ನಾನೇ ಕರ್ಕಂಡ್ ಬತ್ತೇ"
ಲಂದಳೇ ಬಂದಳೇ
ಮಾನಾಡ ಬಯ್ಲಲ್ಲೀ ಬರುತಾಳೇ
ಬತ್ತುದ್ದೇ ನೋಡಾವೇ
ನೂರೊಂದೇ ಗೋವುಗೊಳೇ
ನೂರೊಂದೇ ವೋಡಾವೇ
ಅರಸನ ಮಗಳ್ನ ಬೆರುಸಾವೆ
ಬಿದ್ದಕಂತೇ ಯೆದ್ದಕಂತೇ
ಮುಂಗಾಲಾ ಜರುಕಂತೀ
ತನ್ನ ಮನಿಗೇ ವೋಡಾಳೇ
ಯೇಳುಪ್ಪರ್ಗೀಗ್ ಹೋಗಳೇ
ಯೆಯ್ದು ಕಾಕೀ ಸಾಕಾಳೇ
ವಂದ್ ಚಿನ್ನದ ಮೂಜಿನ ಕಾಕ್ಯಲೇ
ವಂದುಕ್ಕಿನ ಮೂಜಿನ ಕಾಕ್ಯಲೇ
ಯೆಯ್ದ ಕಾಕೀ ಕಕರುದಾಳೇ
"ಕೇಳು ಕೇಳೇ ಯೆಲ ಕಾಕ್ಯೇ
ನಾ ಹಣ್ಣು ಹಾಲು ಕೊಟ್ಟಿ ಸಲುಗಿದ್ದೇ

"ನೀವ್ ಮಾನಾಡ ಬಯ್ಲಿಗೆ ಹೋಗಬೇಕೇಽ"
ಯೆಯ್ದು "ಕೊಳಲಾಽ ಕಸ್ಕಂಡ್ ಬನ್ನೀ"
ಅಟ್ಟೊಂದ್ ಮಾತಾ ಕೇಳ್ದಾ ಕಾಕೀಽ
ಮಾನಾಡ್ ಬಯ್ಲಿಗೇ ಹಾರಿ ಹೋದೋ
ಅಲ್ಲಿದ್ದ ಮರ್ನಮೇಗೆ ಕೂಽತಾವೇ
ಆಜಿವಂದೂಽ ಹಾಽರಿ ಕುಂತೋ
ಯಡಕೇ ಬಲಕೇ ಹಾರಿ ಕುಂತೋ

ಇವ ಕೊಳಲ ಕಚ್ಕಂಡ ವರುಗಿದಾಽ
ಯಡಕೆ ಬಲಕೆ ಹಾರಿ ಕೂತೋ
ಚಿನ್ನದ ಮೂಜ್ನಾ ಕಾಕಿ ಹೊಯ್ತೋ
ಚಿನ್ನದ ಕೊಳಲಾಽ ಕಚ್ಚಿಕಂತೋ
ಉಕ್ಕಿನ ಮೂಜಿನಾ ಕಾಕಿ ಹೋಗೀ
ಉಕ್ಕಿನಾ ಕೊಳುಲಾ ಕಸುಕಂತೂಽ
ಅರಸಿನ ಮನಿಗೇಽ ಹಾಽರ್ ಹೋದೋ
ಅರ್ಸನ ಮಗಳಕೂಡೆ ಹೊಟ್ವಾದೇ
ಕೊಳಲ್ ತಗದೀ ಹುಗ್ಸಕಂಡ್ಲೋಽ
ಕೊಳಲ ಕಚ್ಕಂಡ್ ಹೋಗುವಾಗೇಽ
ಹುಡ್ಗ ಕೂತ್ಕಂಡ್ ಕಂಽಡಾನೇ
ಯಾವ್ ಬದೀಗೇಽ ಹೋಯ್ತೊಲಂದೀ
ಕೂತಕಂಡೀಽ ಕಂಽಡವಾಽ
ಕಾಽಕ್ ಹೋದ ದಾರಿ ಹಿಡುದಾ
ಅರಸಿನ ಮನಿಗೀ ನೆಡ್ದಾನ್ ಹುಡ್ಗಾ
ಅರಸಿನ ಮನಿಗೇಽ ಹೋಗನೇಽ
ಅರಸಿನ ಮನಿಗೇಽ ಹೋದವಾ
ಯೇಳುಪ್ಪರಿಗೀಽ ಹಽತ್ತಾನೇಽ
ಅರಸನ ಮಗಳೇಽ ಈಽದ್ದಲ್ಲೇಽ

ಅಲ್ಲಿಗೇಽ ಹೋಗಿದನೇ
"ಕೇಳು ಕೇಳೇ ಲರ್ಸಿನ ಮಗಳೇಽ
ನಿನ್ನ ಕಾಽಕೀ ನನ್ನ ಕೊಳಲಾಽ
ಕಚ್ಚಕಂಡೀಽ ಬಂಽದವೇಽ
ಯೆಯ್ದು ಕಾಕೀಽ ಯೆಯ್ದೂ ಕೊಳಲಾಽ
ಕಚ್ಚುಗೊಂಡೀಽ ಬಂಽದಾವೇಽ
ಬೇಗದಿಂದೇ ಕೊಳಲ ಕೊಡೇ"
ಲಂದ್ಹೇಳೀಽ ನಡ್ದಾನ್ ಹುಡ್ಗಾಽ
ಯೇನೇನ್ ಹೇಳಿದ್ರೂ ಕೊಡಽನಿಲ್ಲೇಽ
"ಯಾರ ಕೈಲಿ ನಿನ್ನ ಕೊಳಲ ಕೊಟ್ಟಿದ್ಯೋ?"
ಅಂದ್ಹೇಳೀಽ ನುಡಿದಾಳೇಽ
ಅಟ್ಟೊಂದ ಮಾತಾಽ ಹೇಳಾಳೇಽ
ಅರುಸನಾರಽ ಕರುದಾಳೇಽ
"ಕೇಳು ಕೇಳೋ ನನ್ನ ತಂದೇ
ಯೆಯ್ದು ಜನ ಪೊಲೀಸ್ರ ಕರ್ಯೋ
ಹುಡುಗ್ಗೇಽ ಹೊಡ್ಯಲುಬೇಕೇ
ಬಚ್ಚಲ ಕಲ್ಲಡೀಗ್ ಹಾಕುಬೇಕೇಽ
ಅಂಽದ್ ಹೇಳೇಽ ನುಽಡೂದಾಽಳೇಽ"
ಅರುಸಾರೂ । ಅಂಽಬವ್ರಾ
ಯೆಯ್ದೂ ಜನನಾಽ ಪೊಲೀಸ್ರ ಕರದಾರಽ
ರುಂಽಡಽನೇಽ ಹೊಡಿಸಾರೇ
ಬಚ್ಲ ಕಲ್ಲಡೀಽ ಹಾಕೂಸಾರೆ
ನೂರೊಂದೂ ಗೋವ್ಗಳೇ
ದಾಽರೀನೂಽ ಕಂಽಡವೇಽ
"ನಮ್ಮೊಡಿಯಾಽ ಇಟ್ಲೊತ್ತಾರೂ
ಹಿಂಽತಿರುಗೀಽ ಬರುಲಿಲ್ಲ್ಽ"
ಅಂಽದ್ ಹೇಳೀ ನೂಽರೊಂದೂಽ
ಗೋವುಗೋಳು ನುಡಿತಾವೇಽ

ಅಟ್ಟಂದ ಮಾತಾ ಹೇಳಾವೇ
ಅರಸಿನ ಮನಿಗೆ ನೆಡುದಾವೇ
ಹೆರುಗಟ್ಟೆ ನಿತ್ತು ಕಂಡೀ
ಅಬ್ಬರಸೀ ಕೆಲುದಾಂವೇ
"ವಡ್ಯನ ಸಬುದ್ಯಾ ಎದಿಮ್ಯಾಲೇ
ಅಂದ್ ಹೇಳಿ ಕೆಲಿದಾವೇ
ಅರಸಿನ ಮಗಳೂ ಹೇಳುತಾಳೇ
"ಕೇಳು ಕೇಳೀ ಗೋವುಗಳೇ
ನಾನಾಗೇ ಹೋಗುರಾಗೇ
ನನ್ನಾರೂ ಹೊತ್ತಿರೀ
ಬೆರ್ಸು ಕಂಡೀ ಬಂದಿರೀ
ನಾ ಬಿದ್ಕಂತ್ ಯೆದ್ಕಂತಿ ಬಂದಿದೇ
ನಿನ್ನೊಡಿಯಾ ಅಂಬಾವಾ
ಬಚ್ಚಲ ಕಲ್ಲಡಿ ಮನುಗ್ಯಾನೇ"
ಅಟ್ಟಂದ ಮಾತಾ ಕೇಳವೆ ಗೋವು
ಬಚ್ಚಲ ಕಲ್ಲಾ ಮರಿಚಾವೇ
ಕುಂಡೀ ರುಂಡಾ ಮಂಡಿ ರುಂಡಾ
ರುಂಡ ರುಂಡಾ ಕೂಡ್ಸುಕಂಡೀ
ತೀಡುತಾವೇ। ಗೋವುಗಳೂ
ಹೊಡ್ಚು ಗಂಡೀ ಬರುತಾವೇ
ಮಾನಾಡ ಬಯ್ಲಿಗೂ ತಂದಾವೇ
ಕಟ್ಟಿಬುಡಕೇ ತಂದಹಾಂಗೇ
ರುಂಡಗೆ ರುಂಡಾ ಕೂಡ್ಸುತಾವೇ
ಕರ್ಯಕಂಬಳೀ ಮುಸುಗಿಟ್ಟೀ
ನೂರೊಂದ್ ಗೋವುಗಳೇ
ಸುತ್ತಮುತ್ತೇ ನಿತ್ತುಕಂಡೀ
ತೀಡುತಾವೇ ಮರ್ಗುತಾವೇ

ವಳಮುದ್ದಾತೀ ಕಾಲದಲ್ಲೀ
ಪಾರ್ವತಮ್ಮ ಪರಮೇಸ್ರದೇವ್ರೂ
ಮದ್ದಾತ್ರೀ ಕಾಲದಲ್ಲೇ
ಊರ ಸಂಚರಣೀಗ್ ಹೋಗುತಿರೇ
ಇವ್ರ ತೀಡೂದು ಕೇಳ್ಯರೇ
ಪಾರ್ವತಮ್ಮ ಅಂಬದೇ
"ಕೇಳು ಕೇಳೀ ನನ್ನ ಸ್ವಾಮಿ
ಅತ್ಲಾಗೆಲ್ಲೀ ತಿರ್ಸಕಂಡುಹೋತ್ರಿ?"
ಪರಮೇಸ್ರ ದೇವ್ರು ಅಡ್ಡಮಾರ್ಗ
ರತನಾರೂ ತಿರ್ಸಿಸ್ಕಂಡೀ
ಹೋಗುವಂತಾ ಸುಮೇದಲ್ಲೀ
ಪಾರ್ವತಮ್ಮ ಹೇಳುತಾದೇ
"ಕೇಳಿ ಕೇಳಿ ನನ್ನ ಸ್ವಾಮೀ
ಗೋವುಗೊಳೂ ತೀಡುತದ್ಯೇ
ಇದೇ ಮಾರ್ಗದಲ್ ಹೋಗುಬೇಕೇ"
ಯೇನೇನ್ ಹೇಳಿದ್ರೂ ಕೇಳದಿಲ್ಲೇ
"ನನುಗ್ ಹೊತ್ತಾರು ಗಳಿತಾದೇ"
ಅಂದ್ ಹೇಳಿ ಹೇಳುತಾದೇ
"ಮುಂದೆ ಹೊಪುಕೂ ಬಿಡ್ವದಿಲ್ಲೇ
ನೀವ್ ಆ ದಾರೀಲೀ ಹೋದರೇ
ನಾ ರತನ ಕೆಳಗೇ ಹಾರೂತೀನಿ
ನನ್ನ ಜೀವಾ ಕಳುಕಂತೇ"
ಅಂದ್ ಹೇಳಿ ಪಾರ್ವತಮ್ಮ ಹೇಳುತಾದೇ
ಯೇನೇನ್ ಹೇಳದ್ರೂ ಕೇಳುದಿಲ್ಲೇ
ಮಾನಾಡ ಬಯ್ಲಿಗೀ ಕರ್ಕಬಂದ್ರೂ

ನೂರೊಂದು ಗೋವು ತೀಡುತಾವೇ

"ಕೇಳು ಕೇಳಿ ಗೋವುಗೋಳೇಽ
ನಿಮಗ್ ಯೇನಾಯ್ತು?" ಅಂಽದಾರೇಽ
ಗೋವುಗೊಳೂಽ ಹೇಳುತಾವೇ
"ಕೇಳು ಕೇಳೀ ನನ್ನ ಸ್ವಾಮಿಽ
ನಂಗ್ ಬಾಳ ಆಸರಾಽ ಆಗುತದ್ಯೇ
ನಂಗಾಽಸುರಾ ಆಽಗುತದೇ
ನಾ ವಂದ್ ಗಿಂಡೀ ತುಂಬ್ಹಾಲ ಕರೀತೇನೇಽ
ಆಸ್ರಿಗ್ಹಾಲಾಽ ಕುಡುಕಂತೇಽ"
"ಕೇಳು ಕೇಳೇ ನನ್ನ ಮಡುದೀ
ಮುಂದಾರೂಽ ಹೋಗುವಾಽನೇಽ"
ಅಂದ್ ಹೇಳೀಽ ನುಡಿತಾರೇಽ
ಯೇನೇನ್ ಹೇಳಿದ್ರೂ ಕೇಳ್ವದಿಲ್ಲೇಽ
"ಮುಂದೆ ಹೋಗುಕೇ ಕೊಡಸ್ವಾಮೀ
ಲಾಸರಾಽ ಕುಡಿಽಬೇಕೇಽ"
ಅಂದ್ ಹೇಳೀ ನುಡಿದಾಳೇಽ
ಚಂಬಾರಽ ತಗುದಾಳೇಽ
ಯೆಯ್ಡು ದನುಗೊಳು ಲಿರುತಾವೇಽ
ಚಂಬ ತಕಂಡ್ ಹೋಗಳೆ
ಪುಣ್ಯದ ಕರವಾ ಪುಣ್ಯದ ದೇವೀಽ
ಲಕ್ಷಣ ಕರವಾಽ ಲಕ್ಷದವಾದೇವೀ
ಗಂಗೇಗೌರೀಽ ಅಕ್ಕ ತಂಗೀಽ
ನಾಽಕ ದನ್ಗಳು ಯಿರುತಿದ್ದೋಽ
ಎರಡ್ ಚಂಬ್ಹಾಲಽ ಕರುದಾಳೇಽ
ಎರಡ್ ಚಂಬ್ ಹಾಲಽ ಕಽರುಕಂಡೀ
ಗಂಡನ ಬುಡಕೇ ತಕ್ಕಂಡ್ ಹೋದಳೊ
"ಕೇಳಿ ಕೇಳೀಽ ನನ್ನ ಸ್ವಾಮೀ
ಆಽಸ್ರಿಗ್ ಹಾಲಾಽ ಕುಡೀರಿಸ್ವಾಮಿ"

“ಕೇಳು ಕೇಳೆ ನನ್ನ ಮಡದೀ
ನನ್ಗೆ ಆಸರ ಆಗುಲಿಲ್ಲೊ
ನೀನಾಽರೂ ಕುಡಿವ್ಯಾಲೇಽ”
ಅಂದ್ಹೇಳ್ ಪರಮೇಸ್ರ ದೇವ್ರು ನುಡೀತಾರೆಽ
ಏನೇನ್ಹೇಳಿದ್ದೂ ಕೇಳ್ವದಿಲ್ಲೇ
“ನೀವು ಕುಡಿದ್ರೇಽ ನಾನೇ ಕುಡಿತೇ”
ಅಂದ್ಹೇಳ್ । ಪಾರ್ವತಮ್ಮಾಽ ನುಡಿತಾಽಳೇ
ಯೇನ್ ಹೇಳಿದ್ರೂ ಕೇಳ್ವದಿಲ್ಲೇ
ಪರಮೇಸ್ರದೇವ್ರು ವಂದೇ ಮುಕ್ಕಳಾ
ವಂದೇ ಮುಕ್ಕಳ ಹಾಲು ಕುಡಿದಾರೇ
ಪಾರ್ವತಮ್ಗೆ ಕೊಟ್ಟಾರೇ
ಆಸ್ರಿಗ್ ಹಾಲಾಽ ಕುಡಿದಾಽದೇಽ
ಹಾಲಾಽದ್ರೂ ಕುಡಿಕಂಡೀಽ
“ಕೇಳಿ ಕೇಳೀಽ ಗೋವುಗಳೇಽ

ಯೇನ ಕಷ್ಟಾಽ ಬಂತು ನಿಮಗೆಽ?
ಚಂದದಿಂದೇ ಹೇಳುಬೇಕೇ”
ಪಾರ್ವತಮ್ಮಾಽ ಹೇಳುತಾಽದೇಽ
ಅಟ್ಟಂದ ಮಾತಾಽ ಕೇಳವ್ರೆಗೋವೂಽ
“ನಮ್ಮೊಡಿನ ಜೀವಽಽ ಮಾಡುಕೊಽಡೀ”
ಅಂದ ಹೇಳಿ। ಪಾದದ ಮೇಗೆಽ ಬಿಽದ್ದಾವೇಽ
ನೂರೊಂದೂ ಗೋವುಗೊಳೋಽ
ಪಾದದ ಮೇಲೆ ಬಿಽದ್ದಾವೇಽ
ಅಟ್ಟೊಂದ ಮಾತಾಽ ಕೇಳಾಽರೆಽ
ಮಂತ್ರದ ಗಿಂಡೀಽ ನೀರಚೆಲ್ಲೀಽ
ನಾಗುಬೆತ್ತಾಽ ಯೆಳಿದಾಽರೇಽ
ಹುಡುಗ ಯೆದ್ದೀಽ ಕೂಽತಾನೇ

"ಕೇಳೊ ಕೇಳೊ ನನ್ನ ಮಗನೇ
ಕೇಳೊ ಕೇಳೊ ನನ್ನ ಮಗನೇ
ನಿನ ತಂದೀ ಪಾದಾಽ ಹಿಡ್ಕ ಮಗನೇಽ
ನಿನ್ಗೆ ಲಾಯ್ಸಾ ಬೇಡು ಮಗನೇಽ"
ಅಂದ್ಹೇಳೀ ನುಡಿತಾಳೇಽ
ಅಟ್ಹೊಂದಽ ಮಾತಾಽ ಕೇಳಾನೆ ಹುಡ್ಗಾ
ಪರಮೇಸ್ರ ದೇವ್ರಾಽ ಪಾದ ಹಿಡ್ದಾಽ
"ನೀಽಜುವಯ್ಸಾಽಬೇಡ್ಕ ಮಗನೇಽ"
ಅಟ್ಹೊಂದೂಽ ಹೇಳೂರಾಗೇಽ
"ನಿಜುವಾಯ್ಸಾಽ ಕೊಟ್ಟಾರೇ
ನಿನಗಿನ್ನೇ ಸಾವೂ ಮರಣಾಽ
ನಿನಽಗಾಲೂಽ ಇಲ್ಲೆ ಮಗನೇಽ
ಸಾವು ಮರಣಾಽ ನಿನಗಿಲ್ಲೇಽ"
ಅಂದ್ಹೇಳಿ ನುಡುದಾರೇಽ
ರತಾವನ್ನೇ ಹಾರ್ಸುಕಂಡಿ
ರತಾವನ್ನೆ ಹಾರ್ಸಕಂಡ್ಹೋಽದರಪ
ಈ ಹುಡ್ಗ ಅಂಽಬವಾಽ
ಕಟ್ಟಿಮೇಗೇಽ ಕೂತ್ಕಂಡಾನೇ
ನೂರೊಂದು ಗೋವುಗೊಳೇಽ
ಯ್ಯೇನಂದ್ಽ ಹೇಳತಾವೇಽ
"ಕೇಳು ಕೇಳು ನನ್ನ ವಡ್ಯಾ
ನೀ ಕಟ್ಟಿಮೇಗೆ ಯಿರುತಿರೊ!
ನಾವರ್ಸಿನ ಮನೆಗೆ ಹೋಗಿ ಬತ್ತೋ
ನೀ ಕಟ್ಟಿ ಕೆಳಗೆ ಲಿಳಿಬೇಡಾ"
ಅಟ್ಹೊಂದ ಮಾತಾ ಹೇಳಲೆ ಗೋವು
ಚೆನ್ನದ ಕಾಽಲಾ ಬಸುವಯ್ಯಾಽ
ಬೆಳ್ಳಿಕಾಽಲಾ ಸಣಿವಾಽರಾಽ

ಯೆಯ್ದೂ ಗೋವು ವsಟ್ಟಾಗಿ
ಅರ್ಸಿನ ಮನಿಗೆ ಹೋsಗಾವೇ

ಮತ್ತಿದ್ದಾ ಗೋವುಗೊಳೊ
ಕಟ್ಟೆ ಬುಡಕೆs ನಿsತ್ತಾವೇ

ಇವ್ವೆಯ್ದು ಹೋಗಾವೆs
ಅರ್ಸಿನ ಮನಿಯಾs ಬುಡದಲ್ಲೀ
ಹೋಗುವಂತಾs ಸsಮೀದಲ್ಲೀ
ಅರ್ಸನ ಮಗಳೂ ಹೇಳುತಾಳೇ
"ವಡ್ಯಾನ ರುಂಡಾs ತಕ್ಕಂಡ್ ಹೋಗೀ
ಯೆಲ್ ಹಾಕಿ ಬಂsದೀರಿs
ನಿಮ್ಮಾರು ರುಂಡs ಹೊಡಿಸ್ತೇನೆs
ನೀವು ಮತ್ತೆ ಬsನ್ನಿ" ಅಂದ್ಲೂs
ಅಟ್ಟೊಂದ್ ಮಾತಾ ಕೇsಳಾವೇs
ಅರಸಿನ ಮನ್ಯಾ ಹೊಕ್ಕಾವೇs
ಅರಸಿನ ಮಗಳಾs ಸಿಗುದಾವೇs
ಅರಸೀನಾs ಸಿಗುದಾವೇs
ಮನ್ಯಾಗಿದ್ದೋರ್ನೆಲ್ಲಾ ಸಿಗುದಾವೆ
ಪೊಲೀಸ್ರಾ ಸಿಗುದಾವೇ
ಮನೆಯ ಮೆಟ್ಲಾs ಮಗುಚಾವೇ
ಹಿಂದು ತಿರುಗೀs ಬಂsದಾsವೇ
ಮಾನಾಡ ಬಯ್ಲಿಗೆ ಬಂsದಾವೇ
"ಕೇಳು ಕೇಳು ನಮ್ಮೊಡಿಯಾs
ನಿಮ್ಮ ವೈರೀs ತಗ್ದಿಕೆ ಬಂದೋs
ನಾವು ಅರಮನೀಗಿs ಹೋಗ್ವ ವಡಿಯಾs"
ಲಂದ್ ಹೇಳಿ ನುಡಿದಾsವೇs

ನೂರೊಂದು ಗೋವುಗಳೇS
ವಟ್ಟಾಗೀS ಲೆದ್ಯದ್ಯೋS
ವSಡಿನಕರೂSಕSಕಂಡಿ
ಲಾ ಗುಡ್ಡೀS ಹತ್ತಾವೇS
ಮಾಗುಡ್ಡೀS ಮರುಕ್ಲೀಗೇS
ತಮ್ಮ ಮನಿಗೇS ಬಂSದಾವೇ
ಸುಕಸಂತೋಸ್ದಲ್ ಇರುತಾರೇS
ತಾಯಿ-ತಂದೆಯೆಲ್ಲರೂ
ಸುಕಸಂತೋಸ್ದಲ್ಲಿರುತಾರೆ.

● **ಕೆಲವು ಪದಗಳ ವಿವರಣೆ**

| | | |
|---|---|---|
| ಅಬ್ಬೆ | = | ತಾಯಿಗೆ ಸಂಬೋಧನೆ |
| ಅಬ್ಬೇತಿದು | = | ತಾಯಿ ಹೇಳುತ್ತಾಳೆ |
| ಉಂಡಿಗೆ | = | ಊಟ ಮಾಡಿಕೊಂಡು |
| ಹಾಲ್ಹಲ್ಲು | = | ಹಾಲು ಹಲ್ಲು, ಚಿಕ್ಕವರಿರುವಾಗ ಬರುವ ಹಲ್ಲುಗಳು |
| ಸೆಂಡ | = | ಚಂಡ |
| ಚಮ್ಮದ ಕಿರುಮೆಟ್ಟು | = | ಚರ್ಮದ ಚಪ್ಪಲಿ |
| ಮೆಲಿ | = | ತಿನ್ನು, ಮೆಲಕಾಡಿಸು |
| ಕಿರಕಣ ಬೆರಳೂ | = | ಕಿರಿ ಬೆರೆಳು |
| ಚಂಚರಣಿ | = | ಸಂಚಾರ, ತಿರುಗಲು |
| ವಪ್ಪಾ | = | ಅನುರೂಪನಾದ |
| ಉಲಿ | = | ಧ್ವನಿ |
| ಮುಕ್ಕಳ | = | ಗುಟುಕು |

■ ಗೊಂಡರ ಹಾಡು

# ಎಲ್ ಆರ್ ಹೆಗಡೆ

## ಅಪ್ರಕಟಿತ ಸಂಗ್ರಹ ಮಾಲೆ

### ೯ ಸಮ್ಮಿಶ್ರ ಕಥನ ಗೀತೆಗಳು



ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಮಹಾಚೇತನ. ಅಧ್ಯಾಪನದಿಂದ ನಿವೃತ್ತಿಯಾದ ನಂತರ ತಮ್ಮೆಲ್ಲ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂರಕ್ಷಣೆಯ ಕೆಲಸಕ್ಕೇ ಮೀಸಲಿಟ್ಟಿದ್ದ ಸಮಾಜಜೀವಿ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅಪೂರ್ವ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆ, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅವರ ಅಧ್ಯಯನಗಳು ಅನನ್ಯ; ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಅಸಂಖ್ಯ.

ಈಗಾಗಲೇ ಅವರ 84 ಕೃತಿಗಳು ಪ್ರಕಟಣೆ ಕಂಡಿವೆ. ಅವರ ಅಪಾರ ಸಂಗ್ರಹದಲ್ಲಿ ಪ್ರಕಟವಾಗದ ಜಾನಪದ ಸಾಹಿತ್ಯ ಇನ್ನೂ ಸಾಕಷ್ಟಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಅಪ್ರಕಟಿತ ಸಾಹಿತ್ಯ ಸರಣಿಯನ್ನು ಈ ಮೂಲಕ ಆರಂಭಿಸಲಾಗಿದೆ. ಅವರ ಪುತ್ರಿ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್‌ರವರು ಈ ಸಂಗ್ರಹಗಳನ್ನು ನಾಡಿಗಾಗಿ ಸಂರಕ್ಷಿಸಿ, ಸಂಪಾದಿಸಿ ಕೊಟ್ಟಿದ್ದಾರೆ.

ಉಚಿತ ಪುಸ್ತಕ

ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ